


epaper - karnatakamalla.com

ಕರ್ನಾಟಕ ಮಲ್ಲ

TEL: 24715208, Fax:24715237 | ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ | KARNATAKA MALLA, MUMBAI

ಸಂಪುಟ : 35 ಸಂಚಿಕೆ : 146 ರವಿವಾರ 28-06-2026 ಬೆಲೆ: ₹ 6 ಪುಟಗಳು - 10

ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ



ಸೀಶೆಲ್ಸ್‌ನ ರಾಷ್ಟ್ರೀಯ ಸಸ್ಯೋದ್ಯಾನಕ್ಕೆ ನರೇಂದ್ರ ಮೋದಿ ಭೇಟಿ ನೀಡಿದಾಗ.

ಮನಸ್ಸಿನಲ್ಲಿನ ಪ್ರಮಾಣಿಕತೆ ನಮ್ಮ ಜೊತೆ ಇರೋವರೆಗೂ ಭಗವಂತ ನಮಗೆ ಯಾವಾಗಲೂ ಆಸರೆಯಾಗಿ ಇರ್ತಾನೆ.

3 ಬಹ್ರೇನ್ ಮೇಲೆ ಇರಾನ್ ಡ್ರೋನ್ ದಾಳಿ; ಹಾರ್ಮುಜ್ ಜಲಸಂಧಿಯಲ್ಲಿ ಹಡಗಿನ ಮೇಲೆ ಗುರಿ

ವಿಮಾನ ಪ್ರಯಾಣಕ್ಕಿಂತ ಪ್ರಾಮಾಣಿಕತೆ ಮುಖ್ಯ: ಉದ್ಧವ್ ಠಾಕ್ರೆಗೆ ಏಕನಾಥ್ ಶಿಂದೆ ಟಾಂಗ್ **5**

ಯಾರೋ ನನ್ನನ್ನು ಕೇಳಿದರು. ನಿನ್ನವರು ಯಾರೆಂದು? ನಾನು ನಗುತ್ತ ಹೇಳಿದೆ ಯಾರು ಬೇರೆಯವರಿಗಾಗಿ ನನ್ನನ್ನು ಕಡೆಗಣಿಸುವುದಿಲ್ಲವೋ ಅವರು.....

'ದೇಶದ್ರೋಹಿ'ಗಳನ್ನು ಸಮಾಧಿ ಮಾಡಿ ; ಜನತೆಗೆ ಉದ್ಧವ್ ಠಾಕ್ರೆ ಮನವಿ

ಯವತ್ಮಾಲ್ ಲೋಕಸಭಾ ಕ್ಷೇತ್ರಕ್ಕೆ ಮುಂದಿನ ಅಭ್ಯರ್ಥಿ ಘೋಷಿಸಿದ ಠಾಕ್ರೆ

ಹಿಂಗೋಲಿ,ಜೂ.27 - ತನ್ನ ಪಕ್ಷದ ಬಂಡಾಯ ಸಂಸದರ ಕ್ಷೇತ್ರಗಳಿಗೆ ಹೋಗುವ ಮೂಲಕ ಕಾರ್ಯಕರ್ತರನ್ನು ಮತ್ತೆ ಹೋರಾಡಲು ಪ್ರೇರೇಪಿಸುತ್ತಿರುವ ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು, ಪಕ್ಷಕ್ಕೆ ದ್ರೋಹಬಗೆದು ಶಿಂದೆಸೇನೆ ಸೇರಿದ ದೇಶದ್ರೋಹಿಗಳನ್ನು ಸಮಾಧಿ ಮಾಡುವಂತೆ ಜನತೆಗೆ ಮನವಿ ಮಾಡಿದರು.

6 ಮಂದಿ ಬಂಡಾಯ ಸಂಸದರ ಕ್ಷೇತ್ರಗಳಿಗೆ ಭೇಟಿಯ ಭಾಗವಾಗಿ ಇಂದು ಹಿಂಗೋಲಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಠಾಕ್ರೆ, ದೇಶದ್ರೋಹಿಗಳಿಗೆ ತಮ್ಮ ಸ್ಥಾನವನ್ನು ತೋರಿಸಿ ಮತ್ತೆ ಹೋರಾಡುವಂತೆ ಪಕ್ಷದ ಕಾರ್ಯಕರ್ತರಿಗೆ ಮನವಿ ಮಾಡಿದರು.

ಹಿಂಗೋಲಿ ಸಂಸದ ನಾಗೇಶ್ ಪಾಟೀಲ್ ಅಷ್ಟಿಕರ್ ವಿರುದ್ಧ ಠಾಕ್ರೆ ಬಲವಾದ ಟೀಕಾದಾಳಿ ನಡೆಸಿ, ಇಬ್ಬರು ಅಥವಾ ಐದು ಸಂಸದರು ಅಥವಾ ಶಾಸಕರು ಹೋದರೆ ಶಿವಸೇನೆ ಮುಗಿದಿದೆ ಎಂದು ಅನೇಕ ಜನರು ಭಾವಿಸುತ್ತಾರೆ. ಶಾಸಕರು ಮತ್ತು ಸಂಸದರು ಬೇರೆ ಎಂದು ಅವರಿಗೆ ಅರ್ಥವಾಗುತ್ತಿಲ್ಲ. ಕಟ್ಟರ್ ಶಿವಸೈನಿಕರು ನನ್ನ ಜತೆಗಿದ್ದಾರೆ ಎಂದರು.



ಹಿಂಗೋಲಿ ಕ್ಷೇತ್ರದಲ್ಲಿ ಸತತವಾಗಿ ಎರಡು ಬಾರಿ ದ್ರೋಹ ನಡೆದಿತ್ತು. ಹಿಂದಿನ ಸಂಸದ ಹೋದರು. ಅವರು ಕದ್ದುಮುಚ್ಚಿ ಬರಬೇಕಾಯಿತು. ಆಯ್ಕೆಯಾಗಲು ಅವರು ಜನರ ಮುಂದೆ ಹೇಗೆ ಹೋಗಬಹುದು. ಅವರು ಚುನಾವಣೆಗೆ ನಿಲ್ಲುವ ಧೈರ್ಯವನ್ನೂ ಮಾಡಲಿಲ್ಲ. ಇದು ಹಿಂಗೋಲಿಯ ಸಂಪ್ರದಾಯ. ಇಲ್ಲಿಗೆ ಅಥವಾ ಅಲ್ಲಿಗೆ ಯಾರು ಹೋದರೂ, ಶಿವಸೈನಿಕರು ಯಾವಾಗಲೂ ಶಿವಸೇನೆಯೊಂದಿಗೆ ಇರುತ್ತಾರೆ ಎಂದು ಠಾಕ್ರೆ ಹೇಳಿದರು. ಸಂಸತ್ತಿನಲ್ಲಿ ಮೂರನೇ ಎರಡರಷ್ಟು ಬಹುಮತಕ್ಕಾಗಿ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ಮಹಿಳಾ ಮೀಸಲಾತಿ ಮತ್ತು ಸಂವಿಧಾನವನ್ನು ಬದಲಾಯಿಸಲು ಅವರು ಇದನ್ನು ಮಾಡುತ್ತಿದ್ದಾರೆ. ನಾವು ಅವರನ್ನು ತಡೆದಿದ್ದೆವು. ಅದಕ್ಕಾಗಿಯೇ ಅವರು ನಮ್ಮಲ್ಲಿ ಬಿರುಕು ಮೂಡಿಸಲು ಆರಂಭಿಸಿದ್ದಾರೆ.ಕ್ಷೇತ್ರಮರುವಿಂಗಡಣೆ ಮುಗಿದ ಬಳಿಕ ನಿಮ್ಮ ಮತ ಮತ್ತು ನನ್ನ ಮತಕ್ಕೆ ಯಾವುದೇ ಮೌಲ್ಯವಿರುವುದಿಲ್ಲ. ಎಲ್ಲವೂ ಉತ್ತರ ಭಾರತದ ಕೈಗೆ ಹೋಗುತ್ತದೆ ಎಂದು ಠಾಕ್ರೆ ಹೇಳಿದರು. **3ನೇ ಪುಟಕ್ಕೆ**

'ಪ್ರಶ್ನೆ ಪತ್ರಿಕೆ ಸೋರಿಕೆ', ಮೂವರ ಸೆರೆ; ಇಂದು ನಡೆಯಬೇಕಿದ್ದ ಮಹಾರಾಷ್ಟ್ರ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಮುಂದೂಡಿಕೆ

ಪುಣೆ/ಥಾಣೆ, ಜೂ.27 - ಥಾಣೆ ಜಿಲ್ಲೆಯ ಭಿವಂಡಿ ಪಟ್ಟಣದಲ್ಲಿ ನಡೆಸಲಾದ ಕಾರ್ಯಾಚರಣೆ ಸಮಯದಲ್ಲಿ ಕೆಲವು ವ್ಯಕ್ತಿಗಳು ನಿಜವಾದ ಪ್ರಶ್ನೆ ಪತ್ರಿಕೆಗೆ ಹೋಲುವ ಹಲವಾರು ಪ್ರತಿಗಳನ್ನು ಹೊಂದಿರುವುದು ಕಂಡುಬಂದ ಬಳಿಕ ಮಹಾರಾಷ್ಟ್ರದಲ್ಲಿ ರವಿವಾರ ನಡೆಯಬೇಕಿದ್ದ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)- 2026ನ್ನು ಮುಂದೂಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಈ ಪ್ರಕರಣದಲ್ಲಿ ಮೂವರನ್ನು ಬಂಧಿಸಲಾಗಿದ್ದು, ಪ್ರಮುಖ ಆರೋಪಿ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ಭಿವಂಡಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಮಹಾರಾಷ್ಟ್ರ ರಾಜ್ಯ ಪರೀಕ್ಷಾ ಮಂಡಳಿ (ಎಂಎಸ್‌ಸಿಇ),ನೀಡಿದ ಹೇಳಿಕೆಯ ಪ್ರಕಾರ, ಸಂಪೂರ್ಣ ಪಾರದರ್ಶಕತೆಯೊಂದಿಗೆ ಈ ಪರೀಕ್ಷೆಯನ್ನು ನಡೆಸಲು ದೃಢವಾಗಿ ಬದ್ಧವಾಗಿರುವುದಾಗಿ ಹೇಳಿದೆ.

'ಪರಿಸ್ಥಿತಿಯ ಗಂಭೀರತೆ ಮತ್ತು ಆಳವಾದ ತನಿಖೆಯ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಜೂ.28ರಂದು ನಿಗದಿಯಾಗಿದ್ದ ಪರೀಕ್ಷೆಯನ್ನು ಮುಂದೂಡಲಾಗಿದೆ' ಎಂದು ಅದು ಪ್ರಕಟಣೆಯಲ್ಲಿ ತಿಳಿಸಿದೆ.

ಥಾಣೆ ಜಿಲ್ಲಾಡಳಿತದ ಪ್ರಕಾರ, ಶನಿವಾರ ಮುಂಜಾನೆ ಭಿವಂಡಿ ಪೊಲೀಸರು ಪರೀಕ್ಷಾ ಪತ್ರಿಕೆಗಳ ಬಗ್ಗೆ ಅನಧಿಕೃತ ಮಾಹಿತಿಯನ್ನು ಹೊಂದಿರುವ ವ್ಯಕ್ತಿಗಳ ಬಗ್ಗೆ ಗೌಪ್ಯ ಗುಪ್ತಚರ ಮಾಹಿತಿ ಪಡೆದ ಬಳಿಕ ಈ ಕಾರ್ಯಾಚರಣೆ ನಡೆಸಿದಾಗ ಇಂತಹ ನಿಯಮ ಉಲ್ಲಂಘನೆ ಬೆಳಕಿಗೆ ಬಂದಿತು. **3ನೇ ಪುಟಕ್ಕೆ**

ಎಸ್‌ಐಟಿ ರಚನೆಗೆ ಮುಖ್ಯಮಂತ್ರಿ ಫಡ್ನವೀಸ್ ಆದೇಶ

ಮುಂಬಯಿ,ಜೂ.27 - ಟಿಇಟಿ ಪರೀಕ್ಷೆಗೆ ಕೇವಲ 24 ಗಂಟೆಗಳು ಬಾಕಿಯಿದ್ದಾಗ, ಅದರ ಪ್ರಶ್ನೆ ಪತ್ರಿಕೆ ಸೋರಿಕೆಯಿಂದಾಗಿ ರಾಜ್ಯದಲ್ಲಿ ಐದು ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳ ಕಠಿಣ ಪರಿಶ್ರಮ ಹಾಳಾಗಿದ್ದು, ಈ ವಿಷಯದ ತನಿಖೆಗಾಗಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಎಸ್‌ಐಟಿ ರಚಿಸಲು ಆದೇಶಿಸಿದ್ದಾರೆ. ಈ ಎಸ್‌ಐಟಿಯನ್ನು ಥಾಣೆ ಜಂಟಿ ಸಿಪಿ ಪಂಜಾಬ್‌ರಾವ್ ಉಗ್ಲೆ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗುವುದು.

ಶಿಕ್ಷಣ ಸಚಿವ ದಾದಾ ಭೂಸೆ ರಾಜೀನಾಮೆಗೆ ಆಗ್ರಹ

ಟಿಇಟಿ ಪ್ರಶ್ನೆ ಪತ್ರಿಕೆ ಸೋರಿಕೆಯ ಹೊಣೆ ಹೊತ್ತು ಶಿಕ್ಷಣ ಸಚಿವ ದಾದಾ ಭೂಸೆ ರಾಜೀನಾಮೆ ನೀಡಬೇಕು ಎಂದು ಕೊಲ್ಹಾಪುರ ಶಿಕ್ಷಕ ಕ್ಷೇತ್ರದ ಎಂಎಲ್‌ಸಿ ಜಯಂತ್ ಅಸ್ಗಾಂವ್ಕರ್ ಅವರು ಒತ್ತಾಯಿಸಿದ್ದಾರೆ.

ಟಿಇಟಿ ಪತ್ರಿಕೆ ಸೋರಿಕೆಯಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಾಕಷ್ಟು ತೊಂದರೆ ಅನುಭವಿಸಿದ್ದಾರೆ. ಆದಾಗ್ಯೂ, ಸರಕಾರವು ಶಾಸಕರು ಮತ್ತು ಸಂಸದರ ಖರೀದಿ ರಾಜಕೀಯದಲ್ಲಿ ನಿರತವಾಗಿದೆ ಎಂದು ಅಸ್ಗಾಂವ್ಕರ್ ಆರೋಪಿಸಿದರು.ಇದೇ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು,ಮಹಾರಾಷ್ಟ್ರ ಶಿಕ್ಷಕರ ಅರ್ಹತಾ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಮುಂದೂಡಿಕೆಯನ್ನು ಯುವಜನರ ಭವಿಷ್ಯದ 'ಕಳ್ಳತನ' ಎಂದು ಬಣ್ಣಿಸಿದ್ದಾರೆ. 'ಮತ್ತೊಂದು ಪ್ರಶ್ನೆ ಪತ್ರಿಕೆ ಸೋರಿಕೆ. ಮತ್ತೊಂದು ಪರೀಕ್ಷೆ ರದ್ದು. ಈ ಬಾರಿ ಮಹಾರಾಷ್ಟ್ರದ ಟಿಇಟಿ' ಎಂದು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಟಿಇಟಿ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆಗೆ ವ್ಯಾಪಕ ಖಂಡನೆ: ಪೊಲೀಸ್ ತನಿಖೆ ಪ್ರಕಾರ ಕಠಿಣ ಕ್ರಮ ; ಸಚಿವ ದಾದಾ ಭೂಸೆ ಭರವಸೆ

ಮುಂಬಯಿ,ಜೂ.27 - ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಬಳಿಕ ಈಗ ಮಹಾರಾಷ್ಟ್ರದಲ್ಲಿಯೂ ಕೂಡ ಟಿಇಟಿ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಕಾರಣದಿಂದಾಗಿ, ಎರಡು ಲಕ್ಷಕ್ಕೂ ಹೆಚ್ಚು ನಿರೀಕ್ಷಿತ ಶಿಕ್ಷಕರ ಶ್ರಮ ಹಾಳಾಗಿದೆ. ಈ ನಿಟ್ಟಿನಲ್ಲಿ, ಸರಕಾರವನ್ನು ಎಲ್ಲಾ ಹಂತಗಳಿಂದ ಟೀಕಿಸಲಾಗುತ್ತಿದೆ. ಶಿಕ್ಷಕರ ನೇಮಕಾತಿಗಾಗಿ ಟಿಇಟಿ ನಡೆಸಲಾಗುತ್ತದೆ. ಇದರಿಂದಾಗಿ, ಈ ಪರೀಕ್ಷೆಗೆ ಹಾಜರಾದ 2 ಲಕ್ಷಕ್ಕೂ ಹೆಚ್ಚು ಶಿಕ್ಷಕರು ಸಾಕಷ್ಟು ತೊಂದರೆ ಅನುಭವಿಸಿದ್ದಾರೆ.



ನಾಳೆ ನಡೆಯಲಿದ್ದ ಟಿಇಟಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಿಂದಾಗಿ ಪರೀಕ್ಷೆಗೆ ತಯಾರಿ ನಡೆಸಿದ್ದ ಲಕ್ಷಾಂತರ ಶಿಕ್ಷಕರ ಶ್ರಮ ಸಂಪೂರ್ಣವಾಗಿ ವ್ಯರ್ಥವಾಗಿದೆ ಎಂದು ಶಿಕ್ಷಕರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಲಕ್ಷಾಂತರ ಶಿಕ್ಷಕರು, ನಾವು ಕೆಟ್ಟ ವ್ಯಕ್ತಿಯ ಶಿಕ್ಷೆಯನ್ನು ಅನುಭವಿಸುತ್ತಿದ್ದೇವೆ, ಇದು ಅತ್ಯಂತ ಖಂಡನೀಯ.ಈ ಘಟನೆಯ ಬಗ್ಗೆ ತಕ್ಷಣದ ತನಿಖೆ ಮತ್ತು ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಮಾಧ್ಯಮಿಕ ಶಾಲಾ ಶಿಕ್ಷಕ ಹೇಮಂತ್ ಗಡ್ಕರಿ ಒತ್ತಾಯಿಸಿದರು.

ರಾಜ್ಯ ಪರೀಕ್ಷಾ ಮಂಡಳಿಯಲ್ಲಿ ಪಾರದರ್ಶಕತೆ ಉಳಿದಿದೆಯೇ? 2022-23ರಲ್ಲಿ ಟಿಇಟಿ ಹಗರಣ ಬಹಿರಂಗವಾದಾಗ, ಪರೀಕ್ಷಾ ಮಂಡಳಿ ಹೆಚ್ಚು ಜಾಗರೂಕರಾಗಬೇಕಿತ್ತು. ಆದಾಗ್ಯೂ, ಪರೀಕ್ಷಾ ಮಂಡಳಿಯ ದುರಾಡಳಿತ ನಿಂತಿಲ್ಲ. ಟಿಇಟಿ ಪರೀಕ್ಷೆಯನ್ನು ನಡೆಸುವ ಜವಾಬ್ದಾರಿಯನ್ನು ರಾಜ್ಯ ಪರೀಕ್ಷಾ ಮಂಡಳಿಯಿಂದ ತೆಗೆದುಹಾಕಬೇಕು. ಅದೇ ರೀತಿ, ಶಾಲಾ ಶಿಕ್ಷಣ ಇಲಾಖೆ ಪರೀಕ್ಷಾ ಮಂಡಳಿಗೆ ನೀಡಿರುವ ಪವಿತ್ರ ಪೋರ್ಟಲ್ ಮೂಲಕ ಶಿಕ್ಷಕರ ನೇಮಕಾತಿಯ ಜವಾಬ್ದಾರಿಯನ್ನು ಕೂಡ ತೆಗೆದುಹಾಕಬೇಕು.ಅಭ್ಯರ್ಥಿಗಳು ಇನ್ನು ಮುಂದೆ ಪರೀಕ್ಷಾ ಮಂಡಳಿಯಲ್ಲಿ ನಂಬಿಕೆಯನ್ನು ಹೊಂದಿಲ್ಲ ಎಂದು ಯುವಶಾಹಿ ಸಂಘದ ಅಧ್ಯಕ್ಷೆ ಅಶ್ವಿನಿಕ ಕಡು ತಿಳಿಸಿದ್ದಾರೆ. **3ನೇ ಪುಟಕ್ಕೆ**

ದಿಲ್ಲಿ, ಜಮ್ಮು ಕಾಶ್ಮೀರದಲ್ಲಿ ಪ್ರಬಲ ಭೂಕಂಪನ ಅಫ್ಘಾನಿಸ್ಥಾನದಲ್ಲಿ 6.2 ಪ್ರಮಾಣದ ಭೂಕಂಪನ

ಹೊಸದಿಲ್ಲಿ, ಜೂ. 27- ದಿಲ್ಲಿ ಎನ್‌ಸಿಆರ್ ಮತ್ತು ಜಮ್ಮು ಕಾಶ್ಮೀರದಲ್ಲಿ ಶನಿವಾರ ಸಂಜೆ ಪ್ರಬಲ ಭೂಕಂಪನ ಸಂಭವಿಸಿದ್ದರೆ ಅಫ್ಘಾನಿಸ್ಥಾನದಲ್ಲಿ ರಿಕ್ಟರ್ ಮಾಪಕದಲ್ಲಿ 6.2 ಪ್ರಮಾಣದ ಭೂಕಂಪನ ಉಂಟಾಗಿದೆ.

ದೇಶದ ರಾಜಧಾನಿ ದಿಲ್ಲಿ ಎನ್‌ಸಿಆರ್ ಪ್ರದೇಶ ಮತ್ತು ಕಾಶ್ಮೀರ ಕಣಿವೆಯಲ್ಲಿ ಭೂಕಂಪನದಿಂದ ಭಯಭೀತರಾದ ಜನರು ಮನೆಗಳು ಮತ್ತು ಕಟ್ಟಡಗಳಿಂದ ಹೊರಗೆ ಧಾವಿಸಿದ್ದಾರೆ. ಆದರೆ ಜೀವಹಾನಿ ಅಥವಾ ಆಸ್ತಿಪಾಸ್ತಿ ಹಾನಿ ಕುರಿತಂತೆ ತಕ್ಷಣಕ್ಕೆ ಯಾವುದೇ ಮಾಹಿತಿಗಳು ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಫ್ಘಾನಿಸ್ತಾನದಲ್ಲಿ ತಡ ಸಂಜೆ ಗಂಟೆ 7.04ಕ್ಕೆ ಪ್ರಬಲವಾಗಿ ಭೂಮಿ ಕಂಪಿಸಿದ್ದು ಜನರು ಆತಂಕದಿಂದ ಕಟ್ಟಡಗಳಿಂದ ಹೊರಗೆ ಧಾವಿಸಿದ್ದಾರೆ. ಹಲವೆಡೆ ಹಾನಿಯಾಗಿರುವ ಬಗ್ಗೆ ವರದಿಗಳು ಬಂದಿವೆ. ಸಾವು ನೋವಿನ ಬಗ್ಗೆ ಇನ್ನಷ್ಟೇ ಖಚಿತವಾಗಬೇಕಿದೆ ಎಂದು ಮೂಲಗಳು ಹೇಳಿವೆ.


ನೈಋತ್ಯ ಅಫ್ಘಾನಿಸ್ತಾನದ ಜುರ್ಮ್‌ನಲ್ಲಿ ಭೂಮಿಯ 215 ಕಿ.ಮೀ. ಆಳದಲ್ಲಿ ಭೂಕಂಪನ ಕೇಂದ್ರ ಬಿಂದು ಪತ್ತೆಯಾಗಿದೆ ಎಂದು ರಾಷ್ಟ್ರೀಯ ಭೂಕಂಪನ ಮಾಪಕ ಕೇಂದ್ರ ಹೇಳಿದೆ.

ಎರಡು ದಿನಗಳ ಹಿಂದೆ ವೆನೆಜುವೆಲಾದಲ್ಲಿ ಭಾರೀ ಭೂಕಂಪಕ್ಕೆ 500ಕ್ಕೂ ಹೆಚ್ಚು ಜನರು ಸಾವನ್ನಪ್ಪಿ ಸಾವಿರಾರು ಜನರು ಗಾಯಗೊಂಡಿದ್ದಾರೆ. ನೂರಾರು ಕಟ್ಟಡಗಳು ನೆಲಸಮಗೊಂಡಿದ್ದು ರಕ್ಷಣಾ ಕಾರ್ಯ ಇನ್ನೂ ಮುಂದುವರಿದಿದೆ.

ಶನಿವಾರ ಅಫ್ಘಾನಿಸ್ತಾನದಲ್ಲಿ ಮತ್ತು ದಿಲ್ಲಿ ಸೇರಿದಂತೆ ಉತ್ತರ ಭಾರತದ ಹಲವೆಡೆ ಮಾತ್ರವಲ್ಲದೆ ಪಾಕಿಸ್ತಾನ, ಚೀನಾ, ತಜಕಿಸ್ತಾನ, ಉಜ್ಬೆಕಿಸ್ತಾನ ಕಿರ್ಗಿಸ್ಥಾನ ಮತ್ತು ತುರ್ಕಿಸ್ತಾನದಲ್ಲಿಯೂ ಪ್ರಬಲ ಭೂಕಂಪನ ಉಂಟಾಗಿದೆ. ಭೂಕಂಪನದ ಕೇಂದ್ರ ಬಿಂದು ಅಫ್ಘಾನಿಸ್ತಾನದಲ್ಲಿ ಭೂಮಿಯ 215 ಕಿಮೀ ಆಳದಲ್ಲಿ ಪತ್ತೆಯಾಗಿರುವುದರಿಂದ ಅಂತಹ ಅಪಾಯ ಸಂಭವಿಸಿಲ್ಲ ಎಂದು ಮೂಲಗಳು ಹೇಳಿವೆ. ಅಫ್ಘಾನಿಸ್ತಾನದಲ್ಲಿ ಭೂಕಂಪಿಸುವುದು ಸಾಮಾನ್ಯವಾಗಿದೆ.

ರಾಮಮಂದಿರ ದೇಣಿಗೆ ಲೂಟಿ ಪ್ರಕರಣ ಬಗ್ಗೆ ನಿಷ್ಪಕ್ಷಪಾತದ ತನಿಖೆ: ಟ್ರಸ್ಟ್ ಖಜಾಂಚಿ ಗಿರಿ

ಲಕ್ನೋ,ಜೂ.27- ಅಯೋಧ್ಯೆ ರಾಮಮಂದಿರದ ದೇಣಿಗೆ ಲೂಟಿ ಆರೋಪಗಳ ಕುರಿತಂತೆ ನಿಷ್ಪಕ್ಷಪಾತ ತನಿಖೆ ನಡೆಯಲಿದೆ ಎಂದು ಶನಿವಾರ ಹೇಳಿರುವ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಸಮಿತಿ, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಟ್ರಸ್ಟಿ ಅನಿಲ್ ಮಿಶ್ರಾ ರಾಜೀನಾಮೆ ನೀಡಿದ್ದಾರೆ ಎಂದು ಹೇಳಿದೆ.



ಈ ಕುರಿತಂತೆ ಹೇಳಿಕೆಯೊಂದನ್ನು ನೀಡಿರುವ ಖಜಾಂಚಿ ಗೋವಿಂದ ದೇವ್‌ಗಿರಿ ಅವರು, ಟ್ರಸ್ಟ್‌ಗೆ ಎರಡು ರಾಜೀನಾಮೆ ಪತ್ರಗಳು ಬಂದಿವೆ. ಆ ಬಗ್ಗೆ ಟ್ರಸ್ಟ್‌ನ ಮುಂದಿನ ಸಭೆಯಲ್ಲಿ ನಿರ್ಧರಿಸಲಾಗುವುದು ಎಂದು ತಿಳಿಸಿದ್ದಾರೆ. ಬೆಳವಣಿಗೆಗಳಿಂದ ಟ್ರಸ್ಟಿಗಳು 'ಆಘಾತ ಗೊಂಡಿದ್ದಾರೆ' ಮತ್ತು ಆರೋಪಗಳ ಬಗ್ಗೆ ನಿಷ್ಪಕ್ಷಪಾತ ತನಿಖೆಯನ್ನು ದೃಢಪಡಿಸುವುದಕ್ಕೆ ಕರ್ತವ್ಯ ಬದ್ಧರಾಗಿದ್ದಾರೆಂದು ಹೇಳಿರುವ ಗಿರಿ, ರಾಮಭಕ್ತರ ನಂಬಿಕೆಗಳನ್ನು ಮರಳಿ ಸ್ಥಾಪಿಸುವುದಾಗಿ ಹೇಳಿದ್ದಾರೆ.

ರಾಮಮಂದಿರ ದೇಣಿಗೆಗಳ ಲೂಟಿ ಪ್ರಕರಣದಲ್ಲಿ ಗುರುವಾರ ರಾತ್ರಿ ಪೊಲೀಸರು 8 ಆರೋಪಿಗಳನ್ನು ಬಂಧಿಸಿದ್ದಾರೆ. ಶ್ರೀರಾಮ ದೇವಸ್ಥಾನದಲ್ಲಿ ಕಳೆದ ಕೆಲವು ದಿನಗಳಿಂದ ನಡೆದಿರುವ ಘಟನೆಗಳನ್ನು ಕೇಳಿ ನಾವು ಆಘಾತಗೊಂಡಿದ್ದೇವೆ. ನೋವು ಅನುಭವಿಸಿದ್ದೇವೆ ಮತ್ತು ಅತ್ಯಂತ ದುಃಖಿತರಾಗಿದ್ದೇವೆ. ಎಲ್ಲ ರಾಮ ಭಕ್ತರ ಮತ್ತು ರಾಮ ಸೇವಕರ ಪ್ರತಿನಿಧಿಗಳಾಗಿ ಇಲ್ಲಿ ಸೇವೆ ಮಾಡುತ್ತಿರುವ ನಾವು ಪಾರದರ್ಶಕ ತನಿಖೆ ನಡೆಸುವ ಬಗ್ಗೆ ನಾವು ಭಗವಾನ್ ರಾಮನ ಭಕ್ತರಿಗೆ ಭರವಸೆ ನೀಡುತ್ತೇವೆ ಎಂದು ಗಿರಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ದೇವಸ್ಥಾನಕ್ಕೆ ಖಾಸಗಿ ವ್ಯಕ್ತಿಗಳು ನೀಡಿರುವ ಬೆಳ್ಳಿ ಇಟ್ಟಿಗೆಗಳು, ಆಭರಣಗಳು ಮತ್ತು ಇತರ ವಸ್ತುಗಳೆಲ್ಲ ಸರಿಯಾದ ಲೆಕ್ಕಪತ್ರಗಳೊಂದಿಗೆ ಟ್ರಸ್ಟ್‌ನಲ್ಲಿ ಸುರಕ್ಷಿತವಾಗಿ ಸರಿಯಾದ ಲೆಕ್ಕಪತ್ರಗಳೊಂದಿಗೆ ಟ್ರಸ್ಟ್‌ನಲ್ಲಿ ಸುರಕ್ಷಿತವಾಗಿ ಇವೆ ಎಂದು ಖಜಾಂಚಿ ಹೇಳಿದ್ದಾರೆ. ಭವಿಷ್ಯದಲ್ಲಿ ಇಂತಹ ದುರದೃಷ್ಟಕರ ಪರಿಸ್ಥಿತಿಗಳು ಮತ್ತೆ ಉಂಟಾಗಲಾರದು ಎಂದು ನಾವು ಆಶ್ವಾಸನೆ ನೀಡುತ್ತೇವೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕೆಂದು ನಾವು ಆಗ್ರಹಿಸುತ್ತೇವೆ. ಸಮಾಜದ್ರೋಹಿ ಧಾರ್ಮಿಕ ವಿರೋಧಿ ಮತ್ತು ಸ್ವಾರ್ಥ ಶಕ್ತಿಗಳು ಸನಾತನ ಧರ್ಮದ ಗೌರವಕ್ಕೆ ಧಕ್ಕೆ ತರುವ ಪ್ರಯತ್ನ ಈಡೇರುವುದಕ್ಕೆ ನಾವು ಅವಕಾಶ ನೀಡುವುದಿಲ್ಲ ಎಂದು ಗಿರಿ ತಿಳಿಸಿದ್ದಾರೆ. ಕವಿದ ಮೋಡಗಳು ಕರಗುತ್ತವೆ ಎಂಬ ವಿಶ್ವಾಸ ನಮಗಿದೆ. ಕತ್ತಲೆ ಮರೆಯಾಗಲಿದೆ. ಸೂರ್ಯನ ನಿಜವಾದ ಬೆಳಕು ಬೆಳಗಲಿದೆ. ಭಗವಾನ್ ರಾಮನ ಬಲಿಷ್ಠ ಭಕ್ತಿಯ ಪ್ರವಾಹ ನಿರಂತರವಾಗಿ ಯಾವುದೇ ತಡೆಯಿಲ್ಲದೆ ಹರಿಯಲಿದೆ ಎಂದು ಅವರು ಹೇಳಿದ್ದಾರೆ.

ಮೊಹರಂ ವೇಳೆ ಸಾಮೂಹಿಕ ವಿಷಪ್ರಾಶನಕ್ಕೆ ಸಂಚು ರೂಪಿಸಿದ್ದ ವ್ಯಕ್ತಿಯ ಬಂಧನ 14,900 ವಿಷ ತುಂಬಿದ ಕ್ಯಾಪ್ಸೂಲ್ ವಶ; ಘಟನೆ ಹಿಂದೆ ದೊಡ್ಡ ಪಿತೂರಿಯ ಶಂಕೆ

ಮುಂಬಯಿ, ಜೂ. 27 - ಮೊಹರಂ ಅಂದ್ರೆ ಮಹಮದೀಯರ ಮೊದಲ ತಿಂಗಳ ಆರಂಭ. ಇಲ್ಲಿಂದ ಇಸ್ಲಾಂ ಹೊಸ ವರ್ಷ ಆರಂಭವಾಗುತ್ತದೆ. ಈ ಹಬ್ಬಕ್ಕೆ ಚಾರಿತ್ರಿಕ ಮತ್ತು ಧಾರ್ಮಿಕ ಹಿನ್ನೆಲೆಯೂ ಇದೆ. ಈ ತಿಂಗಳನ್ನು ಇಸ್ಲಾಂನಲ್ಲಿ ಹೊಸ ವರ್ಷ ಅಂತಾ ಆಚರಣೆ ಮಾಡಲಾಗುತ್ತದೆ. ಅದಕ್ಕಾಗಿ ಈ ಸಂದರ್ಭದಲ್ಲಿ ಮುಸ್ಲಿಂ ಬಾಂಧವರು ಪುಣ್ಯದ ಕೆಲಸಗಳನ್ನು ಕೈಗೊಳ್ಳುತ್ತಾರೆ. ಆದರೆ ಈ ಸಂದರ್ಭದಲ್ಲಿ ಸಾಮೂಹಿಕ ವಿಷಪ್ರಾಶನಕ್ಕೆ ಸಂಚು ರೂಪಿಸಿದ್ದ ವ್ಯಕ್ತಿಯೊಬ್ಬ ಮುಂಬಯಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.



ಹೌದು.. ಮೊಹರಂ ಮೆರವಣಿಗೆಯ ಸಂದರ್ಭದಲ್ಲಿ ಇಲಿಪಾಷಾಣ ತುಂಬಿದ ಕ್ಯಾಪ್ಸೂಲ್‌ಗಳನ್ನು ವಿತರಿಸಲು ಮುಂದಾಗಿದ್ದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಯನ್ನು ಪುಣೆ ನಿವಾಸಿ, ಬಣ್ಣದ ವ್ಯಾಪಾರಿ ಫಯಾಜ್ ಪ್ರೇಮ್‌ಜಿ ಎಂದು ಗುರುತಿಸಲಾಗಿದೆ. ಆರೋಪಿಯಿಂದ ಸುಮಾರು 14,900 ವಿಷ ತುಂಬಿದ ಕ್ಯಾಪ್ಸೂಲ್‌ಗಳನ್ನ ವಶಪಡಿಸಿಕೊಂಡಿದ್ದು, ಘಟನೆ ಹಿಂದೆ ದೊಡ್ಡ ಪಿತೂರಿಯೇ ಇದೆ ಎಂದು ಶಂಕಿಸಲಾಗಿದೆ.

ಮೊಹರಂ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನರನ್ನು ಗುರಿಯಾಗಿಸಿಕೊಂಡಿದ್ದ ಶಂಕಿತ ಸಾಮೂಹಿಕ ವಿಷಪ್ರಾಷನಕ್ಕೆ ಸಂಚು ರೂಪಿಸಿದ್ದ. ಅದಕ್ಕಾಗಿ ವಿಷಕಾರಿ 'ಜಿಂಕ್ ಫಾಸ್ಫೈಡ್' ಕ್ಯಾಪ್ಸೂಲ್‌ಗಳನ್ನು ವಿತರಿಸಲು ಮುಂದಾಗಿದ್ದ. ಒಂದು ವೇಳೆ ಶಂಕಿತನ ಯೋಜನೆ ಸಕ್ಸಸ್ ಆಗಿದ್ದರೆ, ಸಾವಿರಾರು ಜೀವಗಳು ಬಲಿಯಾಗುತ್ತಿದ್ದವು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿಗಳ ಪ್ರಕಾರ, ಸಲ್ಮಾನ್ ಸಯ್ಯದ್ ಎಂಬ ವ್ಯಕ್ತಿಯೊಬ್ಬ ಒಂದು ಕ್ಯಾಪ್ಸೂಲ್ ಸೇವಿಸಿ, ಅಸ್ವಸ್ಥರಾಗಿದ್ದರು. ಆ ದಿನ ಬೆಳಗ್ಗೆ 4 ಗಂಟೆ ಸುಮಾರಿಗೆ, ವಾಂತಿ, ಹೊಟ್ಟೆ ನೋವಿನಿಂದ ಆತ ಬಳಲುತ್ತಿದ್ದಾನೆ ಅನ್ನೋ ಬಗ್ಗೆ ಮಾಹಿತಿ ಬಂದಿತ್ತು. ಈ ಕುರಿತು ಹೆಚ್ಚಿನ ತನಿಖೆ ಆರಂಭಿಸಿದಾಗ ಪ್ರಕರಣ ಬೆಳಕಿಗೆ ಬಂದಿತ್ತು. ಆರೋಪಿ ಬಂಧನದ ಬಳಿಕ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಡಿಸಿಪಿ (ಕೇಂದ್ರ ವಲಯ 1) ಜಯಂತ್ ಮೀನಾ, ಮೊಹರಂ ಮೆರವಣಿಗೆ ಸಂದರ್ಭದಲ್ಲಿ ಅನುಮಾನಾಸ್ಪದ ವ್ಯಕ್ತಿಯೊಬ್ಬ ಓಡಾಡುತ್ತಿದ್ದು, ಔಷಧಿ ಮಾದರಿಯ ಕ್ಯಾಪ್ಸೂಲ್‌ಗಳನ್ನು ವಿತರಿಸುತ್ತಿದ್ದಾನೆ ಅನ್ನೋ ಮಾಹಿತಿ ಬಂದಿತ್ತು. ಕೂಡಲೇ ಸ್ಥಳಕ್ಕೆ ಧಾವಿಸಿದ ಪೊಲೀಸರು ಆರೋಪಿಯನ್ನು ಬಂಧಿಸಿದರು ಎಂದು ತಿಳಿಸಿದರು.

ಬಂಧಿತನಿಂದ ಆಧಾರ್ ಮತ್ತು ಪಾಸ್‌ಪೋರ್ಟ್ ದಾಖಲೆಗಳೊಂದಿಗೆ ಆತನ ಬಳಿಯಿದ್ದ 'ಜಿಂಕ್ ಫಾಸ್ಫೈಡ್' ವಿಷ ತುಂಬಿದ 14,900 ಕ್ಯಾಪ್ಸೂಲ್‌ಗಳನ್ನೂ ವಶಪಡಿಸಿಕೊಳ್ಳಲಾಯ್ತು. ಕ್ಯಾಪ್ಸೂಲ್‌ಗಳನ್ನು ವಿತರಿಸುವ ಮುನ್ನವೇ ಅಧಿಕಾರಿಗಳು ವಶಕ್ಕೆ ಪಡೆದಿರುವುದು ದೊಡ್ಡ ದುರಂತವನ್ನ ತಪ್ಪಿಸಿದಂತಾಗಿದೆ.

ಬಂಧಿತ ಫಯಾಜ್ ಕುರಿತು ತನಿಖೆ ನಡೆಸಿದ ಪೊಲೀಸರು, ಸ್ಫೋಟಕ ರಹಸ್ಯಗಳನ್ನು ಬಯಲಿಗೆಳೆದಿದ್ದಾರೆ. ಮೊಹರಂ ಮೆರವಣಿಗೆ ಗುರಿಯಾಗಿಸಿಕೊಂಡಿದ್ದ ಫಯಾಜ್, 50 ಕೆಜಿ ಜಿಂಕ್ ಫಾಸ್ಫೈಡ್ ಆರ್ಡರ್ ಮಾಡಿ ತರಿಸಿಕೊಂಡಿದ್ದ. ತನ್ನ ಮನೆಯಲ್ಲೇ ಪಾಯಿಸನ್ ಇಟ್ಟುಕೊಂಡು ತಲಾ 1 ಗ್ರಾಂ ವಿಷವನ್ನು ಪ್ರತಿ ಕ್ಯಾಪ್ಸೂಲ್‌ನಲ್ಲಿ ತುಂಬಿಸಿದ್ದ. ಒಟ್ಟು 30,000 ಕ್ಯಾಪ್ಸೂಲ್‌ಗಳನ್ನ ತಯಾರಿಸಲು ಫಯಾಜ್ ಉದ್ದೇಶಿಸಿದ್ದ. ಅದಕ್ಕೂ ಮುನ್ನ ತಯಾರಿಸಲಾಗಿದ್ದ 14,900 ಕ್ಯಾಪ್ಸುಲ್‌ಗಳನ್ನು ವಿತರಿಸಲು ಸಂಚು ರೂಪಿಸಿದ್ದ. ಅಷ್ಟರಲ್ಲಿ ಸಿಕ್ಕಿಬಿದ್ದು, ಮಹಾ ದುರಂತವೊಂದು ತಪ್ಪಿದಂತಾಗಿದೆ.





ಕೋನಾರ್ಕ್ ಎಕ್ಸ್‌ಪ್ರೆಸ್‌ನಲ್ಲಿ ಒಡಿಶಾದ ಹೃದಯದೊಳಗೆ .....



ಜಗನ್ನಾಥಪುರಿ ಹೋಗುವ ಇಚ್ಛೆ ಕಳೆದ ಎರಡು ವರುಷಗಳಿಂದ ಇತ್ತು. ಅದು ದುರ್ಗಾಪರಮೇಶ್ವರಿ ವೆಲ್ಫೇರ್ ಟ್ರಸ್ಟಿನ ಮಹಿಳಾ ವಿಭಾಗದವರು ಮತ್ತು ದತ್ತಗುರು ಟ್ರಾವೆಲರ್ಸ್ ಕೈಗೊಂಡ ಪುರಿಯಾತ್ರೆಯಿಂದ ಸಾಕಾರಗೊಂಡಿತು. ಒಮ್ಮೆ ನನ್ನಕ್ಕ ಪ್ರೇಮ ಮನೆಗೆ ಬಂದಾಗ ತಾನು ಜಗನ್ನಾಥ ಪುರಿ ಹೋಗುತ್ತಿರುವ ವಿಷಯವನ್ನು ತಿಳಿಸಿದಳು. ತಟ್ಟನೆ 'ನಾನೂ ಬರಬಹುದಾ?' ಎಂದು ಕೇಳಿದೆ. ಅದಕ್ಕೆ ಅವಳು ಉತ್ಸುಕತೆಯಿಂದ 'ನೀನು ಬಂದರೆ ನನಗೆ ಬಹಳ ಸಂತೋಷ, ಆದರೂ ಒಮ್ಮೆ ಕೇಳಿ ನೋಡುತ್ತೇನೆ' ಎಂದವಳೇ ಬಹುಶಃ ಟ್ರೇನಲ್ಲಿ ಕುಳಿತಂತೆ ಮೆಸೇಜ್ ಮಾಡಿ ಕೇಳಿರಬೇಕು. ನನಗೆ ಹತ್ತೇ ನಿಮಿಷದಲ್ಲಿ ಬರುವ ಅನುಮತಿ ಸಿಕ್ಕಿತು. ನನ್ನ ಸಂತೋಷಕ್ಕೆ ಎಳೆಯೇ ಇಲ್ಲದಾಯಿತು. ಮನೆಯವರಿಂದಲೂ ಸಹಮತಿ ಸಿಕ್ಕಿತು. ಆದರೂ ಮನಸ್ಸಿನ ಮೂಲೆಯಲ್ಲಿ ಮೊದಲ ಬಾರಿಗೆ ಅಪರಿಚಿತರೊಂದಿಗೆ ದೂರದ ಪ್ರವಾಸ ಕೈಗೊಂಡಿದ್ದೇನೆ..... ಎಂಬ ಸಣ್ಣ ಅಳುಕು ಇದ್ದಿತ್ತು. ಅದಕ್ಕೆ ನನ್ನ ಪತಿ ಸದಾನಂದರು 'ಹೇಮಾ ಎಷ್ಟು ಸಮಯದಿಂದ ಅಲ್ಲಿಗೆ ಹೋಗುವ ಆಸೆ ಇತ್ತಲ್ಲ ? ಈಗ ಕಾಲ ಕೂಡಿ ಬಂದಿದೆ. ಜಗನ್ನಾಥ ದೇವರನ್ನು 'ಭಾವೋ ದೇವಾ' ಎನ್ನುವುದೂ ಇದಕ್ಕೇ . ಭಕ್ತರ ಮನವನ್ನು ಚೆನ್ನಾಗಿ ಅರಿತವನವನು. ಇನ್ನು ಹಿಂದೆಮುಂದೆ ನೋಡದೆ ಹೋಗು' ಎಂದು ಒತ್ತಿ ಹೇಳಿದರು.

ನಮ್ಮ ಟ್ರೈನ್ ಕೋನಾರ್ಕ್ ಎಕ್ಸ್‌ಪ್ರೆಸ್. ನಾವು ಒಟ್ಟಿಗೆ ಮೂವತ್ತೂರು ಮಂದಿ ಇದ್ದೆವು. ನಾಲ್ಕು ಜನ ಥಾಣೆಯಿಂದ ಟ್ರೈನ್ ಹತ್ತುವವರಿದ್ದೆವು. ಮಧ್ಯಾಹ್ನ 2:30 ಕ್ಕೆ ಥಾಣೆ ಸ್ಟೇಷನ್ ಬರಬೇಕಾದ ಟ್ರೇನ್ ನಲವತ್ತು ನಿಮಿಷ ಲೇಟ್ ಬಂತು. ನಾವು ನಮ್ಮ ಲಗೇಜುಗಳನ್ನು ಸೀಟಿನ ಕೆಳಗೆ ತುರುಕಿಸಿ ಕುಳಿತ ಸ್ವಲ್ಪ ಸಮಯದಲ್ಲಿ ಕಲ್ಯಾಣ್ ಸ್ಟೇಷನ್ ಬಂತು. ನಾನು ನನ್ನಕ್ಕನ ಕೈಯಲ್ಲಿದ್ದ ಸಾಮಾನುಗಳನ್ನು ತೆಗೆದುಕೊಳ್ಳಲು ಬಾಗಿಲ ಕಡೆ ಹೊರಟೆ. ನೋಡ್ತೇನೆ ನಮ್ಮವರೆಲ್ಲಾ ಬಹಳ ಹಿಂದಿನಿಂದ ಎರಡೂ ಹೆಗಲಲ್ಲಿ ಹಾಗೂ ಕೈಯಲ್ಲಿ ಬ್ಯಾಗುಗಳನ್ನು ಸಿಕ್ಕಿಸಿ ಧಾವಿಸುತ್ತಿದ್ದಾರೆ. ಗಡಿಬಿಡಿಯಿಂದ ಸಿಕ್ಕ ಸಿಕ್ಕಾ ಕೋಚಿನೊಳಗೆ ನುಗ್ಗುತ್ತಿದ್ದರು. 'ಬೇಗ ಬನ್ನಿ ಲಗೇಜ್ ಒಳಗೆ ಕೊಡಿ' ಎನ್ನುವ ಮಾತುಗಳು ಪರಸ್ಪರ ಸಹಾಯಮಾಡುತ್ತಿರುವ ದೃಶ್ಯ, ಗದ್ದಲ ಎಲ್ಲಾ ಸೇರಿ ಆ ಕ್ಷಣವನ್ನು ತುಂಬಾ ಜೀವಂತವನ್ನಾಗಿಸಿತು. ಎಲ್ಲರೂ ಬಂದರೆಂದು ಖಚಿತವಾದ ಬಳಿಕ ನಾವೆಲ್ಲಾ ನಿಟ್ಟುಸಿರು ಬಿಟ್ಟೆವು.



ನಮ್ಮ ಪ್ರವಾಸದ ಸಂಚಾಲಕಿ ಅನುಪಮಾ ಶೆಟ್ಟಿ, ಸುಭಾಸ್ ಶೆಟ್ಟಿ , ಹೇಮಾನಂದ್ ದೇವಾಡಿಗ , ನಂದಾ ಶೆಟ್ಟಿ , ಹಾಗೂ ಇತರ ಸಂಗಡಿಗರು ನಮ್ಮ ಬಳಿಬಂದು ಪರಿಚಯಿಸಿಕೊಂಡರು. ನಮ್ಮ ಸೀಟುಗಳು ಒಂದೇ ಕೋಚ್‌ನಲ್ಲಿದ್ದರಿಂದ ನಮಗೆಲ್ಲಾ ಬಹಳ ಅನುಕೂಲವಾಯಿತು. ಸ್ವಲ್ಪ ಸಮಯದಲ್ಲೆ ಶುರುವಾಯಿತು ಒಂದು ಬದಿಯಲ್ಲಿ ತಿಂಡಿಗಳ ವಿತರಣೆ. ಒಬ್ಬೊಬ್ಬರು ಒಂದೊಂದು ಬಗೆಯ ತಿಂಡಿಗಳನ್ನು ತಂದಿದ್ದರು .ಇನ್ನೊಂದು ಬದಿಯಲ್ಲಿ ಅಂತಾಕ್ಷರಿ ಗಾಯನ , ಭಜನೆ , ನೃತ್ಯಗಳ ಮನೋರಂಜನಾ ಸರಣಿ. ಮರುದಿನ ರಾತ್ರಿ 1 ಗಂಟೆಗೆ ನಾವು ಭುವನೇಶ್ವರಿ ಸ್ಟೇಷನ್ ಹೋಗಿ ತಲುಪಿದೆವು. ಅಲ್ಲಿಂದ ನಮ್ಮ ಹೋಟೆಲಿಗೆ ಒಂದುವರೆ ಗಂಟೆಯ ಹಾದಿ ಇತ್ತು. ಆಗಲೇ ನಾವು ತುಂಬಾ ಆಯಾಸಗೊಂಡಿದ್ದೆವು.

ಮರುದಿನ ಬೆಳಿಗ್ಗೆ 8:30 ಗಂಟೆ ತಿಂಡಿ ತಿಂದು ಹೋಟೆಲಿಗೆ 2 ಕಿ. ಮೀ ಅಂತರದಲ್ಲಿರುವ ಪುರಿ ಬೀಚ್ ಹೋಗುವುದಾಗಿ ಹೇಳಿದ್ದರು. ಸಮುದ್ರತೀರಕ್ಕೆ ಹೋಗುವ ಉತ್ಸುಕತೆಯಿಂದ ನಾನು ಬೇಗನೆ ಎದ್ದಿದ್ದೆ . ಒಡಿಸ್ಸಾದಲ್ಲಿ ಬೆಳಿಗ್ಗೆ 5, 5: 30ಕ್ಕೆ ಸೂರ್ಯೋದಯವಾಗುತ್ತದೆ . ನಾವಿದ್ದ ಹೊಟೇಲು ಮಾರ್ಕೆಟಿನ ಮಧ್ಯ ಇದ್ದುದ್ದರಿಂದ ಬೆಳಗ್ಗೆ 3 ಗಂಟೆಗೇ ಮಾರಾಟಗಾರರ ಸದ್ದು ಗದ್ದಲ ಕೇಳಿಸುತ್ತಿತ್ತು. ಈ ಮಧ್ಯೆ ಬೆಳಗ್ಗೆ ನಾವು ಪುರಿ ಬೀಚಿಗೆ ಹೋಗಿ ಒಂದಿಷ್ಟು ಫೋಟೋ ಕ್ಲಿಕ್ಕಿಸಿ , ನೀರಲ್ಲಿ ಆಟ ಆಡಿ ಬೇಗನೆ ಬಂದು ಫ್ರೆಶ್ ಊಟ ಮಾಡಿ ಸ್ವಲ್ಪ ಮಲಗಿದೆವು . ಎದ್ದು ನಾವು ಬಂದಿರುವ ಉದ್ದೇಶ ಶ್ರೀ ಜಗನ್ನಾಥ ದೇವರ ದರುಶನಕ್ಕೆ ಹೋಗಲಿತ್ತು.

ನಮ್ಮ ಪ್ರವಾಸದ ಗೈಡ್ ರಾಹುಲ್,ದೇವಸ್ಥಾನಕ್ಕೆ ಮಹಿಳೆಯರೆಲ್ಲಾ ಸೀರೆ ಉಡುವುದಾಗಿ ಮತ್ತು ಪುರುಷರು ಮುಂಡು ಧರಿಸಲು ಹೇಳಿದ್ದರು . ನಾವು ಪೂರ್ವತಯಾರಿಯಲ್ಲಿಯೇ ಬಂದಿರುವುದರಿಂದ ಎಲ್ಲರೂ ಹಾಗೆಯೇ ಸಣ್ಣ ಬ್ಯಾಗಲ್ಲಿ ಒಂದಷ್ಟು ಹಣ ಹಿಡಿದುಕೊಂಡು ಹೊರಟೆವು. ಜನಸಂದಣಿಯಲ್ಲಿ ನಮ್ಮವರ ಗುರುತಿಗಾಗಿ ಹಳದಿಬಣ್ಣದ ಟೊಪ್ಪಿ ಧರಿಸಿದ್ದೆವು. ನಾವು ಷೇರ್‌ಆಟೋ ಮಾಡಿ ಮೊದಲು ಬೇಡಿ ಹನುಮಾನ್ ಎಂಬ ದೇವಸ್ಥಾನಕ್ಕೆ ಹೋದೆವು. ಪುರಿಯ ಅತ್ಯಂತ ಪ್ರಸಿದ್ಧ ದೇವಾಲಯಗಳಲ್ಲಿ ಒಂದಾಗಿದೆ . ಇದನ್ನು ದರಿಯ ಮಹಬೀರ್‌ಎಂದೂ ಕರೆಯುತ್ತಾರೆ. ಸ್ಥಳೀಯ ಪುರಾಣದ ಪ್ರಕಾರ ಜಗನ್ನಾಥನ ದರ್ಶನಕ್ಕೆ ಬರುವ ಭಕ್ತರನ್ನು ಮತ್ತು ನಗರವನ್ನು ಸಮುದ್ರದ ಅಲೆಗಳಿಂದ ರಕ್ಷಿಸಲು ಹನುಮಂತನನ್ನು ಕಾವಲು ಇರಿಸಿದ್ದರು . ಆದರೆ ಹನುಮಂತ ಆಗಾಗ ಪ್ರಭು ಜಗನ್ನಾಥನ ದರುಶನಕ್ಕಾಗಿ ಹೋಗುತ್ತಿದ್ದರಿಂದ ದೇವರು ಹನುಮಂತನನ್ನು ಬಂಗಾರದ ಸಂಕೋಲೆಯಿಂದ ಕಟ್ಟಿಹಾಕಿದರಂತೆ.ಅವರನ್ನು ಸಮುದ್ರದ ಮೇಲೆ ಕಾವಲು ಕಾಯಲು ಜಗನ್ನಾಥ ದೇವರು ನಿಯೋಜಿಸಿದ್ದಾರಂತೆ. ಈ ದೇವಸ್ಥಾನದಲ್ಲಿರುವ ಹನುಮಂತನ ಕೈ ಮತ್ತು ಕಾಲುಗಳನ್ನು ಸರಪಳಿಯಿಂದ ಬಂಧಿಸಿರುವಂತೆ ಕೆತ್ತಲಾಗಿದೆ . ನಾವೆಲ್ಲಾ ಅಲ್ಲಿಂದ ಮುಂದೆ ಜಗನ್ನಾಥ ದೇವರ ಮಂದಿರಕ್ಕೆ ಹೊರಟೆವು .

ಜಗನ್ನಾಥ ದೇವರ ಮಂದಿರ:ಭಾರತದ ಪೂರ್ವ ಕರಾವಳಿಯಲ್ಲಿರುವ ಈ ಮಂದಿರದ ಮುಖ್ಯ ಆಕರ್ಷಣೆ ಇಲ್ಲಿಯ ಗೋಪುರದಲ್ಲಿ ಏರಿಸುವ ಧ್ವಜ. ಈ ಧ್ವಜಕ್ಕೆ (ನೆಲಧ್ವಜ ಅಥವಾ ಪತಿತಪಾವನ ಬಾನಾ) ಎಂದು ಕರೆಯಲಾಗುತ್ತದೆ . ಇದಕ್ಕೆ ಸಂಬಂಧ ಪಟ್ಟಂತೆ ಹಲವಾರು ರೋಮಾಂಚಕ ಮತ್ತು ವೈಜ್ಞಾನಿಕವಾಗಿ ವಿಷಯಗಳನ್ನು ರಾಹುಲ್ ಅವರು ದಾರಿಯಲ್ಲಿಯೇ ನಮಗೆ ಹೇಳಿದ್ದರು. ಅವರು ತಮ್ಮ ರುಮಾಲನ್ನು ಗಾಳಿಗೆ ಹಾರಲು ಬಿಟ್ಟಾಗ ಅದು ಎಡಬದಿಗೆ ಹಾರಿದರೆ ಮಂದಿರದ ಬಾವುಟವು ಬಲಬದಿಗೆ ಹಾರುತ್ತಿತ್ತು .

ಜಗನ್ನಾಥ ದೇವಾಲಯದ ಮೇಲಿರುವ ಧ್ವಜವು ಯಾವಾಗಲೂ ಗಾಳಿ ಬೀಸುವ ದಿಕ್ಕಿನ ವಿರುದ್ಧ ದಿಕ್ಕಿನಲ್ಲಿ ಹಾರುತ್ತದೆ. ಇದು ಇಂದಿಗೂ ಒಂದು ದೊಡ್ಡ ರಹಸ್ಯವಾಗಿದೆ. ಪ್ರತಿದಿನ ಧ್ವಜ ಬದಲಾಯಿಸುವ ವಿಶಿಷ್ಟ ಸಂಪ್ರದಾಯ.ಕಳೆದ 800 ವರ್ಷಗಳಿಂದಲೂ ಒಂದು ದಿನವೂ ತಪ್ಪದಂತೆ ಈ ಧ್ವಜವನ್ನು ಪ್ರತಿದಿನ ಬದಲಾಯಿಸಲಾಗುತ್ತದೆಯಂತೆ . 'ಚೋಳ' ಸಮುದಾಯಕ್ಕೆ ಸೇರಿದ ವಿಶೇಷ ಅರ್ಚಕರು ಯಾವುದೇ ಸುರಕ್ಷತಾ ಕವಚಗಳಿಲ್ಲದೆ (ಹಗ್ಗ ಅಥವಾ ಏಣಿಯ ಸಹಾಯವಿಲ್ಲದೆ) ಬರಿಗೈಯಲ್ಲೇ ಸುಮಾರು 45ಮಹಡಿಗಳಷ್ಟು ಎತ್ತರವಿರುವ (214 ಅಡಿ) ಮುಖ್ಯ ಗೋಪುರವನ್ನು ಹತ್ತಿ ಧ್ವಜವನ್ನು ಬದಲಾಯಿಸುತ್ತಾರೆ. ಇದನ್ನೆಲ್ಲಾ ಕಣ್ಣಾರೆ ಕಂಡ ನಾವು ಮಂತ್ರ ಮುಗ್ಧರಾಗಿ ನಿಂತಿದ್ದೆವು . 'ಜೈ ಜಗನ್ನಾಥ' ಎಂಬ ಘೋಷಣೆಗಳು ನಮ್ಮ ಹೃದಯವನ್ನೇ ಭಕ್ತಿಯಿಂದ ತುಂಬಿಸಿಬಿಟ್ಟವು. ಈ ಧ್ವಜವು ತ್ರಿಕೋನ ಆಕಾರದಲ್ಲಿದ್ದು, ಸಾಮಾನ್ಯವಾಗಿ ಹಳದಿ ಅಥವಾ ಕೆಂಪು ಬಣ್ಣದ್ದಲ್ಲಿತ್ತು . ಧ್ವಜದ ಮೇಲೆ ಚಂದ್ರ ಮತ್ತು ಸೂರ್ಯನ ಚಿತ್ರಗಳು ಕಾಣುಸುತ್ತಿತ್ತು . ದೂರದಲ್ಲೇ ಕಾಣಿಸುತ್ತಿದ್ದ ಸೂರ್ಯನ ಬೆಳಕಿನಲ್ಲಿ ಅತೀ ಸುಂದರ ವಾಗಿ ಹೊಳೆಯುತ್ತಿತ್ತು. ನಮ್ಮ ಕುತೂಹಲವನ್ನು ಕಂಡು ಸ್ಥಳೀಯ ಜನರು 'ಒಂದು ವೇಳೆ ಒಂದು ದಿನ ಈ ಧ್ವಜ ಬದಲಾಯಿಸುವುದನ್ನು ಮರೆತರೆ ಅಥವಾ ತಪ್ಪಿದರೆ, ಮುಂದಿನ 18 ವರ್ಷಗಳ ಕಾಲ ದೇವಾಲಯವನ್ನು ಮುಚ್ಚಬೇಕಾಗುತ್ತದೆ ಎಂಬ ಕಟ್ಟುನಿಟ್ಟಿನ ನಿಯಮವಿದೆ' ಎಂದರು.

ಈ ಧ್ವಜವನ್ನು 'ಪತಿತಪಾವನ ಬಾನಾ' ಎಂದು ಕರೆಯಲಾಗುತ್ತದೆ. ಇದರ ಅರ್ಥ 'ಪಾಪ ಕೃತ್ಯಗಳನ್ನು ಮಾಡಿದವರನ್ನು ಉದ್ಧರಿಸುವ ಧ್ವಜ' ಎಂದು. ದೇವಾಲಯದ ಒಳಗೆ ಹೋಗಲು ಸಾಧ್ಯವಾಗದ ಭಕ್ತರು ಅಥವಾ ದೂರದಲ್ಲಿರುವವರು ಈ ಧ್ವಜವನ್ನು ನೋಡಿ ನಮಸ್ಕರಿಸಿದರೆ, ಜಗನ್ನಾಥನ ದರ್ಶನ ಪಡೆದಷ್ಟೇ ಪುಣ್ಯ ಸಿಗುತ್ತದೆ ಎಂಬ ನಂಬಿಕೆಯಿದೆ.

ವಿಜ್ಞಾನಕ್ಕೇ ಸವಾಲೊಡ್ಡುವ ಈ ಧ್ವಜ ಮತ್ತು ಇಡೀ ದೇವಾಲಯದ ಮುಖ್ಯ ಗೋಪುರ ಭಕ್ತಿ, ಇತಿಹಾಸ, ಪ್ರಕೃತಿ ಮತ್ತು ಸಂಸ್ಕೃತಿಯ ಸಂಗಮವಾಗಿದೆ. ಇಲ್ಲಿ ಕಾಲಿಟ್ಟ ಕ್ಷಣದಿಂದಲೇ ಮನಸ್ಸಿಗೆ ಒಂದಿಷ್ಟು ಶಾಂತಿ, ಕಣ್ಣಿಗೆ ಒಂದಿಷ್ಟು ವೈಭವ ಮತ್ತು ಆತ್ಮಕ್ಕೆ ಒಂದು ವಿಚಿತ್ರವಾದ ಭಾವನೆ ಉಂಟಾಗುತ್ತದೆ. ಪುರಿಯ ಪ್ರತಿಯೊಂದು ಬೀದಿ, ಪ್ರತಿಯೊಂದು ಗಾಳಿ ಮತ್ತು ಪ್ರತಿಯೊಂದು ಅಲೆ ಕೂಡ ಸಾವಿರಾರು ವರ್ಷಗಳ ಕಥೆಗಳನ್ನು ಹೊತ್ತು ಸಾಗುತ್ತಿರುವಂತೆ ಅನಿಸುತ್ತದೆ. ಜಗನ್ನಾಥ, ಬಲಭದ್ರ ಮತ್ತು ಸುಭದ್ರ ದೇವಿಯ ಮೂರ್ತಿಗಳನ್ನು ನೋಡಿದಾಗ ಮನಸ್ಸು ಭಕ್ತಿಭಾವದಿಂದ ತುಂಬಿತು. ಇಲ್ಲಿ ಪ್ರಭು ಜಗನ್ನಾಥ , ಬಲಭದ್ರ ಮತ್ತು ಸುಭದ್ರಾ ದೇವರ ದರ್ಶನ ಪಡೆಯುವಾಗ ಭಕ್ತರ ಕಣ್ಣಲ್ಲಿ ಕಾಣಿಸುವ ಆನಂದವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ.

ಜಗನ್ನಾಥ ಸುಭದ್ರ ಬಲಭದ್ರ ದೇವರ ವಿಗ್ರಹ ಒಳಗೆ ಸ್ವಲ್ಪ ಅಂತರದಲ್ಲಿ ಅದ್ಭುತವಾಗಿ ಕಾಣಿಸಿತು. ಇನ್ನು ಇನ್ನು ನೋಡುವ ಆಸೆಯಿಂದ ಇಣುಕಿ ಇಣುಕಿ ನೆಡಬೇಕೆಂದರೆ ,ಹೆಬ್ಬಾಗಿಲಲ್ಲಿ ನಾಲ್ಕೈದು ಪುರೋಹಿತರ ದೊಡ್ಡದಾದ ಹರಿವಾಣದಲ್ಲಿ 100, 200, 500ರ ನೋಟುಗಳು! ದೇವರ ಪ್ರಸಾದ, ತೀರ್ಥ ಇನ್ನಿತರ ವಸ್ತುಗಳು ಬೇಕಾಗಿದ್ರೆ ಕಡ್ಡಾಯವಾಗಿ ಈ ದೊಡ್ಡ ನೋಟುಗಳನ್ನೇ ಕೊಡಬೇಕಾಗಿತ್ತು . ದೊಡ್ಡ ನೋಟುಗಳಿಲ್ಲದಿದ್ದರೆ ಏನೂ ಸಿಗುವುದಿಲ್ಲ ಎನ್ನುವಂತೆ ಅವರ ವ್ಯಾಪಾರ ಮನೋಭಾವ ನೋಡಿ ಮನಸ್ಸಿನ ಮೂಲೆಯಲ್ಲಿ 'ಅಯ್ಯೋ ದೇವರೇ .....' ಅನ್ನಿಸಿತು.

ದರುಶನ ಪಡೆದ ಬಳಿಕ ಅಡುಗೆ ಮನೆಗೆ ಹೋಗಲು ಪ್ರತಿ ಒಬ್ಬರಿಗೆ ಹತ್ತು ರೂಪಾಯಿಯ ಪಾವತಿ ಬರೆಯಿಸಿಯೇ ಹೋಗ ತಕ್ಕದ್ದು. ನಾವು ಹೋಗುವಾಗ ಲೇಟಾಗಿತ್ತು . ಹಾಗಾಗಿ ಹೊರಗಿನಿಂದಲೇ ಕಿಟಕಿಗಳ ಅಂತರದಿಂದ ದೊಡ್ಡೊಡ್ಡ ಅಡುಗೆಯ ಸಾಮಾನುಗಳನ್ನು , ಒಲೆಗಳನ್ನು ನೋಡಿದೆವು . ಜಗನ್ನಾಥ ದೇವಾಲಯದ ಅಡುಗೆಮನೆ ವಿಶ್ವದಲ್ಲೇ ಅತಿದೊಡ್ಡ ದೇವಾಲಯ ಅಡುಗೆ ಮನೆಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಇಲ್ಲಿ ಮಣ್ಣಿನ ಪಾತ್ರೆಗಳಲ್ಲಿ ಸಿದ್ಧವಾಗುವ ಮಹಾಪ್ರಸಾದದ ಸುವಾಸನೆ ಎಲ್ಲರನ್ನೂ ಆಕರ್ಷಿಸುತ್ತದೆ.

ಪುರಿಯ ಪ್ರಸಿದ್ಧ ರಥಯಾತ್ರೆ: ಈ ಸಮಯದಲ್ಲಿ ಪುರಿ ನಗರವೇ ಒಂದು ಭವ್ಯ ಉತ್ಸವದ ವೇದಿಕೆಯಾಗುತ್ತದೆ. ಜಗನ್ನಾಥ ಪುರಿಯ ರಥಯಾತ್ರೆ ಭಾರತದ ಅತ್ಯಂತ ಪ್ರಸಿದ್ಧ ಧಾರ್ಮಿಕ ಉತ್ಸವಗಳಲ್ಲಿ ಒಂದು. ಇದು ಪ್ರತಿ ವರ್ಷ ಜಗನ್ನಾಥ ಮಂದಿರದಿಂದ ಗುಂಡಿಚಾ ಮಂದಿರದವರೆಗೆ ನಡೆಯುತ್ತದೆ. ಆಗಲೇ ರಸ್ತೆಯ ಎರಡು ಬದಿಯಲ್ಲೂ ಮರದ ದಿನ್ನೆಗಳು ರಥಗಳ ನಿರ್ಮಿತಿಗಾಗಿ ಸಂಗ್ರಹಿಸಲಾಗಿತ್ತು. ಜಗನ್ನಾಥ ರಥಯಾತ್ರೆ ಸಾಮಾನ್ಯವಾಗಿ ಆಷಾಢ ಮಾಸದ ಶುಕ್ಲಪಕ್ಷದಂದು ನಡೆಯುತ್ತದೆ. 2026ರಲ್ಲಿ ಪುರಿಯ ಜಗನ್ನಾಥ ರಥಯಾತ್ರೆ ಜುಲೈ 16, ಗುರುವಾರ ನಡೆಯಲಿದೆ.

ಮೂರು ರಥಗಳ ವರ್ಣನೆ: ನಂದಿಘೋಷ ರಥ - ಸ್ವಯಂ ಜಗನ್ನಾಥ ಪ್ರಭುವಿನ ರಥ, ಸುಮಾರು 45 ಅಡಿ ಎತ್ತರ,16 ಚಕ್ರಗಳು,ಕೆಂಪು ಮತ್ತು ಹಳದಿ ಬಣ್ಣದ ಅಲಂಕಾರ.

ತಾಳಧ್ವಜ ರಥ :ಅಣ್ಣ ಬಲಬದ್ರನ ರಥ,ಸುಮಾರು 44 ಅಡಿ ಎತ್ತರ,14 ಚಕ್ರಗಳು, ಕೆಂಪು ಮತ್ತು ನೀಲಿ ಬಣ್ಣದ ಅಲಂಕಾರ ದರ್ಪದಲನ (ದೇವದಲನ) ರಥ :ತಂಗಿ ಸುಭದ್ರಳ ರಥ, ಸುಮಾರು 43 ಅಡಿ ಎತ್ತರ, 12 ಚಕ್ರಗಳು, ಕೆಂಪು ಮತ್ತು ಕಪ್ಪು ಬಣ್ಣದ

ಹೇಮಾ ಸದಾನಂದ್ ಮುಂಬಯಿ

ಅಲಂಕಾರ. ಈ ಮೂರು ಭವ್ಯ ಮರದ ರಥಗಳನ್ನು ಸಾವಿರಾರು ಭಕ್ತರು ಹಗ್ಗಗಳಿಂದ ಎಳೆಯುತ್ತಾರೆ. ರಥಗಳನ್ನು ಪ್ರತಿವರ್ಷ ಹೊಸದಾಗಿ ನಿರ್ಮಿಸುವುದು ಈ ಯಾತ್ರೆಯ ವಿಶೇಷತೆ. ರಥಯಾತ್ರೆಯಲ್ಲಿ ಜಗನ್ನಾಥ, ಬಲಭದ್ರ ಮತ್ತು ಸುಭದ್ರ ದೇವಿಯರು ತಮ್ಮ ಭಕ್ತರಿಗೆ ದರ್ಶನ ನೀಡಲು ದೇವಾಲಯದಿಂದ ಹೊರಬಂದು ಗುಂಡಿಚಾ ದೇವಾಲಯಕ್ಕೆ ತೆರಳುತ್ತಾರೆ. ರಥಯಾತ್ರೆಯ ಸಮಯದಲ್ಲಿ ಜಗನ್ನಾಥರು ತಮ್ಮ ಅತ್ತೆಯ ಮನೆಗೆ ಭೇಟಿ ನೀಡಿ ಪೋಡ ಪಿಠಾ ಪ್ರಸಾದ ಸ್ವೀಕರಿಸುತ್ತಾರೆ ಎಂಬ ಭಕ್ತಿಯ ನಂಬಿಕೆ ಇದೆ. ಭಕ್ತರು ರಥದ ಹಗ್ಗವನ್ನು ಎಳೆಯುವುದನ್ನು ಅತ್ಯಂತ ಪುಣ್ಯಕರವೆಂದು ನಂಬುತ್ತಾರೆ.

ಲಿಂಗರಾಜು ಶಿವನ ದೇವಾಲಯ: ನಾವು ಮರುದಿನ ಬೆಳಿಗ್ಗೆ ಲಿಂಗರಾಜು ಶಿವನ ದೇವಾಲಯಕ್ಕೆ ಹೊರಟೆವು . ಹೋಟೆಲಿನಿಂದ ಹೊರಬಂದಾಗಲೇ ನಮ್ಮೆದುರಿಗೆ ಬಂದ ಕೃತ್ರಿಮ ಮುತ್ತಿನ ಸರಗಳನ್ನು ಮಾರುವ ಅಶೋಕ್ ವಿವಿಧ ಶೈಲಿಯ ಸರಗಳನ್ನು ತೋರಿಸುತ್ತಾ ನಮ್ಮೆಲ್ಲರ ಮನ ಸೆಳೆದನು. ನಾವು ಅಶೋಕ್ ತುಂಬಾ ದುಬಾರಿ ರೇಟ್ ಹೇಳ್ತಿದ್ದೀಯಾ, ಸ್ವಲ್ಪ ಕಡಿಮೆ ಮಾಡು ಎಂದರೆ , 'ಮಮ್ಮಿ ಮಾರೆಂಗಿ' ಎಂದು ಮುಗ್ಧತೆಯಿಂದ ಹಲವು ಸರಗಳನ್ನು ಕೊಂಡುಕೊಳ್ಳುವಂತೆ ಮಾಡಿದ.

ಲಿಂಗರಾಜು ಮಂದಿರ ಭವ್ಯ ಪ್ರಾಚೀನ ರಚನೆಯಿಂದ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿತ್ತು. ಭುವನೇಶ್ವರವನ್ನು 'ದೇವಾಲಯಗಳ ನಗರ' ಎಂದು ಕರೆಯಲಾಗುತ್ತದೆ. ಮತ್ತು ಲಿಂಗರಾಜ ಮಂದಿರವು ಅದರ ಪ್ರಮುಖ ಆಕರ್ಷಣೆಯಾಗಿದೆ.ಈ ದೇವಾಲಯವನ್ನು ಸುಮಾರು 11ನೇ ಶತಮಾನದಲ್ಲಿ ಸೋಮವಂಶಿ ರಾಜರು ನಿರ್ಮಿಸಿದರೆಂದು ಇತಿಹಾಸಕಾರರು ಹೇಳುತ್ತಾರೆ. ದೇವಾಲಯದ ಮುಖ್ಯ ದೇವರು ಲಿಂಗರಾಜ (ಶಿವ) ಆಗಿದ್ದು, ಇಲ್ಲಿ ಶಿವ ಮತ್ತು ವಿಷ್ಣು ಇಬ್ಬರ ತತ್ವಗಳ ಸಮನ್ವಯವನ್ನು ಕಾಣಬಹುದು. ಅಂದರೆ 'ಹರಿಹರ' ರೂಪದಲ್ಲಿ ದೇವರನ್ನು ಪೂಜಿಸಲಾಗುತ್ತದೆ. ದೇವಾಲಯದ ಗೋಪುರವು ಸುಮಾರು 180 ಅಡಿ ಎತ್ತರವಾಗಿದ್ದು, ಕಲಿಂಗ ಶೈಲಿಯ ವಾಸ್ತುಶಿಲ್ಪದ ಅದ್ಭುತ ಉದಾಹರಣೆ. ದೇವಾಲಯ ಸಂಕೀರ್ಣದಲ್ಲಿ ಅನೇಕ ಸಣ್ಣ ದೇವಾಲಯಗಳೂ ಇವೆ. ಬಿಸಿಲಿನ ಬೇಗೆ ತಡೆಯಲಾರದಷ್ಟಿತ್ತು. ಹಾಗಾಗಿ ನಾವೆಲ್ಲಾ ಅವಸರದಿಂದ ಕೆಲವಷ್ಟೇ ದೇಗುಲಗಳನ್ನು ನೋಡಿ ಬಂದೆವು. ಇಲ್ಲಿ ಪ್ರತಿ ವರ್ಷ ನಡೆಯುವ ರೇಣುಕಾ ರಥಯಾತ್ರೆಯ ಉತ್ಸವವು ಬಹಳ ಪ್ರಸಿದ್ಧವಾಗಿದೆಯಂತೆ. ಲಿಂಗರಾಜು ಮಂದಿರವು ಕೇವಲ ಧಾರ್ಮಿಕ ಕೇಂದ್ರವಷ್ಟೇ ಅಲ್ಲ, ಭಾರತದ ಪ್ರಾಚೀನ ಸಂಸ್ಕೃತಿ, ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಮಹತ್ವದ ಪರಂಪರೆಯಾಗಿದೆ. ಇದು ದೇಶ-ವಿದೇಶಗಳಿಂದ ಬರುವ ಪ್ರವಾಸಿಗರನ್ನು ಆಕರ್ಷಿಸುವ ಐತಿಹಾಸಿಕ ಮತ್ತು ಆಧ್ಯಾತ್ಮಿಕ ತಾಣವಾಗಿದೆ. ನಾವು ಒಂದು ಸ್ಥಳಕ್ಕೆ ಭೇಟಿ ನೀಡಿದ ಬಳಿಕ ಸ್ವಲ್ಪ ವಿಶ್ರಾಂತಿ ಪಡೆದು ಮತ್ತೆ ಹತ್ತಿರದಲ್ಲಿಯೇ ಮಾರುಕಟ್ಟೆಗೆ ಹೋಗಿ ಒಡಿಸಾದ ಪ್ರಸಿದ್ಧ ಸೀರೆಗಳ ಹಾಗೂ ಇನ್ನಿತರ ವಸ್ತುಗಳ ಖರೀದಿ ಮಾಡಿ ಬರುತ್ತಿದ್ದೆವು.

ಚಿಲ್ಕಾ ಸರೋವರ: ಆ ಬಳಿಕ ನಾವು ಚಿಲ್ಕಾ ಸರೋವರಕ್ಕೆ ಹೋಗಲು ತಯಾರಾದೆವು. ಬಸ್ಸಲ್ಲಿ ನಮ್ಮ ನೃತ್ಯ ಸಂಗೀತ ಭಜನೆಗಳು ಪ್ರವಾಸದ ಸೊಗಸನ್ನು ಹೆಚ್ಚಿಸುತ್ತಿತ್ತು . ಪ್ರತಿಯೊಬ್ಬರು ಸೇಫ್ಟಿ ಜಾಕೆಟ್ ಧರಿಸಿಕೊಂಡು ಬೋಟ್ ಹತ್ತಿದೆವು. ನೀರಂದ್ರೆ ನನಗೆ ಅತೀ ಪ್ರಿಯ . ಹಾಗೆ ನಾನು ಬಹಳ ಜೋಸ್ನಿಂದ ನೀರಿನ ಸೆಲೆಗಳೊಂದಿಗೆ ಆಟವಾಡುತ್ತಾ ಹಾಡುತ್ತಾ ನಮ್ಮ ಇತರ ಸಂಗಡಿಗರ ಬೋಟಿನ ಸ್ಪರ್ಧೆಯಲ್ಲಿ ಭಾಗಿಯಾದೆವು. ಒಂದಷ್ಟು ದೂರ ಹೋದಬಳಿಕ ಒಂದೆಡೆ ಎಲ್ಲಾ ಬೋಟುಗಳು ನಿಂತಿದ್ದವು. ರಾಹುಲ್ , ಈ ಸ್ಥಳಗಳಲ್ಲಿ ಡಾಲ್ಫಿನ್ ಬರುತ್ತೆ ಶಾಂತರಾಗಿ ವೀಕ್ಷಿಸಿ ಎಂದು ನಮ್ಮನ್ನೆಲ್ಲಾ ಒಂದೇ ನಿಟ್ಟಿನಲ್ಲಿ ನೀರನ್ನೇ ವೀಕ್ಷಿಸುವಂತೆ ಹೇಳಿದರು .

ಚಿಲ್ಕಾ ಸರೋವರವು ಏಷ್ಯಾದ ಅತಿದೊಡ್ಡ ಉಪ್ಪುನೀರಿನ ಸರೋವರವಾಗಿದೆ. ಇದು ಬಂಗಾಳ ಕೊಲ್ಲಿಯ ಸಮೀಪದಲ್ಲಿದ್ದು, ತನ್ನ ವಿಶಾಲ ಜಲಪ್ರದೇಶ, ಸಮೃದ್ಧ ಜೀವವೈವಿಧ್ಯತೆ ಮತ್ತು ವಲಸೆ ಪಕ್ಷಿಗಳಿಗಾಗಿ ಪ್ರಸಿದ್ಧವಾಗಿದೆ.ಚಿಲ್ಕಾ ಸರೋವರವು ಸುಮಾರು 1,100 ಚದರ ಕಿಲೋಮೀಟರ್‌ಪ್ರದೇಶವನ್ನು ವ್ಯಾಪಿಸಿದೆ. ಚಳಿಗಾಲದಲ್ಲಿ ಸೈಬೀರಿಯಾ, ಮಂಗೋಲಿಯಾ ಹಾಗೂ ಇತರ ದೇಶಗಳಿಂದ ಸಾವಿರಾರು ವಲಸೆ ಪಕ್ಷಿಗಳು ಇಲ್ಲಿ ಆಗಮಿಸುತ್ತವೆಯಂತೆ. ಆದ್ದರಿಂದ ಇದು ಪಕ್ಷಿ ವೀಕ್ಷಕರಿಗೆ ಪ್ರಮುಖ ಆಕರ್ಷಣೆಯಾಗಿರುವುದೆಂದು ತಿಳಿಯಿತು.



ಸರೋವರದಲ್ಲಿ ಡಾಲ್ಫಿನ್‌ಗಳು, ವಿವಿಧ ಜಾತಿಯ ಮೀನುಗಳು ಹಾಗೂ ಅನೇಕ ಜಲಚರ ಜೀವಿಗಳು ಕಂಡುಬರುತ್ತವೆ. ವಿಶೇಷವಾಗಿ ಇರಾವಡಿ ಡಾಲ್ಫಿನ್‌ಗಳು ಚಿಲ್ಕಾದ ಪ್ರಮುಖ ಆಕರ್ಷಣೆಗಳಾಗಿವೆ ಎಂದು ರಾಹುಲ್ ಹೇಳುತ್ತಿರುವಾಗ ನಾವು ಧ್ಯಾನಸ್ಥರಾಗಿ ನೋಡುತ್ತಾ ಕೂತಿರಲೂ ಒಂದೇ ಒಂದು ಹಕ್ಕಿಯಾಗಲಿ ಡಾಲ್ಫಿನಾಗಲಿ ನೋಡಲು ಸಿಗಲಿಲ್ಲ. ಅದನ್ನು ಬಿಟ್ಟು, ಸ್ಥಳೀಯ ಜನರ ಕಪ್ಪೆಚಿಪ್ಪುಗಳಿಂದ ಮುತ್ತು ಹವಳವಜ್ರಗಳನ್ನು ತೆಗೆದು ತೋರಿಸಿ ನಮ್ಮನ್ನು ಮೋಡಿಗೊಳಿಸಿ ತಮ್ಮ ವ್ಯಾಪಾರ ಕುದುರಿಸುವ ಕಲೆಯನ್ನು ಮಾತ್ರ ಮೆಚ್ಚಲೇ ಬೇಕು .ಚಿಲ್ಕಾ ಸರೋವರದ ಪ್ರಕೃತಿ ಸೌಂದರ್ಯ, ಪರಿಸರ ಎಲ್ಲವೂ ತನ್ನದೇ ಆದ ಕವಿತೆಯನ್ನ ಬರೆದಿಟ್ಟಂತಿತ್ತು. ಅಲ್ಲಿ ಫೋಟೋ ಕ್ಲಿಕಿಸುತ್ತಾ ಸುಮಾರು ಹೊತ್ತು ಕಳೆದೆವು. ನಂತರ ಬೋಟಿನಿಂದ ಇಳಿದು ಕಾಲು ದಾರಿಯಲ್ಲೂ ನಡೆದು ಸಮುದ್ರ ತೀರಕ್ಕೆ ಹೋಗಿ ಅಲ್ಲಿ ಒಂದಿಷ್ಟು ಫೋಟೋ ಕ್ಲಿಕ್ಕಿಸಿ ಬಂದೆವು. ಆಗಲೇ ಸುಡು ಬಿಸಿಲಿಂದ ಆಯಾಸಗೊಂಡ ಎಲ್ಲರೂ ಹಿಂತಿರುಗುವಂತೆ ಕೇಳಿಕೊಂಡರು. ಉಷ್ಣತೆಯನ್ನು ಸಹಿಸಲಾರದೆ ನಾವು ವನ್ಯಜೀವಿ ಸಂಚಾರವನ್ನು ಅರ್ಧದಲ್ಲಿ ಸ್ಥಗಿತಗೊಳಿಸಿದೆವು. ನೋಡಲು ಇನ್ನು ಹಲವು ದೇವಸ್ಥಾನಗಳು ಬುದ್ಧ ಸ್ತೂಪಗಳಿದ್ದವು .


ಮರುದಿನ ಅಂದ್ರೆ ಕೊನೆಯದಿನ ಕೋನಾರ್ಕ್ ಟೆಂಪಲ್ ನೋಡಿ ಸ್ಟೇಷನ್ ಹೋಗಲಿತ್ತು. ಎಲ್ಲರೂ ರೆಡಿಯಾಗಿ ರೆಸ್ಟೋರೆಂಟಲ್ಲಿ ಸೇರಿದೆವು. ಎಲ್ಲರೂ ಹೋಟೆಲ್ ಸಿಬ್ಬಂದಿಗಳಿಗೆ ಧನ್ಯವಾದ ಸಮರ್ಪಿಸಿ ಹೊರಡುವಾಗ ನಮ್ಮ ಕಣ್ಣುಗಳು ತೇವಗೊಂಡಿದ್ದವು. ಬಸ್ಸಲ್ಲಿ ಸುಮಾರು ಎರಡು ತಾಸಿನ ಪಯಣದ ಬಳಿಕ ದೇವಾಲಯವನ್ನು ತಲುಪಿದೆವು.


ಕೋನಾರ್ಕ್ ಟೆಂಪಲ್ :ಒಳಗೆ ಹೋಗುವಾಗಲೇ ಮನೋಹರವಾದ ಮೂರ್ತಿಗಳಿಂದ ಕೆತ್ತಲ್ಪಟ್ಟ ಕಲೆಗಳ ಧೀಮಂತ ದೇವಾಲಯವನ್ನು ಕಂಡು ಮೂಕಳಾದೆ. ಆಗಲೇ ಅಲ್ಲಿಯ ಗೈಡ್ ಗಳು ಗುಂಪು ಗುಂಪುಗಳಿಗೆ ಸ್ಥಳದ ಬಗ್ಗೆ ಅಲ್ಲಿಯ ಮೂರ್ತಿಗಳ ಬಗ್ಗೆ ಕೂಲಂಕುಷವಾಗಿ ಮಾಹಿತಿ ನೀಡುತ್ತಿದ್ದರು. ಈ ಸೂರ್ಯ ದೇವಾಲಯವು ಭಾರತದ ಅತ್ಯಂತ ಪ್ರಸಿದ್ಧ ಐತಿಹಾಸಿಕ ಮತ್ತು ವಾಸ್ತುಶಿಲ್ಪದ ಅದ್ಭುತಗಳಲ್ಲಿ ಒಂದಾಗಿದೆ. 13ನೇ ಶತಮಾನದಲ್ಲಿ ಪೂರ್ವ ಗಂಗ ವಂಶದ ರಾಜ ನರಸಿಂಹದೇವ ಪ್ರಥಮರು ಈ ದೇವಾಲಯವನ್ನು ನಿರ್ಮಿಸಿದರು. ಸೂರ್ಯ ದೇವರಿಗೆ ಸಮರ್ಪಿತವಾಗಿರುವ ಈ ದೇವಾಲಯವು ಯುನೆಸ್ಕೋ ವಿಶ್ವ ಪರಂಪರೆ ತಾಣವಾಗಿ ಗುರುತಿಸಲ್ಪಟ್ಟಿದೆಯಂತೆ.ಸೂರ್ಯ ದೇವಾಲಯದ ವಿನ್ಯಾಸವು ಸೂರ್ಯನ ರಥದ ಆಕಾರದಲ್ಲಿದ್ದು, ಅದರಲ್ಲಿ 24 ಅಲಂಕೃತ ಚಕ್ರಗಳು ಮತ್ತು ಏಳು ಕುದುರೆಗಳ ಶಿಲ್ಪಗಳಿದ್ದು ಈ ಶಿಲ್ಪಗಳು ಕಾಲದ ಚಲನೆ ಮತ್ತು ಸೂರ್ಯನ ಶಕ್ತಿಯನ್ನು ಪ್ರತಿನಿಧಿಸುತ್ತದೆಯಂತೆ . ದೇವಾಲಯದ ಗೋಡೆಗಳ ಮೇಲೆ ಕೆತ್ತಲಾದ ಶಿಲ್ಪಗಳು ಆ ಕಾಲದ ಕಲೆ, ಸಂಸ್ಕೃತಿ ಮತ್ತು ಜೀವನಶೈಲಿಯನ್ನು ಪ್ರತಿಬಿಂಬಿಸುತ್ತವೆ.

ಸೂರ್ಯ ದೇವಾಲಯವು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಸಂಕೇತವಾಗಿದೆ. ಭಕ್ತರು ಮತ್ತು ಇತಿಹಾಸಾಸಕ್ತರಿಗೆ ಇದು ವಿಶೇಷ ಆಕರ್ಷಣೆಯ ತಾಣವಾಗಿದೆ. ಈ ದೇವಾಲಯದಲ್ಲಿ ಆತ್ಮಕ್ಕೆ ಶಾಂತಿ ಸಿಗುತ್ತದೆ; ಕೋನಾರ್ಕದಲ್ಲಿ ಭಾರತೀಯ ಕಲೆಯ ವೈಭವ ಕಂಡು ಬೆರಗಾಗುತ್ತೇವೆ; ಸಮುದ್ರ ತೀರದಲ್ಲಿ ಮನಸ್ಸು ಸ್ವಾತಂತ್ರ್ಯ ಅನುಭವಿಸುತ್ತದೆ; ಚಿಲ್ಕಾದಲ್ಲಿ ಪ್ರಕೃತಿಯೊಂದಿಗೆ ಒಂದಾಗುತ್ತೇವೆ. ನಿಜವಾಗಿಯೂ ಈ ಪ್ರವಾಸದ ನಂತರ ಮನಸ್ಸಿನಲ್ಲಿ ಉಳಿಯುವುದು ಕೇವಲ ಫೋಟೋಗಳಲ್ಲ, ಅನೇಕ ಭಾವನೆಗಳು. ಅಲೆಗಳ ಶಬ್ದ, ರಸ್ತೆಗಳ ಬದಿಯಲ್ಲಿ ರಥಗಳ ತಯಾರಿ , ಸಣ್ಣ ದೊಡ್ಡ ಹೋಳಿಗಳ ಮಧ್ಯ ಮೈದೋರುವ ಕಲೆಗಳು , ಅಲ್ಲಿಯ ಜನರ ಮಾತುಗಳು ಕತೆಯಾಗಿ ಮನದಲ್ಲಿ ಉಳಿದುಕೊಳ್ಳುತ್ತವೆ . ಒಟ್ಟಿಗೆ ನನಗೆ ಜಗನ್ನಾಥಪುರಿ ಪ್ರವಾಸ ಕೇವಲ ಒಂದು ಪ್ರವಾಸವಲ್ಲ ಅದು ಹೃದಯವನ್ನು ಮುಟ್ಟಿದ ಒಂದು ಸುಂದರ ಅನುಭವ.

ಸೂತ್ರಧಾರಿ ಮತ್ತು ಪಾತ್ರಧಾರಿ








ಜೀವನದಲ್ಲಿ ಯಾರು ಪ್ರಸನ್ನರಾಗಿರುತ್ತಾರೆ ಎನ್ನುವ ಪ್ರಶ್ನೆಗೆ 'ಯಾರ ಬಳಿ ಸಂತೋಷ ಇದೆಯೋ ಅವರು ಪ್ರಸನ್ನರಾಗಿರುತ್ತಾರೆ' ಎನ್ನುವ ಉತ್ತರ ಸಿಗುತ್ತದೆ.ದೇವರು ಪ್ರತಿಯೊಬ್ಬನಿಗೂ ಇಂತಿಷ್ಟು ಸುಖ- ದುಃಖ ಎಂಬುದನ್ನು ಕೊಟ್ಟಿರುತ್ತಾನೆ.ಅದನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ.ದೇವರು ಕೊಟ್ಟದ್ದಷ್ಟರಲ್ಲಿ ಸಂತುಷ್ಟಿಯನ್ನು ಕಾಣುವವರು ಸಂತೋಷವಾಗಿರಲು ಸಾಧ್ಯ.ಒಂದು ವೇಳೆ ದೇವರು ನಮಗೆ ಕೇಳಲು ಕಿವಿ,ನೋಡಲು ದೃಷ್ಟಿ,ಮಾತಾಡಲು ಬಾಯಿ,ನಡೆದಾಡಲು ಕೈಕಾಲು ಕೊಟ್ಟಿದ್ದಾನೆಂದರೆ ನಾವು ನಿಜವಾಗಿಯೂ ದೇವರಿಗೆ ಧನ್ಯರಾಗಿರಬೇಕು.ಯಾಕೆಂದರೆ ಅದೆಷ್ಟೋ ಮಂದಿ ಕಾಲಿಗೆ ಹಾಕಿಕೊಳ್ಳುವ ಚಪ್ಪಲಿಯನ್ನು ಕೈಗಳಿಗೆ ಸಿಕ್ಕಿಸಿಕೊಂಡು ಮುಂದೆ ಹೋಗುತ್ತಿರುತ್ತಾರೆ.ಅಂತವರನ್ನು ಕಾಣುವಾಗ ದೇವರು ನಮ್ಮ ಮೇಲೆ ಅದೆಷ್ಟು ಕೃಪೆತೋರಿಸಿದ್ದಾನೆ ಎಂಬ ಅರಿವಾಗುತ್ತದೆ. ಕೆಲವರು ಕಣ್ಣು ಕಳೆದುಕೊಂಡು ಜೀವನ ಪೂರ್ತಿ ಅಂಧಕಾರದಲ್ಲಿ ಜೀವನ ನಡೆಸುತ್ತಿದ್ದಾರೆ.ಅವರನ್ನು ನೋಡುವಾಗ ನಾವು ಅದೆಷ್ಟು ಪುಣ್ಯವಂತರು ಎಂದು ಅನ್ನಿಸುತ್ತದೆ.ಅಪಾಂಗರು, ಕುರುಡರು.ಕಿವುಡರು,ಮೂಕರು ದೇವರನ್ನು ದೂಷಿಸಿದರೆ ದೇವರು ಅವರ ದೂಷಣೆಯನ್ನು ಸ್ವೀಕರಿಸಬಲ್ಲರು,ಆದರೆ ಒಬ್ಬ ಆರೋಗ್ಯವಂತ ವ್ಯಕ್ತಿ ಕೂಡ 'ದೇವರೇ ನೀನು ನನಗೇನು ಕೊಟ್ಟಿದ್ದಿ?' ಎಂದು ಪ್ರಶ್ನಿಸಿದರೆ ಅದು ಸಮ್ಮತವಾದುದೇ?ನಮ್ಮ ನಮ್ಮ ಹಣೆಯಲ್ಲಿ ಎಷ್ಟೆಷ್ಟು ಬರೆದಿದೆಯೋ ಅಷ್ಟನ್ನು ದೇವರು ಖಂಡಿತವಾಗಿಯೂ ಕೊಟ್ಟೇ ಕೊಡುತ್ತಾನೆ.ನಮ್ಮ ಕರ್ಮಗಳಿಗನುಸಾರವಾಗಿ ನಮಗೆ ಫಲ ಸಿಗುತ್ತದೆ.ನಮಗೆ ಏನೇನು ಸಿಕ್ಕಿದೆ ಅದಕ್ಕೆ ಧನ್ಯವಾದ ಹೇಳುವುದನ್ನು ಬಿಟ್ಟು ನಿರಂತರ ದೇವರನ್ನು ನಿಂದಿಸುವುದು ಸರಿಯೇ? ನಮ್ಮನ್ನು ನಾವೇ ಜೀವನದ ತಕ್ಕಡಿಯಲ್ಲಿ ತೂಗಿಸಿಕೊಳ್ಳಬೇಕು,ಈ ಜೀವನದಲ್ಲಿ ನಾವೆಷ್ಟು ಪಡೆದುಕೊಂಡಿದ್ದೇವೆ ಮತ್ತು ಎಷ್ಟು ಕಳೆದುಕೊಂಡಿದ್ದೇವೆ ಎಂದು.ಆಗ ದೇವರು ಕೊಟ್ಟದ್ದೆಷ್ಟು,ಬಿಟ್ಟದ್ದೆಷ್ಟು ಎಂಬ ಅರಿವು ನಮಗಾಗುತ್ತದೆ...!

ಯಾವಾಗಲೂ ನಮ್ಮ ಬಗ್ಗೆಯೇ ಚಿಂತಿಸುವುದನ್ನು ಬಿಟ್ಟು ಬೇರೆಯವರ ನೋವು ನಲಿವುಗಳಿಗೆ ಓಗೊಡುತ್ತಾ ಬಂದರೆ ದೇವರು ತನ್ನಿಂತಾನೇ ನಮ್ಮ ಬಗ್ಗೆ ಯೋಚಿಸಲು ಪ್ರಾರಂಭಿಸುತ್ತಾನೆ.ನಮಗೆ ದೇವರ ಮೇಲೆ ಭರವಸೆ ಮುಖ್ಯ.ಎಲ್ಲವೂ ಅವನಿಷ್ಟದಂತೆ ಎಂದು ದೃಢ ಮನಸ್ಸಿನಿಂದ ನಾವಿದ್ದರೆ ಅವನು ಕೂಡ ಸದಾ ನಮ್ಮ ಬೆನ್ನ ಹಿಂದೆಯೇ ಇರುತ್ತಾನೆ. ಜಗತ್ತು ನಮ್ಮೊಂದಿಗೆ ಇರಲಿ ಬಿಡಲಿ ಆದರೆ ಜಗನ್ನಾಥ ಖಂಡಿತ ನಮ್ಮ ಜೊತೆಗೆ ಇರುತ್ತಾನೆ. ನಮ್ಮ ಹಣೆಯಲ್ಲಿ ಬರೆದುದನ್ನು ಅಳಿಸಲು ಸಾಧ್ಯವಿಲ್ಲ ಎನ್ನುವುದಕ್ಕೆ ಭಾಗವತದಲ್ಲಿ ಬರುವ ಕಥೆಯೊಂದು ಹೀಗಿದೆ:

ಒಬ್ಬ ಕಳ್ಳನಿದ್ದ.ಆತ ತನ್ನ ಗುರುವಿನಲ್ಲಿ ಕೇಳಿದ 'ಗುರುವೇ ನನ್ನ ವಿವಾಹ ಎಂದು ಆಗಬಹುದು?' ಎಂದು. ಗುರು ಹೇಳಿದರು 'ಮೊದಲು ನಿನ್ನ ಗಲ್ಲು ಶಿಕ್ಷೆಯ ದಿನ ನಿರ್ಧಾರ ಆಗುತ್ತದೆ,ನಂತರ ನಿನ್ನ ಮದುವೆ ಆಗುತ್ತದೆ' ಎಂದು.ಕಳ್ಳ ಮನದಲ್ಲೇ 'ಗಲ್ಲು ಶಿಕ್ಷೆ ನಿರ್ಧಾರವಾದ ಮೇಲೆ ಮದುವೆಯಾಗುವುದರಲ್ಲಿ ಏನು ಅರ್ಥ? ಇನ್ನು ಮುಂದೆ ನಾನು ಕಳ್ಳತನ ಮಾಡುವುದಿಲ್ಲ,ಕಳ್ಳತನ ಬಿಟ್ಟ ಮೇಲೆ ಶಿಕ್ಷೆ ಆಗಲು ಹೇಗೆ ಸಾಧ್ಯ?' ಎಂದು ಯೋಚಿಸಿ ಒಳ್ಳೆಯ ಮಾರ್ಗದಲ್ಲಿ ನಡೆಯುವ ನಿರ್ಧಾರಕ್ಕೆ ಬರುತ್ತಾನೆ.

ಒಂದು ದಿನ ಆ ಊರಿನ ರಾಜನ ಸವಾರಿ ರಾಜ್ಯ ಪರ್ಯಟನೆಗಾಗಿ ಹೋಗುತ್ತಿತ್ತು. ಕಳ್ಳ,ರಾಜ ಹೋಗುತ್ತಿರುವುದನ್ನು ನೋಡಿದ,ಆತ ಕಳ್ಳತನ ಬಿಟ್ಟು ಬಿಟ್ಟಿದ್ದ.ಕುದುರೆ ಏರಿ ಮುನ್ನಡೆಯುತ್ತಿದ್ದ ರಾಜ ಜನರ ನಡುವೆ ನಿಂತ ಕಳ್ಳನನ್ನು ನೋಡಿದ.ಅವನ ಕತ್ತಲ್ಲಿದ್ದ ದೊಡ್ಡ ಚಿನ್ನದ ಸರ ನೋಡಿ ಆತನನ್ನು ಬಳಿಗೆ ಕರೆದು 'ಈ ಸರ ನನ್ನದು,ಇದು ನಿನ್ನ ಬಳಿ ಹೇಗೆ ಬಂತು?' ಎಂದು ಪ್ರಶ್ನಿಸಿದಾಗ ಕಳ್ಳ 'ಹೌದು ನಾನು ನಿಮ್ಮ ಮಹಲಿನಿಂದ ಚಿನ್ನ ಕಳವು ಮಾಡಿರುವೆ' ಎಂದ.ಆಗ ರಾಜ 'ಹೌದು !ನೀನು ಬಹಳಷ್ಟು ಕಳವು ಮಾಡಿರುವೆ .ನೀನು ದೊಡ್ಡ ಕಳ್ಳ.ಹಾಗಾಗಿ ನೀನು ಬದುಕಿರಬಾರದು.ನಿನಗೆ ಫಾಶಿ ಕೊಡಲು ನಿರ್ಧರಿಸಿದ್ದೇನೆ' ಎನ್ನುತ್ತಾ ತನ್ನ ಸಿಪಾಯಿಗಳಿಗೆ ಕಳ್ಳನನ್ನು ಕಾರಾಗೃಹದಲ್ಲಿಡುವಂತೆ ಆದೇಶ ನೀಡಿದ. ಹೀಗೆ ಕಳ್ಳ ಕಾರಾಗೃಹ ಸೇರಿದ.ಫಾಶಿ ಕೊಡುವ ಒಂದೆರಡು ದಿನ ಮೊದಲು ರಾಜನ ಸಿಪಾಯಿಗಳು ಬಂದು 'ಸಾಯುವ ಮೊದಲು ನಿನ್ನದೇನಾದರೂ ಅಂತಿಮ ಇಚ್ಛೆ ಇದೆಯೋ' ಎಂದು ಪ್ರಶ್ನಿಸಿದರು.ಆಗ ಕಳ್ಳ 'ಫಾಶಿ ಕೊಡುವ ತನಕ ನನ್ನನ್ನು ಕಾರಾಗೃಹದಲ್ಲಿ ಇಡಬೇಡಿ.ಹೊರಗೆ ಇಡಿ.ಒಳ್ಳೆಯ ಗಾಳಿ,ಬೆಳಕನ್ನು ಸೇವಿಸಿ ಸಾಯುತ್ತೇನೆ' ಎನ್ನುತ್ತಾನೆ. ಹೀಗಾಗಿ ಅವನನ್ನು ಬಹಳ ದೊಡ್ಡ ಮರದ ಬುಡದ ಕೆಳಗೆ ವಾಸಿಸಲು ಬಿಡಲಾಯಿತು. ಈತ ಮರದ ಕೆಳಗೆ ಕುಳಿತಿರುವಾಗ ಒಬ್ಬ ತಾಯಿ ಮತ್ತು ಮಗಳು ಎದುರಿನಿಂದ ನಡೆದುಕೊಂಡು ಬರುತ್ತಿರುವುದನ್ನು ಕಂಡ ಕಳ್ಳ ಅವರನ್ನು ಮಾತಾಡಿಸುತ್ತಾನೆ. 'ನಾನು ಬಹಳ ಬಡವಿ,ಏನಾದರೂ ಕೆಲಸ ಸಿಗಬಹುದೇ' ಎಂದು ಹುಡುಕುತ್ತಾ ಮಗಳೊಂದಿಗೆ ಹೋಗುತ್ತಿದ್ದೇನೆ' ಎಂದಳು ತಾಯಿ.ಆಗ ಆ ಕಳ್ಳ ಆಕೆಯಲ್ಲಿ 'ನನ್ನ ಬಳಿ ಬಹಳ ಚಿನ್ನ, ಹಣ ಇದೆ,ಆದರೆ ನಾನು ನಾಳೆ ಸಾಯುವವನು. ನೀನು ನಿನ್ನ ಮಗಳನ್ನು ಮದುವೆ ಮಾಡಿಕೊಟ್ಟರೆ ಅದೆಲ್ಲವೂ ನಿನ್ನ ಮಗಳದ್ದಾಗುತ್ತದೆ,ನಾನು ಸತ್ತ ನಂತರವೂ



ನೀವು ನೆಮ್ಮದಿಯಿಂದ ಇರಬಹುದು' ಎನ್ನುತ್ತಾನೆ. ಆಗ ಆ ಹೆಂಗಸು 'ನಮಗೆ ಒಡವೆ ಕೊಟ್ಟು ನಮ್ಮನ್ನು ಶ್ರೀಮಂತರನ್ನಾಗಿಸಿ ನೀನು ಸಾಯುತ್ತಿ ,ಹಾಗಿರುವಾಗ ನೀನು ಮದುವೆ ಆಗುವ ಉದ್ದೇಶವಾದರೂ ಏನು? ನಿನಗೆ ಇದರಿಂದ ಏನು ಲಾಭ?' ಎಂದು ಪ್ರಶ್ನಿಸಿದಾಗ ಆತ 'ನಾನು ಮದುವೆಯಾಗಿ ನಿನ್ನ ಮಗಳಿಗೆ ಮಗುವಾದರೆ ಆತ ನನ್ನ ಪಿಂಡದಾನ ಮಾಡಬಲ್ಲ' ಎನ್ನುತ್ತಾನೆ. ತಾಯಿ ಮಗಳಿಗೆ ವಿಷಯ ತಿಳಿಸಿದಾಗ ಆತನ ಒಳ್ಳೆಯ ಉದ್ದೇಶವನ್ನು ಅರಿತ ಮಗಳು ಮದುವೆಯಾಗಲು ಒಪ್ಪುತ್ತಾಳೆ.ಆ ಕ್ಷಣವೇ ಅವರಿಬ್ಬರ ಮದುವೆ ತಾಯಿಯ ಸಮ್ಮುಖದಲ್ಲಿ ಆಗಿಹೋಯಿತು.ಆ ಒಂದು ರಾತ್ರಿ ಆತ ತನ್ನ ಪತ್ನಿಯೊಂದಿಗೆ ಕಳೆದ, ಮರುದಿನ ಆತನನಿಗೆ ಗಲ್ಲು ಶಿಕ್ಷೆಯಾಯಿತು .ಆತನ ಇಚ್ಛೆಯಂತೆ ಆತನ ವೀರ್ಯ ಹೆಂಡತಿಯ ಗರ್ಭದಲ್ಲಿ ಸೇರಿ ಭ್ರೂಣ ನಿರ್ಮಾಣವಾಗಿತ್ತು.

ಆ ಕಳ್ಳನ ಸಾವಿನ ನಂತರ ಆತ ಹೇಳಿರುವ ಸ್ಥಳದಲ್ಲಿ ತಾಯಿ ಮಗಳಿಗೆ ಒಡವೆಗಳು ಸಿಕ್ಕಿದವು.ಆ ಮೂಲಕ ಅವರು ಸಿರಿವಂತರಾದರು.ಈಗ ತಾಯಿ ಮಗಳಿಗೆ ಮರು ಮದುವೆ ಮಾಡುವ ಬಗ್ಗೆ ಯೋಚಿಸುತ್ತಾಳೆ .ಹಾಗೆಯೇ ಒಬ್ಬ ಯುವಕನೊಂದಿಗೆ ಮದುವೆ ಕೂಡಾ ಮಾಡಿಬಿಡುತ್ತಾಳೆ.ಆದರೆ ಮದುವೆಯಾದ ಯುವಕ ಮಹಾ ಕಳ್ಳನಾಗಿದ್ದ. ಒಂದು ದಿನ ಆತ ಇವರಿಬ್ಬರ ಎಲ್ಲಾ ಸಂಪತ್ತನ್ನು ದೋಚಿಕೊಂಡು ಪರಾರಿಯಾದ. ತಾಯಿ ಮಗಳಿಬ್ಬರು ಮತ್ತೆ ಅದೇ ಮೊದಲಿನ ಸ್ಥಿತಿಗೆ ಬಂದರು.ಈ ಎಲ್ಲ ನೋವುಗಳನ್ನು ಕಂಡ ತಾಯಿ ತೀರಿಕೊಂಡಳು.ಗರ್ಭವತಿ ಮಗಳು ಮತ್ತೆ ಏಕಾಂಗಿಯಾದಳು, ಮತ್ತು ಕೂಲಿ ಕೆಲಸ ಮಾಡುತ್ತಾ ದಿನ ಕಳೆಯಲಾರಂಭಿಸಿದಳು.ಮುಂದೆ ಆಕೆ ಒಂದು ಗಂಡು ಮಗುವಿಗೆ ಜನ್ಮವಿತ್ತಳು.

ಮಗ ಬೆಳೆದು ಯುವಕನಾಗುತ್ತಾನೆ. ಒಂದು ದಿನ ಆ ಊರಿನ ರಾಜ ತಿರುಗಾಡಲು ಹೋಗುತ್ತಿರುವಾಗ ಎದುರಿನಿಂದ ಬಂದ ಹಾವೊಂದು ಆತನನ್ನು ಕಚ್ಚಲು ಪ್ರಯತ್ನಿಸುತ್ತಿತ್ತು. ರಾಜನ ಸಮೀಪದಲ್ಲೇ ಇದ್ದ ಆ ಯುವಕ ರಾಜನನ್ನು ರಕ್ಷಿಸಲು ಪ್ರಯತ್ನ ಪಟ್ಟ.ಆದರೆ ಅಷ್ಟರಲ್ಲಿ ಹಾವು ಆತನನ್ನುಕಚ್ಚಿಯಾಗಿತ್ತು.ತನ್ನನ್ನು ರಕ್ಷಿಸಲು ಪ್ರಯತ್ನ ಪಟ್ಟ ಆ ಯುವಕನ ಪ್ರಯತ್ನಕ್ಕೆ ಮೆಚ್ಚಿದ ರಾಜ ಆತನನ್ನು ಬಳಿಗೆ ಕರೆದು 'ಇನ್ನು ಮುಂದೆ ನೀನು ನನ್ನ ಉತ್ತರಾಧಿಕಾರಿ,ಗದ್ದುಗೆ ಏರಿ ರಾಜ್ಯಭಾರ ಮಾಡು' ಎಂದು ಹೇಳಿ ಪ್ರಾಣ ಬಿಟ್ಟ.ಯುವಕ ರಾಜನಾದ. ತಂದೆಯ ಇಚ್ಛೆಯನ್ನು ತಾಯಿಯಿಂದ ತಿಳಿದುಕೊಂಡಿದ್ದ ಈತ ಒಂದು ದಿನ ತಂದೆಯ ಪಿಂಡದಾನಕ್ಕಾಗಿ ಗಯಾಕ್ಕೆ ಹೋದ. ಪಿಂಡದಾನ ಮಾಡುವ ಸಂದರ್ಭದಲ್ಲಿ ಆತನ ಮುಂದೆ ಮೂರು ಕೈಗಳು ಚಾಚಿದವು. ಒಂದು-ಜನ್ಮ ನೀಡಿದ ತಂದೆಯದ್ದು,ಇನ್ನೊಂದು ಎಲ್ಲ ಆಸ್ತಿಯನ್ನು ದೋಚಿ ತಾಯಿಯನ್ನು ಅನಾಥಳನ್ನಾಗಿ ಮಾಡಿದ ಕಳ್ಳನದ್ದು,ಇನ್ನೊಂದು ತನಗೆ ರಾಜ ಪಟ್ಟ ನೀಡಿದ ರಾಜನದ್ದು, ಆದರೆ ಆ ಮಗ ತನ್ನ ಪಿಂಡದಾನ ಮಾಡಬಲ್ಲ ಪುತ್ರ ಬೇಕು ಎಂದು ಮನಸಾರೆ ಬಯಸಿದ್ದ ತಂದೆಗೇ ಪಿಂಡದಾನ ಮಾಡಿ ಹಿಂತಿರುಗಿ ಬರುತ್ತಾನೆ.

ಹೀಗೆ ನಮ್ಮ ಜೀವನದಲ್ಲಿ ಯಾವುದೇ ಏರಿಳಿತ ಬರಲಿ ನಮ್ಮ ಅದೃಷ್ಟ ಮೊದಲೇ ಬರೆದಿರುತ್ತದೆ.ಇದುವೇ ಕರ್ಮದ ಫಲ.ನಮ್ಮ ಕರ್ಮಕ್ಕೆ ತಕ್ಕ ಪ್ರತಿಫಲ ಸಿಗುವುದು.ಯಾವುದಕ್ಕೂ ತಲೆಬಿಸಿ ಮಾಡುವ ಅಗತ್ಯವಿಲ್ಲ.

ಈ ಸಂಸಾರ ಸುಳ್ಳು.ಇಲ್ಲಿ ಯಾವುದೂ ಸತ್ಯವಿಲ್ಲ.ನಾವು ಕೂಡ ಸುಳ್ಳು.ಇಲ್ಲಿ ಎಲ್ಲವೂ ಪರಿವರ್ತನಾ ಶೀಲ.ಎಲ್ಲರೂ ಪರಿವರ್ತನಾ ಶೀಲರು.ಈ ಭೂಮಿ,ಪರಿಸರ,ಮಳೆ, ಗಾಳಿ, ಬೆಳಕು ಎಲ್ಲವೂ ಪರಿವರ್ತನಾ ಶೀಲವಾಗಿರುತ್ತದೆ.ನಾವು ಕೂಡ ಅಷ್ಟೇ ಪುಟ್ಟ ಮಗುವಾಗಿ ಜನ್ಮ ತಳೆದು,ಬಾಲ್ಯ, ಯವ್ವನ, ವೃದ್ಧಾಪ್ಯದ ಮೂಲಕ ದೇವರ ಪಾದ ಸೇರುತ್ತೇವೆ.ಇಲ್ಲಿ ಯಾರೂ ಇದ್ದಂತೆ ಇರಲು ಸಾಧ್ಯವಿಲ್ಲ,ಮನುಷ್ಯ ಸಂಬಂಧಗಳು ಕೂಡ ಪರಿಸ್ಥಿತಿಗೆ ತಕ್ಕಂತೆ ಬದಲಾಗುತ್ತವೆ.ಇಂದು ಅತ್ಯಂತ ಆಪ್ತವಾಗಿರುವ ದಂಪತಿಗಳು ಮುಂದೆ ಬೇರ್ಪಡುತ್ತಾರೆ. ಇಂದು ತಾಯಿಯನ್ನು ಅತಿಯಾಗಿ ಪ್ರೀತಿಸುತ್ತಿದ್ದ ಮಗ ಮುಂದೆ ಒಂದು ದಿನ ಆಕೆಯನ್ನು ವೃದ್ಧಾಶ್ರಮಕ್ಕೆ ತಳ್ಳುವ ನಿರ್ಧಾರಕ್ಕೆ ಬರುತ್ತಾನೆ.ಹೀಗಾಗಿ ಸಂಬಂಧಗಳು ಕೂಡ ಇಲ್ಲಿ ಶಾಶ್ವತವಲ್ಲ,ಎಲ್ಲವೂ ಕ್ಷಣಿಕ, ಯಾವುದೂ ಸ್ಥಿರವಿಲ್ಲ.ನಾವೆಲ್ಲಾ ಸುಳ್ಳನ್ನೇ ಸತ್ಯ ಎಂದು ಭಾವಿಸಿ ಜೀವಿಸುವವರು. ಚಿತ್ರಮಂದಿರಕ್ಕೆ ಹೋಗಿ ಪರದೆಯಲ್ಲಿ ಬರುವ ಪಾತ್ರಗಳು ಸುಳ್ಳು ಎಂದು ತಿಳಿದಿದ್ದರೂ ಭಾವನಾತ್ಮಕವಾಗಿ ಅತ್ತು ಹಿಂದೆ ಬರುತ್ತೇವೆ. ಆ ಪಾತ್ರಗಳೊಂದಿಗೆ ನಗುತ್ತೇವೆ,ಅಳುತ್ತೇವೆ. ಜಾದೂಗಾರ ಕೂಡ ಕೆಲವು ಜಾದುಗಳನ್ನು ಮಾಡಿ ಸತ್ಯ ಎಂದು ಭಾವಿಸುವಂತೆ ನಮ್ಮನ್ನು ಮರಳುಗೊಳಿಸುತ್ತಾನೆ.ಹಾಗಿರುವಾಗ ನಾವು ನೋಡುತ್ತಿರುವ ಎಲ್ಲವೂ ಸತ್ಯವಲ್ಲ,ಎಲ್ಲವೂ ವಾಸ್ತವವಲ್ಲ.ಹಾಗಾದರೆ ಸತ್ಯ ಏನು ,ವಾಸ್ತವ ಏನು ಎಂಬ ಪ್ರಶ್ನೆ ಎದುರಾದಾಗ ಸಿಗುವ ಒಂದೇ ಉತ್ತರ, 'ಅವನೇ ದೇವರು, ಅವನೇ ವಾಸ್ತವ!'

ಯಾವ ಸಮಯದಲ್ಲೂ ಕೈ ಬಿಡದವನು ದೇವರು. ಈ ಸಂಸಾರದಲ್ಲಿ ಸುಳ್ಳುಗಳೆಲ್ಲಾ ಸತ್ಯವಾಗಿ ಕಾಣುತ್ತದೆ. ಭೀಮ ಜರಾಸಂಧನೊಂದಿಗೆ ಯುದ್ಧ ಮಾಡಿ ಅವನನ್ನು ಕೊಂದರೂ,ಆತ ಮತ್ತೆ ಮತ್ತೆ ಜೀವಂತನಾಗುತ್ತಿದ್ದ.ಭೀಮ ಸೋತು ಸುಣ್ಣವಾಗಿ ಕೃಷ್ಣನಿಗೆ ಹೇಳಿದ 'ನನಗೆ ಯುದ್ಧ ಮಾಡಿ ಮಾಡಿ ಸಾಕಾಯಿತು. ಜರಾಸಂಧನನ್ನು ಕೊಲ್ಲಲು ಆಗುತ್ತಿಲ್ಲ' ಎಂದು.ಆಗ ಶ್ರೀ ಕೃಷ್ಣ 'ನಾಳೆ ನೀನು ಅವನೊಂದಿಗೆ ಯುದ್ಧ ಮಾಡುವಾಗ ನನ್ನನ್ನು ನೋಡು' ಎಂದ.ಹಾಗೆಯೇ ಯುದ್ಧದ ಸಂದರ್ಭದಲ್ಲಿ ಭೀಮ ಶ್ರೀ ಕೃಷ್ಣನನ್ನು ನೋಡಿದಾಗ ಆತನ ಸನ್ನೆಯ ಮೇರೆಗೆ ಅಸ್ತ್ರವನ್ನು ಬಳಸಿದ ಮತ್ತು ಜರಾಸಂಧನನ್ನು ಕೊಂದ.ಭೀಮ ಹಲವು ಬಾರಿ ತನ್ನದೇ ಬುದ್ಧಿಮತ್ತೆಯನ್ನು ಉಪಯೋಗಿಸಿ ಜರಾಸಂಧನನ್ನು ಕೊಲ್ಲಲು ಪ್ರಯತ್ನಿಸಿದ್ದ.ಆದರೆ ಅದು ಅವನಿಂದ ಸಾಧ್ಯವಾಗದೆ ಕೊನೆಗೆ ಪರಮಾತ್ಮನಿಗೆ ಶರಣಾಗಬೇಕಾಯಿತು.ನಾವು ಕೂಡಾ ' ನಾನು ನನ್ನ ಕೆಲಸವನ್ನು ಮಾಡುತ್ತೇನೆ,ನನಗೆ ಪರಮಾತ್ಮನ ಅಗತ್ಯವಿಲ್ಲ' ಎಂದು ಭಾವಿಸಿದರೆ ಒಂದಲ್ಲ ಒಂದು ದಿನ ಅವನಿಗೆ ತಲೆಬಾಗಲೇ ಬೇಕಾಗುತ್ತದೆ.ದ್ರೌಪದಿಯನ್ನು ಮದುವೆಯಾಗುವಾಗ ಅರ್ಜುನ ಆಕೆಗೆ ಭಾಷೆ ಕೊಟ್ಟಿದ್ದ.ನಿನಗೆ ಕಷ್ಟವಾಗದಂತೆ ನೋಡಿಕೊಳ್ಳುತ್ತೇನೆ,ನಿನ್ನ ಪ್ರತೀ ಸುಖ ಕಷ್ಟದಲ್ಲೂ ನಾನಿದ್ದೇನೆ ಎಂದು,ಆದರೆ ತುಂಬಿದ ಸಭೆಯಲ್ಲಿ ದುಶ್ಯಾಸನ ಸೀರೆ ಎಳೆಯುತ್ತಿದ್ದರೆ ದ್ರೌಪದಿ ತನ್ನ ಗಂಡಂದಿರನ್ನೆಲ್ಲ ಕರೆದು ಕೂಗಿದಳು.ಯಾರೂ ಸಹಾಯಕ್ಕೆ ಬರಲಿಲ್ಲ,ಅರ್ಜುನನೂ ಮೂಕ ಪ್ರೇಕ್ಷಕನಂತೆ ಮೌನವಾಗಿದ್ದ.ಕೊನೆಗೂ ವಿಧಿಯಿರದೆ ದ್ರೌಪದಿ ಪರಮಾತ್ಮನನ್ನೇ ಕರೆಯಬೇಕಾಯಿತು.

ಶಾರದಾ ಎ ಅಂಚನ್, ಕೊಡವೂರು

ದೇವರು ಎಲ್ಲರ ಕರೆಗೆ ಓಗೊಡುತ್ತಾನೆ.ಆದರೆ ನಮ್ಮ ಕರೆಯುವಿಕೆಯಲ್ಲಿ ವಿಶ್ವಾಸ ಇಲ್ಲದ ಕಾರಣ ದೇವರು ಸಹಾಯಕ್ಕೆ ಬರಲು ಹಿಂದೇಟು ಹಾಕುತ್ತಾನೆ ಅಷ್ಟೇ...! ಮೀರಾ ಪ್ರಾರಂಭದಿಂದಲೂ ಒಂದೇ ರಾಗವನ್ನು ಹಾಡುತ್ತಿದ್ದಳು 'ಮೆರತೋ ಗಿರಿಧರ್ ಗೋಪಾಲ್.ದೂಸರಾ ನಾ ಕೋಯ್ ನಹಿ' ಹಾಗಾಗಿ ಆಕೆ ದೇವರಲ್ಲಿ ಲೀನವಾಳು.

ಜೀವನ ನಾಲ್ಕು ದಿನದ ಆಟ.ಇದನ್ನು ಎಷ್ಟು ಬೇಕೋ ಅಷ್ಟು ಅನುಭವಿಸಬೇಕು ಎನ್ನುವುದು ಈ ಸಂಸಾರದ ಬುದ್ಧಿವಂತರ ಅಂಬೋಣ.ಆದರೆ ಆ ಭಗವಂತನ ಇಚ್ಛೆಯ ವಿನಃ ಒಂದು ಕ್ಷಣವನ್ನೂ ನಮ್ಮ ಮರ್ಜಿಯಂತೆ ಜೀವಿಸಲು ಸಾಧ್ಯವಿಲ್ಲ ಎನ್ನುವುದು ಈ ಜನರಿಗೆ ತಿಳಿದಿಲ್ಲ.ಈ ಜಗತ್ತಿನಲ್ಲಿ ಕಡು ಬಡವನಿಗೂ ಸುಖ ಶಾಂತಿ,ಅತೀ ಶ್ರೀಮಂತನಿಗೂ ಮುಗಿಯಲಾರದ ಅಶಾಂತಿ ಇದೆ.ಯಾಕೆಂದರೆ ಇದು ಅವರವರ ಕರ್ಮಕ್ಕನುಸಾರವಾಗಿ ಪಡೆದುಕೊಂಡು ಬಂದದ್ದು. ಹಾಗಿರುವಾಗ 'ಭಗವಂತನಿಂದ ನನಗೇನೂ ಸಂಬಂಧವಿಲ್ಲ,ನಾನು ನನ್ನ ಇಚ್ಛೆಯಂತೆ ಬದುಕುತ್ತೇನೆ' ಎನ್ನುವ ದುರಹಂಕಾರ ಒಡಲಲ್ಲಿ ತುಂಬಿಕೊಂಡಿದ್ದರೂ ಒಂದಲ್ಲ ಒಂದು ದಿನ 'ಓಹ್! ದೇವರೇ ...'ಎನ್ನುವ ಆರ್ತನಾದ ಹಾಕಲೇಬೇಕು. ಹಾಗಿರುವಾಗ ದಿನನಿತ್ಯ ಆತನ ನೆನಪಿನೊಂದಿಗೆ ಬದುಕುತ್ತಾ, ಎಲ್ಲವೂ ನಿನ್ನಿಚ್ಛೆಯಂತೆ ಎಂದು ಸ್ಮರಿಸುತ್ತಾ... ಮುಂದೊಂದು ದಿನ ಖುಷಿಯಿಂದಲೇ ಆತನ ಪಾದ ಸೇರುವುದು ಒಳ್ಳೆಯದಲ್ಲವೇ? ಯಾಕೆಂದರೆ ನಾವೆಲ್ಲರೂ ಈ ಜಗತ್ತಿನ ಪಾತ್ರದಾರಿಗಳು.ಸೂತ್ರಧಾರಿ ಅವನೊಬ್ಬನೇ ....

ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸಿದ್ದಿ ವಿನಾಯಕ ಮಂದಿರ ಭೇಟಿ ವೇಳೆ ತೋನ್ಸೆ ಜಯಕೃಷ್ಣ ಶೆಟ್ಟಿಯವರಿಂದ ದೇಗುಲದ ವೈಶಿಷ್ಟ್ಯ ವಿವರಣೆ




ಮುಂಬಯಿ,ಜೂ.27- ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಜೂ.20 ರಂದು ಖಾಸಗಿ ಕಾರ್ಯಕ್ರಮದ ನಿಮಿತ್ತ ಮುಂಬಯಿಗೆ ಆಗಮಿಸಿದ್ದ ಸಂದರ್ಭ ನಗರದ ಪ್ರಭಾದೇವಿಯ ಪ್ರಸಿದ್ಧ ಸಿದ್ಧಿವಿನಾಯಕ ಮಂದಿರಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದ ಸಂದರ್ಭದಲ್ಲಿ ಸರಕಾರೇತರ ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ) ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿಯ ಸಂಸ್ಥಾಪಕ ತೋನ್ಸೆ ಜಯಕೃಷ್ಣ ಶೆಟ್ಟಿ ಅವರು ಮುಖ್ಯಮಂತ್ರಿಗೆ ಸಾಥ್ ನೀಡಿ ಮಂದಿರದ ವೈಶಿಷ್ಟ್ಯಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಅಲ್ಲೇ ಇರುವ ಹನುಮಾನ್ ಮಂದಿರದಲ್ಲಿ ಶಿವಕುಮಾರ್ ದರ್ಶನ ಪಡೆದ ಸಂದರ್ಭ ಕೂಡ ತೋನ್ಸೆ ಜಯಕೃಷ್ಣ ಶೆಟ್ಟಿ ಮತ್ತು ಚಿಣ್ಣರ ಬಿಂಬದ ರೂವಾರಿ ಪ್ರಕಾಶ್ ಶೆಟ್ಟಿ ಅವರು ಉಪಸ್ಥಿತರಿದ್ದರು. ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಮುಂಬಯಿಗೆ ಆಗಮಿಸಿದ ಶಿವಕುಮಾರ್ ಅವರೊಂದಿಗೆ ನಗರದ ವಿಮಾನನಿಲ್ದಾಣದಿಂದ ಜೊತೆಗಿದ್ದ ತೋನ್ಸೆ ಜಯಕೃಷ್ಣ ಶೆಟ್ಟಿ ಅವರು ಶಿವಕುಮಾರ್ ಜತೆಗೆ ಪ್ರಮುಖ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸುವ ಅವಕಾಶ ಪಡೆದುಕೊಂಡರು.

ಬಹ್ರೇನ್ ಮೇಲೆ ಇರಾನ್ ಡ್ರೋನ್ ದಾಳಿ; ಹಾರ್ಮುಜ್ ಜಲಸಂಧಿಯಲ್ಲಿ ಹಡಗಿನ ಮೇಲೆ ಗುರಿ

ದುಬೈ, ಜೂ.27 - ಅಮೆರಿಕದ ರಾತ್ರಿಯ ವಾಯುದಾಳಿಗೆ ಟೆಹ್ರಾನ್‌ನ ಪ್ರತಿಕ್ರಿಯೆಯಾಗಿ, ಹಾರ್ಮುಜ್ ಜಲಸಂಧಿಯಲ್ಲಿ ಪ್ರತ್ಯೇಕವಾಗಿ ಒಂದು ಹಡಗು ಶನಿವಾರ ದಾಳಿಗೆ ಒಳಗಾಗಿದ್ದು, ಇರಾನ್ ಬಹ್ರೇನ್‌ನ್ನು ಗುರಿಯಾಗಿಸಿಕೊಂಡು ಡ್ರೋನ್ ದಾಳಿಯನ್ನು ಆರಂಭಿಸಿತು.

ಪರ್ಷಿಯನ್ ಕೊಲ್ಲಿಯಲ್ಲಿನ ದಾಳಿಗಳು ಇರಾನ್ ಮತ್ತು ಅಮೆರಿಕ ಸಂಘರ್ಷವನ್ನು ಕೊನೆಗೊಳಿಸಲು ಅಂತಿಮ ಒಪ್ಪಂದಕ್ಕೆ ಪ್ರಯತ್ನಿಸಿ ಅದನ್ನು ಒಪ್ಪಿಕೊಳ್ಳಲು ಮಧ್ಯಂತರ ಒಪ್ಪಂದವನ್ನು ತಲುಪಿದ ಬಳಿಕವೂ, ಇರಾನ್ ಯುದ್ಧವು ಮತ್ತೆ ನಿಯಂತ್ರಣ ತಪ್ಪುವ ಅಪಾಯವನ್ನು ತೋರಿಸುತ್ತದೆ.

ಗುರುವಾರ ಜಲಸಂಧಿಯಿಂದ ಹೊರಹೋಗಲು ಪ್ರಯತ್ನಿಸುತ್ತಿದ್ದ ಕಂಟೇನರ್ ಹಡಗಿನ ಮೇಲೆ ಇರಾನಿನ ಡ್ರೋನ್ ದಾಳಿಗೆ ಪ್ರತಿಕ್ರಿಯೆಯಾಗಿ ಅಮೆರಿಕ ರಾತ್ರಿಯಿಡೀ ವಾಯುದಾಳಿ ನಡೆಸಿತ್ತು, ಇದು ಯುದ್ಧದ ಅಹಿತಕರ ಕದನ ವಿರಾಮವನ್ನು ಮತ್ತೆ ಅಲುಗಾಡುವಂತೆ ಮಾಡಿದೆ. ಈ ಮಧ್ಯೆ ನೌಕಾಪಡೆಯ ಮೇಲ್ವಿಚಾರಣೆಯಲ್ಲಿರುವ ಬಹುರಾಷ್ಟ್ರೀಯ ನೌಕಾ ಸಂಸ್ಥೆ ಶನಿವಾರ ಜಲಸಂಧಿಯಲ್ಲಿ ಒಮಾನ್ ಬಳಿಯ ಮಾರ್ಗವನ್ನು ವಿಸ್ತರಿಸುವುದಾಗಿ ಹೇಳಿಕೊಂಡಿದೆ. ಇದು ಒಳಬರುವ ಮತ್ತು ಹೊರಹೋಗುವ ಸಂಚಾರಕ್ಕೆ ಅವಕಾಶ ನೀಡುತ್ತದೆ ಎಂದು ಹೇಳಿದರು.

ಪೊಲೀಸ್ ತನಿಖೆ ಪ್ರಕಾರ ಕಠಿಣ ಕ್ರಮ ; ಸಚಿವ ದಾದಾ ಭೂಸೆ ಭರವಸೆ

ಮೊದಲ ಪುಟದಿಂದ

ಟಿಇಟಿ ಪತ್ರಿಕೆ ಸೋರಿಕೆ ಎಂದರೆ ಇದು ಕೇವಲ ಒಂದು ಪರೀಕ್ಷೆಯ ಹಗರಣವಲ್ಲ, ಬದಲಾಗಿ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಮೇಲಿನ ದರೋಡೆ. ಹಗಲಿರುಳು ಓದುವ ಪ್ರಾಮಾಣಿಕ ವಿದ್ಯಾರ್ಥಿಗಳ ಕಠಿಣ ಪರಿಶ್ರಮವನ್ನು ರದ್ದುಗೊಳಿಸುವ ಈ ವ್ಯವಸ್ಥೆಯು ನಿಖರವಾಗಿ ಯಾರ ರಕ್ಷಣೆಯಲ್ಲಿದೆ?ಎಂದು ಎನ್‌ಸಿಪಿ (ಎಸ್‌ಪಿ) ಮಹಿಳಾ ರಾಜ್ಯ ಘಟಕದ ಅಧ್ಯಕ್ಷೆ ರೋಹಿಣಿ ಖಡ್ಸೆ ಅವರು ಹೇಳಿದ್ದಾರೆ.

ಪ್ರತಿ ಬಾರಿ ಪತ್ರಿಕೆ ಸೋರಿಕೆಯಾದಾಗ, ತನಿಖೆ ಘೋಷಿಸಲಾಗುತ್ತದೆ, ಕೆಲವು ಜನರನ್ನು ಬಂಧಿಸಲಾಗುತ್ತದೆ ಮತ್ತು ಬಳಿಕ ಕೆಲವು ದಿನಗಳ ಮೇಲೆ ಎಲ್ಲವೂ ಶಾಂತವಾಗುತ್ತದೆ. ಆದರೆ ವಿದ್ಯಾರ್ಥಿಗಳ ಜೀವನದಲ್ಲಿ ಕಳೆದುಹೋದ ತಿಂಗಳುಗಳು, ಆರ್ಥಿಕ ನಷ್ಟ ಮತ್ತು ಮಾನಸಿಕ ಯಾತನೆಯನ್ನು ಯಾರು ಸರಿದೂಗಿಸುತ್ತಾರೆ?. ನೀಟ್ ಪತ್ರಿಕೆ ಸೋರಿಕೆಯ ಉದಾಹರಣೆ ಹೊಸದಾಗಿದ್ದಾಗ, ಟಿಇಟಿ ಪತ್ರಿಕೆ ಸೋರಿಕೆಯನ್ನು ತಡೆಯಲು ಸರಿಯಾದ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಈ ವಿಷಯದಲ್ಲಿ ನನಗೆ ಇನ್ನೂ ಮಾಹಿತಿ ಸಿಕ್ಕಿಲ್ಲ. ಘಟನೆ ನಡೆದಿದೆಯೋ ಇಲ್ಲವೋ ಎಂಬುದು ತನಿಖೆಗೆ ಅರ್ಹವಾದ ವಿಷಯ. ಆದಾಗ್ಯೂ, ಘಟನೆ ನಡೆದಿದ್ದರೂ ಕೂಡ ಅದು ತುಂಬಾ ಗಂಭೀರ ವಿಷಯವಾಗಿದೆ. ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅಂತಹ ಘಟನೆಗಳ ಮೇಲೆ ನಿಗಾ ಇಡುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಕೂಡ ನೀಟ್ ಪತ್ರಿಕೆ ಸೋರಿಕೆ ಪ್ರಕರಣದ ಬಗ್ಗೆ ಗಮನ ಹರಿಸಿದ್ದರು. ಈ ವಿಷಯದಲ್ಲಿ ನಿಖರವಾಗಿ ಏನಾಯಿತು ಎಂಬುದರ ಕುರಿತು ಮಾಹಿತಿ ಪಡೆದ ಬಳಿಕವೇ ಮಾತನಾಡುವುದು ಸೂಕ್ತ ಎಂದು ಸಚಿವ ಗಿರೀಶ್ ಮಹಾಜನ್ ಪ್ರತಿಕ್ರಿಯಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಏನು ನಡೆಯುತ್ತಿದೆ?. ಥಾಣೆಯಲ್ಲಿ ಟಿಇಟಿ ಪತ್ರಿಕೆ ಸೋರಿಕೆಯಾಗಿದೆ. ರಾಷ್ಟ್ರಮಟ್ಟದ ನೀಟ್ ಪತ್ರಿಕೆ ಸೋರಿಕೆಯ ಎಳೆಗಳು ಮಹಾರಾಷ್ಟ್ರದಲ್ಲಿಯೂ ಕಂಡುಬಂದಿವೆ. ಪತ್ರಿಕೆಗಳು ಹೇಗೆ ಸೋರಿಕೆಯಾಗುತ್ತವೆ? ಇದು ಸರಕಾರದ ವೈಫಲ್ಯ. ಸರಕಾರವು ಈ ಪರೀಕ್ಷೆಗಳನ್ನು ಸರಿಯಾಗಿ ನಡೆಸಲು ಸಾಧ್ಯವಿಲ್ಲ. ಈ ಸರಕಾರವು ವಿದ್ಯಾರ್ಥಿಗಳೊಂದಿಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ ಎಂದು ಕಾಂಗ್ರೆಸ್ ನಾಯಕ ವಿಜಯ್ ವಡೆಟ್ಟಿವಾರ್ ಆರೋಪಿಸಿದ್ದಾರೆ.

ಥಾಣೆ: 39 ಕೋಟಿ ರೂ. ಮೌಲ್ಯದ 600 ಕೆಜಿ ಮಾದಕ ದ್ರವ್ಯ ನಾಶ

ಥಾಣೆ, ಜೂ. 27 - ಅಂತಾರಾಷ್ಟ್ರೀಯ ಮಾದಕ ದ್ರವ್ಯ ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನದ ಅಂಗವಾಗಿ ಮಹಾರಾಷ್ಟ್ರದ ಥಾಣೆ ಜಿಲ್ಲೆಯಲ್ಲಿ ಪೊಲೀಸರು 39.03 ಕೋಟಿ ರೂ. ಮೌಲ್ಯದ ಕನಿಷ್ಠ 600 ಕೆಜಿ ಮಾದಕ ದ್ರವ್ಯಗಳನ್ನು ನಾಶಪಡಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

112 ಅಪರಾಧಗಳಿಗೆ ಸಂಬಂಧಿಸಿದ ವಶಪಡಿಸಿಕೊಂಡ ಕಳ್ಳಸಾಗಣೆ ವಸ್ತುವನ್ನು ಶುಕ್ರವಾರ ನವಿ ಮುಂಬೈನ ತಲೋಜಾ ಎಂಐಡಿಸಿಯಲ್ಲಿರುವ ಮುಂಬೈ ತ್ಯಾಜ್ಯ ನಿರ್ವಹಣಾ ಕಂಪನಿಯಲ್ಲಿ ಸುಟ್ಟುಹಾಕಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಈ ಪ್ರಮುಖ ಕಾರ್ಯಾಚರಣೆಯು ಥಾಣೆ ಪೊಲೀಸರ ಮಾದಕ ವಸ್ತು ಪಿಡುಗನ್ನು ನಿರ್ಮೂಲನೆ ಮಾಡುವ ಮತ್ತು ಯುವಕರನ್ನು ರಕ್ಷಿಸುವ ಅಚಲ ಬದ್ಧತೆಯನ್ನು ಒತ್ತಿಹೇಳುತ್ತದೆ.

ಮಹಾರಾಷ್ಟ್ರ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಮುಂದೂಡಿಕೆ

ಮೊದಲ ಪುಟದಿಂದ

ಪರೀಕ್ಷಾ ದುಷ್ಕೃತ್ಯದ ಬಗ್ಗೆ ಶೂನ್ಯ ಸಹಿಷ್ಣುತೆಯ ನೀತಿಯನ್ನು ವ್ಯಕ್ತಪಡಿಸಿದ ಎಂಎಸ್‌ಸಿಇ, ಸಂಪೂರ್ಣ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಕಾನೂನು ಜಾರಿ ಸಂಸ್ಥೆಗಳು ಈ ದಂಧೆಯ ಬಗ್ಗೆ ರಾಜಿಯಾಗದ, ಆಳವಾದ ತನಿಖೆ ನಡೆಸಲು ಅನುವು ಮಾಡಿಕೊಡಲು ಮುಂದೂಡಿಕೆ ಅಗತ್ಯವಾಗಿದೆ ಎಂದು ಹೇಳಿದೆ. ಎಂಎಸ್‌ಸಿಇ ಅಭ್ಯರ್ಥಿಗಳಿಗೆ ವದಂತಿಗಳನ್ನು ಅವಲಂಬಿಸದಂತೆ ಒತ್ತಾಯಿಸಿದೆಯಲ್ಲದೆ, ಟಿಇಟಿ 2026ರ ಪರಿಷ್ಕೃತ ದಿನಾಂಕಗಳು ಮತ್ತು ನವೀಕರಿಸಿದ ವೇಳಾಪಟ್ಟಿಗಳನ್ನು ಶೀಘ್ರದಲ್ಲೇ ಮಂಡಳಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಘೋಷಿಸಿದೆ. ಈ ಮಧ್ಯೆ ಅಭ್ಯರ್ಥಿಗಳಿಗೆ ಪರೀಕ್ಷೆಗೆ ಮರು-ನೋಂದಣಿ ಶುಲ್ಕವನ್ನು ವಿಧಿಸಲಾಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಎಂಎಸ್‌ಸಿಇ ಉಪ ಆಯುಕ್ತೆ ಪ್ರಿಯಾ ಶಿಂಧೆ ಅವರು, 37 ಸ್ಥಳಗಳ 1,728 ಕೇಂದ್ರಗಳಲ್ಲಿ ಕನಿಷ್ಠ 6 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಲು ನಿರ್ಧರಿಸಲಾಗಿದೆ ಎಂದು ಹೇಳಿದರು. 'ಈ ಪ್ರಮಾಣದ ಪರೀಕ್ಷೆಯನ್ನು ಆಯೋಜಿಸುವ ಪ್ರಕ್ರಿಯೆಯು ಸಾಮಾನ್ಯವಾಗಿ ಸುಮಾರು ಮೂರು ವಾರಗಳನ್ನು ತೆಗೆದುಕೊಳ್ಳುತ್ತದೆ. ಈಗಾಗಲೇ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ ಅಭ್ಯರ್ಥಿಗಳು ಮತ್ತೆ ನೋಂದಾಯಿಸಬೇಕಾಗಿಲ್ಲ. ಅಭ್ಯರ್ಥಿಗಳು ತಪ್ಪಿತಸ್ಥರಲ್ಲದ ಕಾರಣ, ಯಾವುದೇ ಮರು-ನೋಂದಣಿ ಶುಲ್ಕವನ್ನು ವಿಧಿಸಲಾಗುವುದಿಲ್ಲ' ಎಂದು ಅವರು ತಿಳಿಸಿದರು. ಮೂವರು ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದು, ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ, ಹೊಣೆಗಾರರೆಂದು ಕಂಡುಬಂದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಜನತೆಗೆ ಉದ್ಧವ್ ಠಾಕ್ರೆ ಮನವಿ

ಮೊದಲ ಪುಟದಿಂದ

ಥಾಣೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯ ಬಗ್ಗೆಯೂ ಪ್ರತಿಕ್ರಿಯಿಸಿದ ಮಾಜಿ ಮುಖ್ಯಮಂತ್ರಿ,ಥಾಣೆಯಲ್ಲಿ ಟಿಇಟಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ.ಅವರು ನೀಟ್‌ನಲ್ಲಿ ಸಿಕ್ಕಿಬಿದ್ದಿದ್ದಾರೆ.ಈ ಪಾಪದ ಬಗ್ಗೆ ಅವರಿಗೆ ಏನೂ ಅನಿಸುವುದಿಲ್ಲ. ಅದರತ್ತ ಗಮನ ಹರಿಸುವುದನ್ನು ತಪ್ಪಿಸಲು ನಮ್ಮ ಸಂಸದರನ್ನು ಖರೀದಿಸಲಾಗುತ್ತಿದೆ ಎಂದು ಆರೋಪಿಸಿದರು.

'ನನಗೆ ಶಿವಸೇನೆಯ ಅಧಿಕಾರ ಬೇಕು. ನನಗೆ ನ್ಯಾಯ ಬೇಕು. ನನಗೆ ಶಿವಸೇನೆಯ ಸಂಸದ ಬೇಕು' ಎಂದು ಹೇಳುವ ಮೂಲಕ ಮತ್ತೆ ಹೋರಾಡುವಂತೆ ಅವರು ಕಾರ್ಯಕರ್ತರಿಗೆ ಮನವಿ ಮಾಡಿದರು.

' ಹಿಂಗೋಲಿಯ ಜನರನ್ನು ನಾನು ವಿನಂತಿಸುತ್ತೇನೆ, ಈ ದೇಶದ್ರೋಹಿಗಳನ್ನು ಸಮಾಧಿ ಮಾಡಿ. ನೀವು ನಿಷ್ಠಾವಂತರು' ಎಂದು ಅವರು ತಿಳಿಸಿದರು.

ಮುಖ್ಯಮಂತ್ರಿ ಫಡ್ನವೀಸ್ ಮತ್ತು ನಾನು ಒಂದೇ ವಿಮಾನದಲ್ಲಿ ಒಟ್ಟಿಗೆ ಪ್ರಯಾಣಿಸಿದೆವು.ಅಲ್ಲಿ ಉನ್ನತ ಮಟ್ಟದ ಚರ್ಚೆ ನಡೆದಿದೆ ಎಂದು ಕೆಲವರು ಹೇಳುತ್ತಾರೆ.ಅದೆಲ್ಲ ಸುಳ್ಳು.ಆಪರೇಷನ್ ಟೈಗರ್ ಅಂದರೇನು. ಯಾರೂ ಹುಲಿಯ ಮೇಲೆ ಶಸ್ತ್ರಚಿಕಿತ್ಸೆ ಮಾಡಲು ಸಾಧ್ಯವಿಲ್ಲ.ಇದು ಆಪರೇಷನ್ ಟೈಗರ್ ಅಲ್ಲ. ಇದು ಆಪರೇಷನ್ ದೇವೇಂದ್ರ.ಅಮಿತ್ ಶಾಹ ಶಿವಸೇನಾ ಸಂಸದರನ್ನು ಮುರಿದು ಶಿಂದೆ ಬಳಿಗೆ ಕಳುಹಿಸಿದರು. ಇದು ನನ್ನ ಆರೋಪವಲ್ಲ, ಅದು ನನ್ನ ತಿಳುವಳಿಕೆ ಎಂದು ಅವರು ತಿಳಿಸಿದರು.

ಅಯೋಧ್ಯೆಯ ರಾಮ ಮಂದಿರದಲ್ಲಿ ಸ್ವೀಕರಿಸಿದ ದೇಣಿಗೆಗಳ ದುರುಪಯೋಗದ ಆರೋಪವನ್ನು ಬಿಜೆಪಿಯನ್ನು 'ಹಿಂದುತ್ವ'ದ ಮೇಲೆ ಗುರಿಯಾಗಿಸಿಕೊಂಡ ಠಾಕ್ರೆ, ಈ ಪಕ್ಷವು ಹಿಂದೂಗಳ ಭಾವನೆಗಳೊಂದಿಗೆ ಆಟವಾಡುವ ಮೂಲಕ ಅವರ ಭಾವನೆಗಳಿಗೆ ದ್ರೋಹ ಬಗೆದಿದೆ ಎಂದು ಆರೋಪಿಸಿದರು.

'ಬಿಜೆಪಿ-ಮುಕ್ತ ರಾಮ'ವನ್ನು ಖಚಿತಪಡಿಸಿಕೊಳ್ಳಲು ಪ್ರತಿಭಟನೆಗಳನ್ನು ಮುನ್ನಡೆಸುವುದಾಗಿಯೂ ಅವರು ಪ್ರತಿಜ್ಞೆ ಮಾಡಿದರು.

ಬಿಜೆಪಿಯು ನಿಜವಾದ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸಲು ರಾಜಕೀಯ ಪಕ್ಷಗಳನ್ನು ಒಡೆಯುತ್ತಿದೆ ಎಂದು ಅವರು ಆರೋಪಿಸಿದರು.

'ನಿಜವಾದ ಹಿಂದುತ್ವವು ಮಾನವೀಯತೆಯನ್ನು ಕಲಿಸುತ್ತದೆ. ದೇವಾಲಯಗಳನ್ನು ಲೂಟಿ ಮಾಡುವ ನಿಮ್ಮ (ಬಿಜೆಪಿಯ) ಹಿಂದುತ್ವವನ್ನು ನಾವು ತಿರಸ್ಕರಿಸುತ್ತೇವೆ. 'ಬಿಜೆಪಿ ಮುಕ್ತ ರಾಮ' ಎಂದು ನಾವು ಬಯಸುತ್ತೇವೆ ಮತ್ತು ಶಿವಸೇನೆ (ಯುಬಿಟಿ) ಅಂತಹ ಪ್ರತಿಭಟನೆಗಳನ್ನು ಮುನ್ನಡೆಸುತ್ತದೆ' ಎಂದು ಅವರು ಹೇಳಿದರು

ಬಳಿಕ ಯವತ್ಮಾಲ್ ಲೋಕಸಭಾ ಕ್ಷೇತ್ರದ ವಾಶಿಮ್‌ನಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಠಾಕ್ರೆ, ಬಂಡಾಯ ಸಂಸದ ಸಂಜಯ್ ದೇಶ್‌ಮುಖ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ,2029ರಲ್ಲಿ ಈ ಕ್ಷೇತ್ರದಿಂದ ನಡೆಯಲಿರುವ ಲೋಕಸಭಾ ಚುನಾವಣೆಗೆ ಡಾ. ಸಿದ್ಧಾರ್ಥ್ ಡಿಯೋಲ್ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿದರು. ಕೆಲವರು ಉದ್ಧವ್ ಠಾಕ್ರೆ ಬೇರೆ ಕಡೆ ಪ್ರಯಾಣಿಸುತ್ತಿಲ್ಲ ಎಂದು ಹೇಳಿದರು. ಆದ್ದರಿಂದ ನಾನು ಈಗ ನಿಜವಾದ ಶಿವಸೇನೆ ಏನೆಂದು ತೋರಿಸುತ್ತೇನೆ ಎಂದು ಹೇಳಿದೆ?. ಶಿವಸೇನೆ ಎಲ್ಲಿಗೂ ಹೋಗಿಲ್ಲ, ಶಿವಸೇನೆ ಸದಸ್ಯರು ಎಲ್ಲಿದ್ದರೂ ಅಲ್ಲೇ ಇದ್ದಾರೆ. ಆದರೆ ಈಗ ನಾವು ದೇಶದ್ರೋಹಿಗಳಿಗೆ ಅವಕಾಶ ನೀಡಲು ಬಯಸುವುದಿಲ್ಲ ಎಂದರು.

ವಾಮಂಜೂರು : ಕುಸುಮಾಕರ್ ಅಮೀನ್ ನಿಧನ



ಮಂಗಳೂರು ಜೂ. 27- ವಾಮಂಜೂರಿನ ಬೆನಕ ಹೋಟೇಲ್‌ನ ಮಾಲಕ ಕುಸುಮಾಕರ್ ಅಮೀನ್(58) ಅವರು ಹೃದಯಾಘಾತದಿಂದ ಜೂನ್ 25ರಂದು ಸ್ವಗೃಹದಲ್ಲಿ ನಿಧನ ಹೊಂದಿದರು.

ಅಪಾರ ದೈವ ಭಕ್ತರಾಗಿದ್ದ ಕುಸುಮಾಕರ್ ಅವರು ಪತ್ನಿ ಸೌಮ್ಯ ಪುತ್ರರಾದ ನಿಶಾನ್ ಹಾಗೂ ದೈವಿಕ್ ಸಹಿತ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮಲಾಡ್ : ವಿನುತಾ ಯು. ರಾವ್ ನಿಧನ



ಮುಂಬಯಿ, ಜೂ. 27- ಕುಮಾರ ಕ್ಷತ್ರಿಯ ಸಂಘ ಮುಂಬಯಿಯ ಗೌರವ ಕಾರ್ಯದರ್ಶಿ ಉಮಾನಾಥ್ ವಿ. ರಾವ್ ಅವರ ಪತ್ನಿ ಮಲಾಡ್ ಪೂರ್ವ ಇರಾನಿ ಕಾಲನಿ ನಿವಾಸಿ ವಿನುತಾ ಉಮಾನಾಥ್ ರಾವ್ (57) ಅಲ್ಪಕಾಲದ ಅಸೌಖ್ಯದಿಂದ ಜೂ. 26ರ ಶುಕ್ರವಾರದಂದು ನಿಧನರಾದರು.

ಮೂಲತಃ ಕಾಞಂಗಾಡ್ ನಿವಾಸಿಯಾದ ಮೃತರು, ಪತಿ, ಪುತ್ರಿ ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆಯು ಜ. 28ರ ಆದಿತ್ಯವಾರದಂದು ಬೆಳಿಗ್ಗೆ 10:00 ಗಂಟೆಗೆ ನಡೆಯಲಿದೆ. ಅವರ ನಿಧನಕ್ಕೆ ಕುಮಾರ ಕ್ಷತ್ರಿಯ ಸಂಘ ಮುಂಬಯಿಯ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಇರಾನಿ ಕಾಲನಿ ಶ್ರೀ ಶನಿಮಹಾತ್ಮಾ ಪೂಜಾ ಸಮಿತಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕೆಂಪೇಗೌಡರು ಹುಟ್ಟಿದ್ದು ಒಕ್ಕಲಿಗನಾಗಿ, ಬೆಳೆದಿದ್ದು ವಿಶ್ವಮಾನವನಾಗಿ : ಸಿಎಂ ಡಿ.ಕೆ. ಶಿವಕುಮಾರ್





ಬೆಂಗಳೂರು, ಜೂ.27- ಕೆಂಪೇಗೌಡರು ಹುಟ್ಟಿದ್ದು ಒಕ್ಕಲಿಗನಾಗಿ ಬೆಳೆದಿದ್ದು ವಿಶ್ವಮಾನವನಾಗಿ. ಇದನ್ನು ಯಾರೂ ಸಹ ಮರೆಯಬಾರದು. ಈ ಹಾದಿಯಲ್ಲಿಯೇ ನಾವೆಲ್ಲರೂ ನಡೆಯಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರೆ ನೀಡಿದರು.

ಯಲಹಂಕದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಒಕ್ಕಲಿಗರ ಸಮಿತಿ ಶನಿವಾರ ಆಯೋಜಿಸಿದ್ದ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಶಿವಕುಮಾರ್ ಅವರು ಮಾತನಾಡಿದರು. ಇಡೀ ವಿಶ್ವ ಬೆಂಗಳೂರನ್ನು ನೋಡುತ್ತಿದೆ. ಇದಕ್ಕೆ ಕಾರಣ ನಾಡಪ್ರಭು ಕೆಂಪೇಗೌಡರು. 500 ವರ್ಷಗಳ ಹಿಂದೆ ಈ ಭೂಮಿಗೆ ಪೂಜೆ ಮಾಡಿ ನಗರ ನಿರ್ಮಾಣ ಮಾಡಿದರು. ಇದನ್ನು ಬೆಂಗಳೂರು ವಾಸಿಗಳು ಮರೆಯಬಾರದು. ಈ ನಗರ ನಿರ್ಮಾಣ ಮಾಡುವಾಗ ಇದು ಇಷ್ಟು ದೊಡ್ಡಮಟ್ಟಕ್ಕೆ ಬೆಳೆಯುತ್ತದೆ ಎನ್ನುವುದು ಅವರಿಗೆ ಗೊತ್ತಿರಲಿಲ್ಲ. ಆದರೆ ಅವರ ದೂರದೃಷ್ಟಿ ಇಲ್ಲಿ ಕೆಲಸ ಮಾಡಿದೆ ಎಂದರು.

ನಾವುಗಳು ಯಾರೂ ಬೆಂಗಳೂರು ಕಟ್ಟಿದವರಲ್ಲ. ಆದರೆ ನಾವಿರುವ ಈ ನಗರವನ್ನು ಉಳಿಸಿ ಬೆಳೆಸಬೇಕು. ಮನೆ ಹುಷಾರು, ಮಠ ಹುಷಾರು ಎಂದು ಹಿರಿಯರು ಹೇಳಿದ್ದಾರೆ. ಅದರಂತೆ ನಾವು ನಮ್ಮ ಪರಂಪರೆ ಉಳಿಸಬೇಕು. ಕೆಂಪೇಗೌಡರು ಹಾಕಿಕೊಟ್ಟ ಅಡಿಪಾಯದಂತೆ ನಾವೆಲ್ಲರೂ ನಡೆಯುತ್ತಿದ್ದೇವೆ. ಅನೇಕ ವೃತ್ತಿಗಳನ್ನು ಉಳಿಸಲು ಮಾರ್ಗದರ್ಶನ ನೀಡಿದರು. ಅವರು ಹಾಕಿದ ಸಂಪ್ರದಾಯದಂತೆ ನಾವು ನಡೆಯುತ್ತಿದ್ದೇವೆ ಎಂದರು.

ಬೆಂಗಳೂರಿನಲ್ಲಿ ವಿದ್ಯೆ, ಆರೋಗ್ಯ, ವೃತ್ತಿ ದೊರೆಯುತ್ತದೆ. ಇಲ್ಲಿ ಪ್ರತಿಯೊಬ್ಬರೂ ಬದುಕನ್ನು ಕಟ್ಟಿಕೊಳ್ಳಬಹುದು ಎಂದು ಅನೇಕರು ಈ ನಗರಕ್ಕೆ ಬರುತ್ತಿದ್ದಾರೆ. ಬೆಂಗಳೂರು ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ನಗರ ವಿಸ್ತರಣೆ ಆಗುತ್ತಲೇ ಇದೆ. ಈ ನಗರಕ್ಕೆ ಬರುವವರನ್ನು ನಾವು ತಡೆಯಲು ಸಾಧ್ಯವಿಲ್ಲ. ಅದಕ್ಕೆ 'ವರ್ಟಿಕಲ್ ಬೆಳವಣಿಗೆ' ಬಗ್ಗೆ ನಾನು ಆಲೋಚನೆ ಮಾಡುತ್ತಿದ್ದೇನೆ ಎಂದರು.

ಎಲ್ಲಾ ಧರ್ಮ, ಜಾತಿಗಳಿಗೆ ಇಲ್ಲಿ ಬದುಕು ಕಟ್ಟಿಕೊಳ್ಳಲು ನಾವು ಆಸ್ಪದ ನೀಡಬೇಕಿದೆ. ದೇಹಕ್ಕೆ ಹೃದಯ ಮುಖ್ಯ. ಅದೇ ರೀತಿ ರಾಜ್ಯಕ್ಕೆ ಬೆಂಗಳೂರು ಮುಖ್ಯ. ಈ ಹಿಂದೆ ವಾಜಪೇಯಿ ಅವರು ಬೆಂಗಳೂರು ವಿಮಾನ ನಿಲ್ದಾಣ ಉದ್ಘಾಟನೆಗೆ ಬಂದಾಗ 'ಜಗತ್ತಿನ ಎಲ್ಲಾ ನಾಯಕರು ಈ ಮೊದಲು ದೆಹಲಿ, ಚೆನ್ನೈ, ಕಲ್ಕತ್ತಾಗೆ ಹೋಗುತ್ತಿದ್ದರು. ಆದರೆ ಈಗ ಬೆಂಗಳೂರು ನಂತರ ದೆಹಲಿಗೆ ಬರುವ ಸಂದರ್ಭ ಬಂದಿದೆ ಎಂದು ಹೇಳಿದ್ದರು ಎಂದರು.

ಬೆಂಗಳೂರಿನ ಆಸ್ತಿ ಮಾಲೀಕರ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ಇ ಖಾತೆ ಮೂಲಕ ಭೂ ಗ್ಯಾರಂಟಿ ನೀಡಲಾಗಿದೆ. ಈ ನಗರಕ್ಕೆ ಬಂದು ಕಷ್ಟ ಪಟ್ಟು ಆಸ್ತಿ ಸಂಪಾದಿಸಿದ್ದಾರೆ ಅವರ ಪರವಾಗಿ ನಮ್ಮ ಸರ್ಕಾರ ನಿಂತಿದೆ. ಬಿ ಖಾತೆಯಿಂದ ಎ ಖಾತೆ ಮಾಡಿಕೊಡಲಾಗುತ್ತಿದೆ. ಕಷ್ಟಕಟ್ಟು ಆಸ್ತಿ ಸಂಪಾದಿಸಿದವರ ಪರವಾಗಿ ನಮ್ಮ ಸರ್ಕಾರವಿದೆ ಎಂದರು.

ನಗರದ ಅಭಿವೃದ್ಧಿಗೆ 1.25 ಲಕ್ಷ ಕೋಟಿ ಕಾರ್ಯಕ್ರಮ ರೂಪಿಸಿದ್ದೇನೆ. ಕೆಂಪೇಗೌಡರು ಕೇವಲ ಒಕ್ಕಲಿಗರ ಆಸ್ತಿಯಲ್ಲ. ಎಲ್ಲಾ ಜಾತಿ ಧರ್ಮದವರನ್ನು ಸೇರಿಸಿ ಈ ಕಾರ್ಯಕ್ರಮ ರೂಪಿಸಬೇಕು. ಆಗ ಮಾತ್ರ ಕೆಂಪೇಗೌಡರಿಗೆ ಗೌರವ ಸಲ್ಲಿಸಿದಂತೆ ಆಗುತ್ತದೆ ಎಂದರು. ಕೃಷ್ಣ ಬೈರೇಗೌಡರು ವಿಮಾನ ನಿಲ್ದಾಣ ರಸ್ತೆಯಲ್ಲೇ ಬೆಂಗಳೂರು ಉತ್ತರದ ಕಚೇರಿಯನ್ನು ಬಹಳ ವಿಜೃಂಭಣೆಯಿಂದ ಕಟ್ಟಬೇಕು ಎಂದು ಜಾಗವನ್ನು ನಿಗದಿ ಮಾಡಿದ್ದಾರೆ. ಬೆಂಗಳೂರು ಅಭಿವೃದ್ಧಿ ಎಂದರೆ ಜನಸಾಮಾನ್ಯರ ಅಭಿವೃದ್ಧಿ ಎಂದು ಹೇಳಿದರು.

ಕೆಎಚ್ ಬಿಯಿಂದ ಬೆಂಗಳೂರು ಉತ್ತರ ತಾಲ್ಲೂಕು ಒಕ್ಕಲಿಗರ ಸಂಘಕ್ಕೆ ನೀಡಿರುವ ನಿವೇಶನಕ್ಕೆ 3.5 ಕೋಟಿ ಕಟ್ಟಬೇಕು ಎಂದು ಹೇಳಲಾಗಿತ್ತು. ಇದರ ಬಗ್ಗೆ ಸಂಸದ ಸುಧಾಕರ್ ಅವರು, ಮಾಜಿ ಶಾಸಕರಾದ ಗಂಟಿಗಾನಹಳ್ಳಿ ಕೃಷ್ಣಪ್ಪ ಅವರು ದರ ಕಡಿಮೆಗೆ ಮನವಿ ಮಾಡಿದ್ದಾರೆ. ಎಲ್ಲರ ಮನವಿಯಂತೆ ಈ ಜಾಗಕ್ಕೆ ಶೇ 10 ರಷ್ಟು ದರ ನಿಗದಿ ಮಾಡಲಾಗುವುದು ಎಂದು ಮುಖ್ಯಮಂತ್ರಿಯವರು ವೇದಿಕೆಯಲ್ಲೇ ರಿಯಾಯಿತಿ ಘೋಷಣೆ ಮಾಡಿದರು. ಕಳೆದ ಮೂರು ವರ್ಷಗಳಿಂದ ಉತ್ತಮವಾಗಿ ಮಳೆ ಬಂದಿತ್ತು. ಆದರೆ ಈ ವರ್ಷ ಇಡೀ ದೇಶದಲ್ಲಿ ಬರಗಾಲ ಆಗುವ ಸಂಭವಿಸಿದೆ. ನಾವೆಲ್ಲರೂ ಸೇರಿ ಬರಗಾಲ ಎದುರಿಸಬೇಕು. ರೈತರನ್ನು ಉಳಿಸಬೇಕು ಎಂದು ತಿಳಿಸಿದರು.

ತುಂಗಭದ್ರಾ ಅಣೆಕಟ್ಟು ಉಳಿಸಲು ಮೂರು ರಾಜ್ಯದ ಮುಖ್ಯಮಂತ್ರಿಗಳು ಸೇರಿ ಕೇಂದ್ರ ಜಲಶಕ್ತಿ ಸಚಿವರ ಸಮ್ಮುಖದಲ್ಲಿ ತೀರ್ಮಾನ ಮಾಡಿದ್ದೇವೆ. ಈ ಹಿಂದೆ ಇಂದಿರಾಗಾಂಧಿ ಅವರ ನೇತೃತ್ವದಲ್ಲಿ ಕಾವೇರಿ ಕುಡಿಯುವ ನೀರಿನ ಬಗ್ಗೆ ತೀರ್ಮಾನ ಮಾಡಲಾಗಿತ್ತು. ಅದೇ ರೀತಿ ಕೇಂದ್ರ ಜಲಶಕ್ತಿ ಸಚಿವರ ನೇತೃತ್ವದಲ್ಲಿ ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ತೆಲಂಗಾಣ ಸಿಎಂ ರೇವಂತ ರೆಡ್ಡಿ ಹಾಗು ನಾನು ಸೇರಿ ಸಭೆ ನಡೆಸಿ ಒಂದು ಒಪ್ಪಂದಕ್ಕೆ ಬಂದಿದ್ದೇವೆ. ಈ ನೆಲ ಜಲಕ್ಕಾಗಿ ನಾವುಗಳೇ ಸಂಘರ್ಷ ಮಾಡಿಕೊಳ್ಳಬಾರದು. ನಾವೆಲ್ಲರೂ ಭಾರತೀಯರು, ಮಣ್ಣಿನ ಮಕ್ಕಳು. ಈ ಬೆಂಗಳೂರು ರೈತರ ತ್ಯಾಗದಿಂದ ಬೆಳೆದಿದೆ ಎಂದರು.

ನಂತರ ಶಿವಕುಮಾರ್ ಅವರು ವಿಧಾನಸೌಧದ ಆವರಣದಲ್ಲಿರುವ ಕೆಂಪೇಗೌಡ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿ, ಬೆಂಗಳೂರನ್ನು ಮತ್ತೆ ಉದ್ಯಾನ ನಗರಿ ಮಾಡಲು ಇಂದು 15 ಲಕ್ಷ ಸಸಿ ನೆಡುತ್ತಿದ್ದೇವೆ. ಬೆಂಗಳೂರು ಹಾಗೂ ಸುತ್ತಮುತ್ತಲಿನ ಅರಣ್ಯ ಇಲಾಖೆ ಜಾಗಗಳಲ್ಲಿ ಉದ್ಯಾನ ನಿರ್ಮಿಸಲು ತೀರ್ಮಾನಿಸಲಾಗಿದೆ. ಆ ಮೂಲಕ ಬೆಂಗಳೂರಿನಲ್ಲಿ ಹಸಿರು ಉಳಿಸಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಭೂ ಮಾಲೀಕರ ತ್ಯಾಗ ಸ್ಮರಣೆಗೆ ವಾಲ್ ಆಫ್ ಗ್ಯಾಟಿಟ್ಯೂಡ್ : ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್



ಬೆಂಗಳೂರು, ಜೂ.27 - ಕೈಗಾರಿಕಾ ಪ್ರದೇಶ, ಶಾಲೆಗಳು, ಕೆರೆ, ರಸ್ತೆ ನಿರ್ಮಾಣ ಸೇರಿದಂತೆ ಜನಪರ ಯೋಜನೆಗಳಿಗೆ ಯಾವುದೇ ತಕರಾರು ಮಾಡದೇ ಜಾಗ ನೀಡುವ ಭೂ ಮಾಲೀಕರ ಹೆಸರನ್ನು ವಾಲ್ ಆಫ್ ಗ್ರ್ಯಾಟಿಟ್ಯೂಡ್ (ಕೃತಜ್ಞತಾ ಫಲಕ) ನಲ್ಲಿ ಸೇರಿಸಲು ಸರ್ಕಾರ ತೀರ್ಮಾನಿಸಿದೆ. ಆ ಮೂಲಕ ಭೂ ಮಾಲೀಕರ ತ್ಯಾಗ ಸ್ಮರಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಕಟಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೂತನವಾಗಿ ನಿರ್ಮಿಸುತ್ತಿರುವ ಕೆಂಪೇಗೌಡ ಬಡಾವಣೆಯಲ್ಲಿ ಶನಿವಾರ ನಡೆದ 517 ನೇ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಶಿವಕುಮಾರ್ ಅವರು ಮಾತನಾಡಿದರು.

ಇಂದು ನಾವು ಎಸ್.ಎಂ. ಕೃಷ್ಣ ಅವರ ಹೆಸರಿನಲ್ಲಿ 10 ಪಥಗಳ ರಸ್ತೆಗೆ ಚಾಲನೆ ನೀಡಿದ್ದೇವೆ. ಈ ರಸ್ತೆ 11 ಕಿ.ಮೀ.ಗೆ ನಿಲ್ಲುವುದಿಲ್ಲ. ಮುಂದೆ ಇದು 123 ಕಿ.ಮೀ ರಸ್ತೆಯಾಗಿ ವಿಸ್ತರಣೆಯಾಗಲಿದೆ. ಈ ರಸ್ತೆಯಲ್ಲಿ ವಾಲ್ ಆಫ್ ಗ್ರ್ಯಾಟಿಟ್ಯೂಡ್ (ಉಪಕಾರ ಸ್ಮರಣೆ) ನಿರ್ಮಿಸಲು ಮುಂದಾಗಿದ್ದೇವೆ. ಆ ಮೂಲಕ ಈ ರಸ್ತೆಗಾಗಿ ಜಮೀನು ನೀಡಿದವರ ಹೆಸರನ್ನು ಶಾಶ್ವತವಾಗಿ ಉಳಿಸುವ ಕೆಲಸವನ್ನು ಕರ್ನಾಟಕ ಸರ್ಕಾರ ಮುಂದಿನ ದಿನಗಳಲ್ಲಿ ಮಾಡಲಿದೆ. ಇದನ್ನು ಎಲ್ಲಾ ಕಡೆಗಳಲ್ಲೂ ಮಾಡಲಾಗುವುದು ಎಂದು ತಿಳಿಸಿದರು.

ಪ್ರದೀಪ್ ಈಶ್ವರ್ ಅವರನ್ನು ಹುಚ್ಚ ಎಂದು ಕೂಗಿ ಚಪ್ಪಲಿ ಎಸೆದ ಕುಮಾರ ಸ್ವಾಮಿ ಬೆಂಬಲಿಗರು



ಬೆಂಗಳೂರು,ಜೂ.27- ಚಿಕ್ಕಬಳ್ಳಾಪುರದಲ್ಲಿ ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರ ಬೆಂಬಲಿಗರು ದಾಂಧಲೆ ನಡೆಸಿದ್ದಾರೆ. ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಅವರನ್ನು 'ಹುಚ್ಚ-ಹುಚ್ಚ' ಎಂದು ಕೂಗಿರುವ ಜೆಡಿಎಸ್ ಕಾರ್ಯಕರ್ತರು, ಅವರ ಮೇಲೆ ಚಪ್ಪಲಿ ಎಸೆದಿದ್ದಾರೆ. ದಾಂಧಲೆ ನಡೆಸಿದ ಕಿಡಿಗೇಡಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತವು ಕೆಂಪೇಗೌಡ ಜಯಂತಿ ಕಾರ್ಯಕ್ರಮ ಆಯೋಜಿಸಿತ್ತು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರದೀಪ್ ಈಶ್ವರ್ ಬರುತ್ತಿದ್ದಂತೆಯೇ, ಅವರ ಮೇಲೆ ಜೆಡಿಎಸ್ ಕಾರ್ಯಕರ್ತರು ಮುಗಿಬಿದ್ದಿದ್ದಾರೆ. ವೇದಿಕೆಯ ಮುಂಭಾಗದಲ್ಲೇ ಚಪ್ಪಲಿಗಳನ್ನು ಕೈಯಲ್ಲಿ ಹಿಡಿದು, ಪ್ರದೀಪ್ ಈಶ್ವರ್ ವಿರುದ್ಧ ಘೋಷಣೆ ಕೂಗಿದ್ದಾರೆ. ತಕ್ಷಣವೇ ಎಚ್ಚೆತ್ತ ಪೊಲೀಸರು ಪ್ರತಿಭಟನಾಕಾರರನ್ನು ಹೊರದಬ್ಬಿಸಿದ್ದಾರೆ. ಚಪ್ಪಲಿ ಎಸೆದು ದಾಂಧಲೆ ಮಾಡಿದವರನ್ನು ವಶಕ್ಕೆ ಪಡೆದಿದ್ದಾರೆ.

ಎಚ್.ಡಿ. ಕುಮಾರಸ್ವಾಮಿ ಅವರ ಚೇಲಾಗಳು ನನ್ನ ಮೇಲೆ ಮುಗಿಬಿದ್ದಿದ್ದಾರೆ. ನನ್ನ ವಿರುದ್ಧ ಕೂಗಾಡುತ್ತಿದ್ದಾರೆ. ಇಂತಹ ಬೆದರಿಕೆಗಳಿಗೆಲ್ಲ ನಾನು ಹೆದರುವವನಲ್ಲ ಎಂದು ಪ್ರದೀಪ್ ಈಶ್ವರ್ ಹೇಳಿದ್ದಾರೆ.

ಇತ್ತೀಚೆಗೆ, ಪ್ರದೀಪ್ ಈಶ್ವರ್ ಬಗ್ಗೆ ಮಾತನಾಡಿದ್ದ ಕುಮಾರಸ್ವಾಮಿ ಅವರು, ಪ್ರದೀಪ್ ಈಶ್ವರ್ ಅವರ ಪರಿಶ್ರಮ ನೀಟ್ ಅಕಾಡೆಮಿಗೆ ಸಿಎ ಸೈಟ್ ಮಂಜೂರಾಗಿದೆ ಎಂದು ಆರೋಪಿಸಿದ್ದರು. ಅವರ ಆರೋಪಕ್ಕೆ ಪ್ರತಿಕ್ರಿಯಿಸಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ್ದ ಪ್ರದೀಪ್ ಈಶ್ವರ್, ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರ ಬಳಿ 85 ವಾಚುಗಳು, 700-800 ಎಕರೆ ಜಮೀನಿದೆ. ಅವರ ವಾಚ್‌ಗಳ ಒಟ್ಟು ಮೌಲ್ಯವೇ 10 ರಿಂದ 20 ಕೋಟಿ ರೂ. ಆಗುತ್ತದೆ. ಇಷ್ಟು ಆಸ್ತಿಯನ್ನು ಅವರು ತೋಟದ ಮನೆಯಲ್ಲಿ ಬೆಳೆದ ಬದನೆಕಾಯಿ ಮಾರಿ ಗಳಿಸಿದರೇ? ಅಥವಾ ಬಳ್ಳಾರಿಯ ಕಿಕ್‌ಬ್ಯಾಕ್ (ಕಮಿಷನ್) ಹಣದಿಂದ ಖರೀದಿಸಿದರೇ? ಬಿಡದಿಯಲ್ಲಿ ಅನಿತಾ ಕುಮಾರಸ್ವಾಮಿ ಅವರು 32 ಎಕರೆ ಜಮೀನನ್ನು 'ರಾಮ್‌ರಾಜ್ ಪಂಚೆ' ಮಾರಿ ಖರೀದಿಸಿದ್ದಾರೆಯೇ? ಎಂದು ವಾಗ್ದಾಳಿ ನಡೆಸಿದ್ದರು.

'ನಾನು ತಿನ್ನಲ್ಲ, ತಿನ್ನಲು ಬಿಡಲ್ಲ' ಎಂದು ಹೇಳಿದವರು ರಾಮನ ಹೆಸರಲ್ಲೂ ದುಡ್ಡು ಹೊಡೆದಿದ್ದಾರೆ : ಮೋದಿಯನ್ನು ಕುಟುಕಿದ ಪ್ರಿಯಾಂಕ್ ಖರ್ಗೆ



ಬೆಂಗಳೂರು, ಜೂ.27- ಗೃಹ ಸಚಿವ ಪ್ರಿಯಾಂಕ ಖರ್ಗೆ ಇಂದು ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ನಾನು ತಿನ್ನಲ್ಲ, ತಿನ್ನಲು ಬಿಡಲ್ಲ ಎಂದು ಹೇಳಿದವರು ರಾಮನ ಹೆಸರಲ್ಲೂ ದುಡ್ಡು ಹೊಡೆದಿದ್ದಾರೆ. ಈ ಬಗ್ಗೆ ಮನ್ ಕೀ ಬಾತ್ ಮಾಡ್ತೀರಾ, ಪರೀಕ್ಷೆ ಪೇ ಚರ್ಚೆ ಮಾಡುತ್ತೀರಾ? ಎಂದು ಪರೋಕ್ಷವಾಗಿ ಪ್ರಶ್ನೆ ಎಸೆದರು.

ಅವರು ಮುಂದುವರಿದು, ರಾಮನ ಹೆಸರಲ್ಲಿ ಮೋಸ ಮಾಡುತ್ತಾರೆ ಎಂದು ನಾನು ಹಿಂದೆಯೇ ಹೇಳಿದ್ದೆ. ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಮಾಡಿದವರು, ಪೂಜೆ ಮಾಡಿದವರು ಪ್ರಧಾನಿ ಮೋದಿ. ಈಗ ದುಡ್ಡು ಹೊಡೆದಿಲ್ಲ ಎಂದರೆ ಹೇಗೆ ನಂಬುವುದು? ಕಳೆದ ಐದು ವರ್ಷಗಳಲ್ಲಿ 500 ಕೋಟಿ ರೂಪಾಯಿ ರಾಮನ ಹೆಸರಿನಲ್ಲಿ ತಿಂದಿದ್ದಾರೆ. ಎಲ್ಲಾ ತಪ್ಪು ಕಾಂಗ್ರೆಸ್ ಅಥವಾ ಸಮಾಜವಾದಿ ಪಕ್ಷದ ರಾಮಭಕ್ತರದ್ದು ಎಂದು ಹೇಳಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ದುಡ್ಡು ಲೂಟಿಯಲ್ಲಿ ಬಿಜೆಪಿಯ ತಪ್ಪಿಲ್ಲವೇ? ಎಂದು ಕಿಡಿಕಾರಿದರು.

ಬಿಡದಿ ಟೌನ್‌ಶಿಪ್ ವಿವಾದದ ಕುರಿತು ಮಾತನಾಡಿದ ಪ್ರಿಯಾಂಕ ಖರ್ಗೆ, ಬೀದಿಯಲ್ಲಿ ಚರ್ಚೆ ಮಾಡುವುದು ಸರಿಯಲ್ಲ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ವಿರೋಧ ಪಕ್ಷದೊಂದಿಗೆ ವಿಧಾನಸೌಧದಲ್ಲೇ ಚರ್ಚೆ ನಡೆಸಿದ್ದರು. ಹೀಗಿರುವಾಗ ಈಗ ಬೀದಿಯಲ್ಲಿ ಚರ್ಚೆ ಮಾಡೋಣ ಎಂದು ಹೇಳುವುದು ಅವರ ಹಿರಿತನಕ್ಕೆ ಶೋಭೆ ತರಲ್ಲ. ಯಾವುದೇ ನೀತಿ ಅಥವಾ ಸಮಸ್ಯೆಗಳ ಬಗ್ಗೆ ಚರ್ಚೆ ವಿಧಾನಸೌಧದಲ್ಲೇ ನಡೆಯಬೇಕು ಎಂದು ಅಭಿಪ್ರಾಯಪಟ್ಟರು.

ಭದ್ರತಾ ವಿಚಾರಗಳ ಬಗ್ಗೆ ಅವರು, ದಾವಣಗೆರೆಯ ಹರಿಹರದಲ್ಲಿ ಶಂಕಿತ ಭಯೋತ್ಪಾದಕನನ್ನು ಬಂಧಿಸಿ ತನಿಖೆ ನಡೆಯುತ್ತಿದೆ. ಎನ್‌ಐಎ ಸಹ ರಾಜ್ಯಕ್ಕೆ ಬಂದಿದೆ. ನಾವು ಅವರಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದೇವೆ. ಕರ್ನಾಟಕ ಸ್ಲೀಪರ್‌ಸೆಲ್ ಆಗಿಲ್ಲ, ಆಗಲು ಬಿಡುವುದೂ ಇಲ್ಲ. ಹೊರ ರಾಜ್ಯದಿಂದ ಬಂದವರು ಈ ರೀತಿಯ ಕೃತ್ಯಗಳನ್ನು ಮಾಡುತ್ತಿದ್ದಾರೆ. ನಮ್ಮ ಗುಪ್ತಚರ ದಳ ಜಾಗೃತವಾಗಿದೆ ಎಂದು ಹೇಳಿದರು.

ಸಚಿವ ಸಂಪುಟ ವಿಸ್ತರಣೆಯ ಕುರಿತು ಅವರು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇನ್ನೂ ವಾರ ಅಥವಾ ಹತ್ತು ದಿನಗಳಲ್ಲಿ ಸಂಪುಟ ವಿಸ್ತರಣೆಯನ್ನು ಪೂರ್ಣಗೊಳಿಸುವುದಾಗಿ ಹೇಳಿದ್ದಾರೆ. ಆದಷ್ಟು ಬೇಗ ಪ್ರಕ್ರಿಯೆಗಳು ಮುಗಿಯಲಿವೆ. ಸರ್ಕಾರದ ಮಟ್ಟದಲ್ಲಿ ರಾಜಕೀಯ ವ್ಯವಹಾರಗಳ ಸಮಿತಿ ರಚನೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ಅದು ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಿರುವಂತಹದ್ದು ಎಂದು ಸ್ಪಷ್ಟಪಡಿಸಿದರು.

ಪೊಲೀಸ್ ಕಂಪ್ಯೂಟರ್ ವಿಭಾಗದ ಕಾರ್ಯಚಟುವಟಿಕೆಗಳ ಪರಿಶೀಲನೆ ನಡೆಸಿದ ಗೃಹ ಸಚಿವ ಪ್ರಿಯಾಂಕ್ ಖರ್ಗೆ

ಬೆಂಗಳೂರು, ಜೂ.27- ನಗರದ ಬಹುಮಹಡಿ ಕಟ್ಟಡದಲ್ಲಿರುವ ಪೊಲೀಸ್ ಕಂಪ್ಯೂಟರ್ ವಿಭಾಗಕ್ಕೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಇಂದು ಭೇಟಿ ನೀಡಿ, ಇಲಾಖೆಯ ಕಾರ್ಯಚಟುವಟಿಕೆಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಪೊಲೀಸ್ ಮಹಾನಿರ್ದೇಶಕರಾದ (ಡಿಜಿಪಿ) ಡಾ.ಎಂ.ಎ.ಸಲೀಂ ಹಾಗೂ ಪೊಲೀಸ್ ಕಂಪ್ಯೂಟರ್ ವಿಭಾಗದ ಹಿರಿಯ ಅಧಿಕಾರಿಗಳು ಸಚಿವರಿಗೆ ವಿಭಾಗದ ವಿವಿಧ ಕಾರ್ಯತಂತ್ರಗಳು, ತಾಂತ್ರಿಕ ಮೂಲಸೌಕರ್ಯ ಮತ್ತು ಪ್ರಗತಿಯ ಕುರಿತು ವಿವರವಾದ ಮಾಹಿತಿ ನೀಡಿದರು.

ಪೊಲೀಸ್ ಕಂಪ್ಯೂಟರ್ ವಿಭಾಗವು ರಾಜ್ಯ ಪೊಲೀಸ್ ಇಲಾಖೆಯ ತಾಂತ್ರಿಕ ಬೆನ್ನೆಲುಬಾಗಿದ್ದು, ಇಲಾಖೆಯ ವಿವಿಧ ಡಿಜಿಟಲ್ ಜಾಲತಾಣಗಳು, ಮಾಹಿತಿ ನಿರ್ವಹಣಾ ವ್ಯವಸ್ಥೆಗಳು, ಸಾಫ್ಟ್‌ವೇರ್ ವೇದಿಕೆಗಳು ಹಾಗೂ ಮಾಹಿತಿ ತಂತ್ರಜ್ಞಾನ ಸಂಬಂಧಿತ ಸೇವೆಗಳ ಸಮನ್ವಯ ಮತ್ತು ನಿರ್ವಹಣೆಯನ್ನು ಕೈಗೊಳ್ಳುತ್ತಿದೆ.

ಕುರುಬರಹಳ್ಳಿ : ದಾಖಲೆಗಳಿಲ್ಲದ 2.98 ಕೋ.ರೂ. ನಗದು ಪತ್ತೆ; ಇಬ್ಬರ ಬಂಧನ



ಬೆಂಗಳೂರು,ಜೂ. 27- ನಗರದಲ್ಲಿ ದಾಖಲೆಗಳಿಲ್ಲದ ಕೋಟ್ಯಂತರ ರೂಪಾಯಿ ಪತ್ತೆಯಾದ ಪ್ರಕರಣವು ತಡವಾಗಿ ಬೆಳಕಿಗೆ ಬಂದಿದೆ. ಜೂನ್ 2ರಂದು ಕುರುಬರಹಳ್ಳಿಯ ಕೈಗಾರಿಕಾ ಶೆಡ್‌ನಲ್ಲಿ 2.98 ಕೋಟಿ ನಗದು ಪತ್ತೆಯಾದ ಘಟನೆ ಮಹಾಲಕ್ಷ್ಮೀ ಲೇಔಟ್ ಠಾಣೆಯ ಪೊಲೀಸರು ದಾಖಲಿಸಿದ್ದಾರೆ.

ಪಿಎಸ್‌ಐ ರಾಕೇಶ್ ನೇತೃತ್ವದ ತಂಡ ಶೇಷಾದ್ರಿ ಇಂಡಸ್ಟ್ರೀಸ್ ಶೆಡ್‌ನಲ್ಲಿ ದಾಳಿ ನಡೆಸಿದಾಗ ನಾಲ್ಕು ದೊಡ್ಡ ಬ್ಯಾಗ್‌ಗಳಲ್ಲಿ ನೋಟುಗಳ ಕಂತೆಗಳು ಪತ್ತೆಯಾದವು. ಲೆಕ್ಕ ಹಾಕಿದಾಗ ಒಟ್ಟು 2.98 ಕೋಟಿ ರೂಪಾಯಿ ಇರುವುದನ್ನು ಖಚಿತಪಡಿಸಿಕೊಂಡರು. ಶೆಡ್ ಮಾಲೀಕ ವೆಂಕಟೇಶ್ ಹಾಗೂ ತಾವರೆಕೆರೆ ನಿವಾಸಿ ನಾಗರಾಜ್ ಬಂಧಿತರಾಗಿದ್ದು, ಇಬ್ಬರೂ ನ್ಯಾಯಾಲಯದಿಂದ ಜಾಮೀನು ಪಡೆದಿದ್ದಾರೆ.

ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ, ಈ ಹಣ ಚಿತ್ರದುರ್ಗದಲ್ಲಿದ್ದ ಆಸ್ತಿಯನ್ನು ಮಾರಾಟ ಮಾಡಿ ತಂದದ್ದು, ಬ್ಯಾಂಕ್ ಸಾಲ ಪಾವತಿಸಲು ನಗದನ್ನು ಇಟ್ಟುಕೊಂಡಿದ್ದೇವೆ ಎಂದು ಆರೋಪಿಗಳು ಹೇಳಿಕೆ ನೀಡಿದ್ದಾರೆ. ಆದರೆ, ಹಣಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನೀಡದ ಕಾರಣ, ಮಹಾಲಕ್ಷ್ಮೀ ಲೇಔಟ್ ಪೊಲೀಸರು ಹಾಗೂ ಆದಾಯ ತೆರಿಗೆ ಇಲಾಖೆ ತನಿಖೆಯನ್ನು ತೀವ್ರಗೊಳಿಸಿದ್ದಾರೆ.

ಈ ಪ್ರಕರಣವು ನಗರದಲ್ಲಿ ಅಕ್ರಮ ಹಣ ಸಂಗ್ರಹಣೆ ಹಾಗೂ ದಾಖಲೆಗಳಿಲ್ಲದ ನಗದು ವ್ಯವಹಾರಗಳ ಬಗ್ಗೆ ಮತ್ತೊಮ್ಮೆ ಪ್ರಶ್ನೆಗಳನ್ನು ಎಬ್ಬಿಸಿದೆ. ಸಾರ್ವಜನಿಕರು ಇಂತಹ ಪ್ರಕರಣಗಳಿಂದ ಎಚ್ಚರಿಕೆಯಿಂದ ಇರಬೇಕೆಂಬ ಸಂದೇಶವೂ ಹೊರಬಂದಿದೆ.

ಬಿಡದಿ ಟೌನ್‌ಶಿಪ್ ವಿವಾದ : ಚರ್ಚೆಗೆ ಕಾದು ಕುಳಿತ ಹೆಚ್‌ಡಿಕೆ ; ಹಾಜರಾಗದ ಸಿಎಂ ಡಿಕೆಶಿ



ಬೆಂಗಳೂರು, ಜೂ. 27- ಬಿಡದಿ ಟೌನ್‌ಶಿಪ್ ವಿವಾದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಬಹಿರಂಗ ಚರ್ಚೆ ನಡೆಸಲು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಬೈರಮಂಗಲದಲ್ಲಿ ದಿನವಿಡೀ ಕಾಯುತ್ತಾ ಕುಳಿತರೂ, ಮುಖ್ಯಮಂತ್ರಿ ಚರ್ಚೆಗೆ ಹಾಜರಾಗಲಿಲ್ಲ.

ಕುಮಾರಸ್ವಾಮಿ ಮೂರು ದಿನಗಳ ಹಿಂದೆ ಮುಖ್ಯಮಂತ್ರಿಗೆ ಪತ್ರ ಬರೆದು, ವಿಧಾನಸೌಧದಲ್ಲಿ ಅಲ್ಲ, ರೈತರ ಸಮ್ಮುಖದಲ್ಲಿ ಬೈರಮಂಗಲದಲ್ಲಿ ಚರ್ಚೆ ಮಾಡೋಣ ಎಂದು ಆಹ್ವಾನಿಸಿದ್ದರು. ಆದರೆ ಆ ಪತ್ರಕ್ಕೆ ಉತ್ತರ ನೀಡದ ಮುಖ್ಯಮಂತ್ರಿಗಳು, ಇಂದು ನಿಗದಿಪಡಿಸಿದ್ದ ಸಮಯದಲ್ಲಿ ಬೈರಮಂಗಲಕ್ಕೆ ಬಾರದ ಕಾರಣ, ನಿರೀಕ್ಷಿತ ಚರ್ಚೆ ನಡೆಯದೆ ಉಳಿಯಿತು.

ಮಧ್ಯಾಹ್ನ 12 ಗಂಟೆಯಿಂದ ಸಂಜೆವರೆಗೂ ರೈತರೊಂದಿಗೆ ಕುಳಿತುಕೊಂಡಿದ್ದ ಕುಮಾರಸ್ವಾಮಿ, ಮುಖ್ಯಮಂತ್ರಿಗಾಗಿ ಒಂದು ಕುರ್ಚಿಯನ್ನೂ ಖಾಲಿ ಇಟ್ಟು ಕಾಯುತ್ತಿದ್ದರು. ಆದರೆ ಆ ಕುರ್ಚಿ ಖಾಲಿಯೇ ಉಳಿಯಿತು. ರೈತರ ಭೂಮಿ ಕಳೆದುಕೊಳ್ಳುವ ಸಮಸ್ಯೆಯನ್ನು ನೇರವಾಗಿ ಅವರ ಸಮ್ಮುಖದಲ್ಲಿ ಚರ್ಚಿಸಲು ಬಯಸಿದ್ದ ಕುಮಾರಸ್ವಾಮಿ, ವಿಧಾನಸೌಧದಲ್ಲಿ ಚರ್ಚೆ ಮಾಡಬೇಕು ಎಂಬ ಮುಖ್ಯಮಂತ್ರಿಗಳ ನಿಲುವಿಗೆ ಒಪ್ಪದೆ, ಪಟ್ಟು ಹಿಡಿದು ಬೈರಮಂಗಲದಲ್ಲಿ ಹಾಜರಿದ್ದರು.

ಮುಖ್ಯಮಂತ್ರಿಗಳು ಬೈರಮಂಗಲಕ್ಕೆ ಬಾರದ ಕಾರಣ, ಕುಮಾರಸ್ವಾಮಿ ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ, ಬಳಿಕ ಬೆಂಗಳೂರಿಗೆ ವಾಪಸ್ ಹೊರಟರು. ಈ ಬೆಳವಣಿಗೆ ಬಿಡದಿ ಟೌನ್‌ಶಿಪ್ ವಿವಾದದಲ್ಲಿ ರಾಜಕೀಯ ತೀವ್ರತೆ ಹೆಚ್ಚಿಸಿರುವುದು ಗಮನಾರ್ಹ.

ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ : ಬಿಜೆಪಿ ಆಂತರಿಕ ಸತ್ಯಶೋಧನಾ ಸಮಿತಿಯಿಂದ ವರದಿ ಸಲ್ಲಿಕೆ



ಬೆಂಗಳೂರು, ಜೂ.27- ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನ ಪ್ರಕರಣದ ಬಗ್ಗೆ ಬಿಜೆಪಿ ಆಂತರಿಕ ಸತ್ಯಶೋಧನಾ ಸಮಿತಿಯು ನಾಲ್ಕು ದಿನಗಳ ಪರಿಶೀಲನೆಯ ನಂತರ ವರದಿ ಸಲ್ಲಿಸಿದೆ. ಸಿಟಿ ರವಿ, ಮಹೇಶ್ ಟೆಂಗಿನಕಾಯಿ ಹಾಗೂ ಎನ್. ಮಹೇಶ್ ನೇತೃತ್ವದ ತ್ರಿಸದಸ್ಯ ಸಮಿತಿಯು ಸಾಂದರ್ಭಿಕ ಸಾಕ್ಷಿ, ಶಂಕೆ ಹಾಗೂ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಮೂರು ಪುಟಗಳ ವರದಿಯನ್ನು ಸಿದ್ಧಪಡಿಸಿ, ಇಂದು (ಜೂನ್ 27) ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಸೀಲ್ಡ್ ಕವರ್‌ನಲ್ಲಿ ಸಲ್ಲಿಸಿದೆ. ವರದಿಯ ಪ್ರಕಾರ ಮೈತ್ರಿ ಪಕ್ಷಗಳಿಂದ ಒಟ್ಟು 12 ಶಾಸಕರು ಅಡ್ಡ ಮತ ಚಲಾಯಿಸಿದ್ದು, ಇದರಲ್ಲಿ 1 ಅಸಿಂಧು ಮತ.

ಬಿಜೆಪಿ ಶಾಸಕರಿಂದ 1 ಅಸಿಂಧು ಮತ ಸೇರಿ ಒಟ್ಟು 4 ಅಡ್ಡ ಮತಗಳು ದಾಖಲಾಗಿವೆ. ಉಳಿದ ಅಡ್ಡ ಮತಗಳು ಜೆಡಿಎಸ್‌ನಿಂದಾಗಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಶಾಸಕರ ಹೆಸರುಗಳನ್ನು ವರದಿಯಲ್ಲಿ ಉಲ್ಲೇಖಿಸದೆ, ಅಡ್ಡ ಮತಗಳ ಸಂಖ್ಯೆಯನ್ನು ಮಾತ್ರ ದಾಖಲಿಸಲಾಗಿದೆ. ಮಾಧ್ಯಮದವರೊಂದಿಗೆ ಮಾತನಾಡಿದ ಸಿಟಿ ರವಿ, ಇದು ಪ್ರಜಾಪ್ರಭುತ್ವ ವಿರೋಧಿ ನಡೆ. ನಾವು ಅಧ್ಯಕ್ಷರ ಸೂಚನೆಯಂತೆ ವರದಿ ಸಲ್ಲಿಸಿದ್ದೇವೆ. ಸಮಿತಿಯ ಮೂವರಿಗೂ ಸಹಮತ ಇರುವ ಅಂಶಗಳನ್ನು ವರದಿಯಲ್ಲಿ ಉಲ್ಲೇಖಿಸಿದ್ದೇವೆ. ಮುಂದಿನ ತೀರ್ಮಾನವನ್ನು ಕೋರ್‌ಕಮಿಟಿ ಹಾಗೂ ಹೈಕಮಾಂಡ್ ಚರ್ಚೆ ಮಾಡಿ ಕೈಗೊಳ್ಳಲಿದೆ ಎಂದು ತಿಳಿಸಿದ್ದಾರೆ.

ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನ ಪ್ರಕರಣ ರಾಜ್ಯ ರಾಜಕೀಯದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ. ಸಿಟಿ ರವಿ, ಮಹೇಶ್ ಟೆಂಗಿನಕಾಯಿ ಹಾಗೂ ಎನ್. ಮಹೇಶ್ ನೇತೃತ್ವದ ತ್ರಿಸದಸ್ಯ ಸತ್ಯಶೋಧನಾ ಸಮಿತಿಯು ನಾಲ್ಕು ದಿನಗಳ ಆಂತರಿಕ ತನಿಖೆ ನಡೆಸಿ, ಮೂರು ಪುಟಗಳ ವರದಿಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಸಲ್ಲಿಸಿದೆ. ವರದಿಯ ಪ್ರಕಾರ ಮೈತ್ರಿ ಪಕ್ಷಗಳಿಂದ ಒಟ್ಟು 12 ಶಾಸಕರು ಅಡ್ಡ ಮತ ಚಲಾಯಿಸಿದ್ದು, ಇದರಲ್ಲಿ 1 ಅಸಿಂಧು ಮತ. ಬಿಜೆಪಿ ಶಾಸಕರಿಂದ 1 ಅಸಿಂಧು ಮತ ಸೇರಿ ಒಟ್ಟು 4 ಅಡ್ಡ ಮತಗಳು ದಾಖಲಾಗಿವೆ. ಉಳಿದ ಅಡ್ಡ ಮತಗಳು ಜೆಡಿಎಸ್‌ನಿಂದಾಗಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ವರದಿಯಲ್ಲಿ ಶಾಸಕರ ಹೆಸರುಗಳನ್ನು ಉಲ್ಲೇಖಿಸದೆ, ಅಡ್ಡ ಮತಗಳ ಸಂಖ್ಯೆಯನ್ನು ಮಾತ್ರ ದಾಖಲಿಸಲಾಗಿದೆ. ಅನುಮಾನ ಇರುವ ಶಾಸಕರ ಮೇಲೆ ತೀವ್ರ ನಿಗಾ ಇಡುವಂತೆ ಸಮಿತಿ ಶಿಫಾರಸು ಮಾಡಿದೆ. ಮಾಧ್ಯಮದವರೊಂದಿಗೆ ಮಾತನಾಡಿದ ಸಿಟಿ ರವಿ, ಇದು ಪ್ರಜಾಪ್ರಭುತ್ವ ವಿರೋಧಿ ನಡೆ. ನಾವು ಅಧ್ಯಕ್ಷರ ಸೂಚನೆಯಂತೆ ವರದಿ ಸಲ್ಲಿಸಿದ್ದೇವೆ. ಮುಂದಿನ ತೀರ್ಮಾನವನ್ನು ಕೋರ್‌ಕಮಿಟಿ ಹಾಗೂ ಹೈಕಮಾಂಡ್ ಚರ್ಚೆ ಮಾಡಿ ಕೈಗೊಳ್ಳಲಿದೆ ಎಂದು ಹೇಳಿದ್ದಾರೆ.

ತುಮಕೂರು: ಕಾರಿನಲ್ಲೇ ಯುವತಿಗೆ ಚಾಕು ಇರಿತ; ಪೆಟ್ರೋಲ್ ಬಾಂಬ್ ಸ್ಫೋಟಿಸಿ ಸಜೀವ ದಹನಗೊಂಡ ಭಗ್ನ ಪ್ರೇಮಿ!



ತುಮಕೂರು, ಜೂ. 27 - ತುಮಕೂರು ಹೆದ್ದಾರಿಯಲ್ಲಿ ಭೀಕರ ದುರಂತ ಸಂಭವಿಸಿದ್ದು, ಚಲಿಸುತ್ತಿದ್ದ ಕಾರಿನಲ್ಲೇ ಭಗ್ನ ಪ್ರೇಮಿಯೋರ್ವ ಯುವತಿಗೆ ಚಾಕು ಇರಿದಿದ್ದು ಮಾತ್ರವಲ್ಲದೇ ಪೆಟ್ರೋಲ್ ಬಾಂಬ್ ಸಿಡಿಸಿದ್ದಾನೆ.

ತುಮಕೂರು - ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿಯ ಶಿರಾ ತಾಲೂಕಿನ ಜೋಗಿಹಳ್ಳಿ ಬಳಿ ಶನಿವಾರ ಅತ್ಯಂತ ಭೀಕರ ಘಟನೆಯೊಂದು ಸಂಭವಿಸಿದೆ. ಚಲಿಸುತ್ತಿದ್ದ ಖಾಸಗಿ ಕಾರಿನೊಳಗೆ ಯುವಕನೊಬ್ಬ ಯುವತಿಗೆ ಚಾಕುವಿನಿಂದ ಇರಿದು, ಬಳಿಕ ಕಾರಿನ ಎಲ್ಲಾ ಡೋರ್‌ಗಳನ್ನು ಲಾಕ್ ಮಾಡಿಕೊಂಡು ಪೆಟ್ರೋಲ್ ಬಾಂಬ್ ಸಿಡಿಸಿಕೊಂಡು ಸಜೀವ ದಹನವಾಗಿದ್ದಾನೆ.

ಮೃತನನ್ನು ಬೆಂಗಳೂರಿನ ನಾಗೇಂದ್ರ (30) ಎಂದು ಗುರುತಿಸಲಾಗಿದೆ. ಇನ್ನು ತೀವ್ರ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿರುವ ಯುವತಿ ರಮ್ಯಾ ಉಲ್ಲಾಸ್ (23) ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿದುಬಂದಿದೆ.

ಇನ್ನು ಮೂಲಗಳ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಅಗಸೂರು ಗ್ರಾಮದ ನಿವಾಸಿ ರಮ್ಯಾ ಉಲ್ಲಾಸ್, ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿ ಒಟಿ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಿದ್ದ. ಊರಿಗೆ ತೆರಳುವ ಉದ್ದೇಶದಿಂದ ರಮ್ಯಾ ಕಾರು ಬುಕ್ ಮಾಡಿಕೊಂಡಿದ್ದರು. ಅವರೊಂದಿಗೆ ನಾಗೇಂದ್ರ ಕೂಡ ಪ್ರಯಾಣ ಬೆಳೆಸಿದ್ದ.

ತುಮಕೂರು ದಾಟುತ್ತಿದ್ದಂತೆ ನಾಗೇಂದ್ರ ಮತ್ತು ರಮ್ಯಾ ನಡುವೆ ಜಗಳ ನಡೆದಿದ್ದು, ಮಾತಿನ ಚಕಮಕಿ ವಿಕೋಪಕ್ಕೆ ಹೋದಾಗ, ನಾಗೇಂದ್ರ ತಾನು ಮೊದಲೇ ಪ್ಲಾನ್ ಮಾಡಿ ತಂದಿದ್ದ ಚಾಕುವಿನಿಂದ ರಮ್ಯಾ ಅವರ ತಲೆ ಹಾಗೂ ದೇಹದ ಭಾಗಕ್ಕೆ ಮನಸೋಇಚ್ಛೆ ಚುಚ್ಚಿದ್ದಾನೆ. ಈ ವೇಳೆ ಪೆಟ್ರೋಲ್ ಬಾಂಬ್ ಇದೆ ಎಂಬುದು ಯುವತಿಗೆ ತಿಳಿದಿದೆ.

ನಾಗೇಂದ್ರನ ಈ ರೌದ್ರಾವತಾರದಿಂದ ಬೆಚ್ಚಿಬಿದ್ದ ರಮ್ಯಾ, ಬೊಬ್ಬೆ ಹೊಡೆದು ಜೀವ ಉಳಿಸಿಕೊಳ್ಳಲು ಚಲಿಸುತ್ತಿದ್ದ ಕಾರಿನಿಂದಲೇ ಹೊರಗೆ ಹಾರಿದ್ದಾರೆ. ಕಾರಿನೊಳಗೆ ನಡೆಯುತ್ತಿದ್ದ ಈ ಭೀಕರ ದೃಶ್ಯ ಹಾಗೂ ಯುವತಿ ಕೆಳಗೆ ಬಿದ್ದಿದ್ದನ್ನು ಕಂಡು ಗಾಬರಿಗೊಂಡ ವಾಹನ ಚಾಲಕ ತಕ್ಷಣವೇ ಕಾರನ್ನು ರಸ್ತೆ ಪಕ್ಕಕ್ಕೆ ನಿಲ್ಲಿಸಿ ಇಳಿದಿದ್ದಾನೆ.

ಚಾಲಕ ಕೆಳಗೆ ಇಳಿಯುತ್ತಿದ್ದಂತೆಯೇ ನಾಗೇಂದ್ರ ಒಳಗಿನಿಂದ ಕಾರಿನ ಎಲ್ಲಾ ಡೋರ್‌ಗಳನ್ನು ಸೆಂಟ್ರಲ್ ಲಾಕ್ ಮಾಡಿಕೊಂಡಿದ್ದಾನೆ. ಬಳಿಕ ಪೆಟ್ರೋಲ್ ಬಾಂಬ್ ಸಿಡಿಸಿಕೊಂಡು ಸಜೀವ ದಹನವಾಗಿದ್ದಾನೆ. ಇಡೀ ಕಾರು ಧಗಧಗನೆ ಹೊತ್ತಿ ಉರಿಯಲಾರಂಭಿಸಿತು.

ನಾಗೇಂದ್ರ ತಾನು ಮೊದಲೇ ಸಿದ್ಧಪಡಿಸಿಕೊಂಡು ತಂದಿದ್ದ 'ಪೆಟ್ರೋಲ್ ಬಾಂಬ್' ಅನ್ನು ಕಾರಿನೊಳಗೆ ಸಿಡಿಸಿಕೊಂಡಿದ್ದಾನೆ ಎಂದು ಶಂಕಿಸಲಾಗಿದೆ. ಬೆಂಕಿ ಇಡೀ ಕಾರನ್ನು ಆವರಿಸಿದ್ದರಿಂದ ನಾಗೇಂದ್ರನಿಗೆ ಹೊರಬರಲು ಸಾಧ್ಯವಾಗದೆ ಕಾರಿನೊಳಗೇ ಸಜೀವ ದಹನವಾಗಿದ್ದಾನೆ. ರಾಷ್ಟ್ರೀಯ ಹೆದ್ದಾರಿಯಲ್ಲೇ ಕಾರು ಹೊತ್ತಿ ಉರಿದು ಭಸ್ಮವಾಗಿದೆ.

ಇತ್ತ ಕಾರಿನಿಂದ ಜಿಗಿದು ತೀವ್ರ ರಕ್ತಸ್ರಾವ ಹಾಗೂ ಗಾಯಗಳಾಗಿದ್ದ ರಮ್ಯಾ ಉಲ್ಲಾಸ್ ಅವರನ್ನು ತಕ್ಷಣವೇ ತುಮಕೂರು ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದ್ದು, ಸದ್ಯ ಅವರಿಗೆ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ವಿಚಾರ ತಿಳಿಯುತ್ತಲೇ ಸ್ಥಳಕ್ಕೆ ಭೇಟಿ ನೀಡಿದ ಎಸ್ಪಿ ಅಶೋಕ್ ತನಿಖೆ ನಡೆಸಿದ್ದು, ಗಾಯಗೊಂಡ ರಮ್ಯಾ ತುಮಕೂರು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಳ್ಳಂಬೆಳ್ಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕೊಲೆ ಯತ್ನ ಹಾಗೂ ಆತ್ಮಹತ್ಯೆಯ ಕಾರಣಗಳ ತನಿಖೆ ನಡೆಯುತ್ತಿದೆ. ಈ ಭೀಕರ ಘಟನೆ ಕಳ್ಳಂಬೆಳ್ಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಪೊಲೀಸರು ಸುಟ್ಟು ಕರಕಲಾದ ಕಾರನ್ನು ವಶಕ್ಕೆ ಪಡೆದಿದ್ದಾರೆ. ಯುವಕ - ಯುವತಿ ಪ್ರೇಮಿಗಳಾಗಿರುವ ಸಾಧ್ಯತೆ ಇದೆ ಎಂದು ಶಂಕಿಸಲಾಗಿದೆ. ಈ ಸಂಬಂಧ ತನಿಖೆ ನಡೆದಿದೆ.

ದೇವರ ಹೆಸರನ್ನು ಬಳಸಿ ಪಾಪದ ಕೆಲಸಗಳನ್ನು ಮಾಡಿದರೆ, ಅವರಿಗಿಂತ ದೊಡ್ಡ ಪಾಪಿಗಳು ಯಾರೂ ಇಲ್ಲ : ಕೇಂದ್ರ ಸಚಿವ ವಿ. ಸೋಮಣ್ಣ

ದಾವಣಗೆರೆ, ಜೂ. 27- ದೇವರ ಹೆಸರನ್ನು ಬಳಸಿಕೊಂಡು ಯಾರಾದರೂ ಪಾಪದ ಕೆಲಸಗಳನ್ನು ಮಾಡಿದರೆ, ಅವರಿಗಿಂತ ದೊಡ್ಡ ಪಾಪಿಗಳು ಈ ಜಗತ್ತಿನಲ್ಲಿ ಮತ್ತಾರೂ ಇಲ್ಲ ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ಶನಿವಾರ ದಾವಣಗೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಗವಂತನ ಹೆಸರಿನಲ್ಲಿ ಅಪಚಾರ ಅಥವಾ ಅಕ್ರಮ ಚಟುವಟಿಕೆ ನಡೆಸುವವರ ವಿರುದ್ಧ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ಶ್ರೀ ರಾಮ ಮಂದಿರದಲ್ಲಿ ನಡೆದಿರುವ ದೇಣಿಗೆ ಹಣ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಮುಖ್ಯಮಂತ್ರಿ ಈಗಾಗಲೇ ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖೆಗೆ ಆದೇಶಿಸಿದ್ದಾರೆ ಎಂದು ತಿಳಿಸಿದರು.

ರಾಮನ ಹೆಸರನ್ನು ಹೇಳಿಕೊಂಡು ಯಾರಾದರೂ ಅಪಚಾರ ಮಾಡಲು ಯತ್ನಿಸಿದರೆ, ಅಂತಹವರಿಗೆ ತಕ್ಷಣವೇ ತಕ್ಕ ಶಿಕ್ಷೆಯಾಗುವಂತೆ ಸ್ವತಃ ಶ್ರೀರಾಮನೇ ಸೃಷ್ಟಿ ಮಾಡುತ್ತಾನೆ. ಇಂತಹ ಪ್ರಕರಣಗಳಲ್ಲಿ ಯಾರನ್ನೂ ಕ್ಷಮಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಅವರು ಹೇಳಿದರು. ದೇವರ ಹೆಸರನ್ನು ಬಳಸಿಕೊಂಡು ಜನರ ನಂಬಿಕೆಗೆ ಧಕ್ಕೆ ತರುವಂತಹ ಕೃತ್ಯಗಳು ಖಂಡನೀಯವಾಗಿದ್ದು, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಬೇಕು ಎಂಬ ಅಭಿಪ್ರಾಯವನ್ನೂ ಅವರು ವ್ಯಕ್ತಪಡಿಸಿದರು.

ನಿರ್ಮಾಪಕ ಭಾ.ಮಾ.ಹರೀಶ್ ಅವರ ಪುತ್ರ ಉಲ್ಲಾಸ್ ಗೌಡ ನಿಧನ



ಬೆಂಗಳೂರು,ಜೂ.27- ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷ ಹಾಗೂ ನಿರ್ಮಾಪಕ ಭಾ.ಮಾ.ಹರೀಶ್ ಅವರ ಪುತ್ರ ಉಲ್ಲಾಸ್ ಗೌಡ (27) ಹೃದಯಾಘಾತದಿಂದ ನಿಧನರಾಗಿದ್ದಾರೆ. ಕೆಲವೇ ತಿಂಗಳುಗಳಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡಲು ಸಿದ್ಧರಾಗಿದ್ದ ಉಲ್ಲಾಸ್ ಅವರ ನಿಧನ ಅವರ ಕುಟುಂಬದಲ್ಲಿ ತೀವ್ರ ಆಘಾತವನ್ನುಂಟುಮಾಡಿದೆ.

ಉಲ್ಲಾಸ್ ಗೌಡ ಅವರು ಸ್ನೇಹಿತರೊಂದಿಗೆ ಶಿವಮೊಗ್ಗದ ಪ್ರಸಿದ್ಧ ಕೊಡಚಾದ್ರಿ ಬೆಟ್ಟಕ್ಕೆ ಟ್ರೆಕ್ಕಿಂಗ್‌ಗಾಗಿ ತೆರಳಿದ್ದರು. ಟ್ರೆಕ್ಕಿಂಗ್‌ನಲ್ಲಿದ್ದ ಸಂದರ್ಭದಲ್ಲಿಯೇ ಉಲ್ಲಾಸ್ ಅವರಿಗೆ ಇದ್ದಕ್ಕಿದ್ದಂತೆ ತೀವ್ರ ಎದೆನೋವು ಕಾಣಿಸಿಕೊಂಡಿದೆ. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲು ಪ್ರಯತ್ನಿಸಲಾಯಿತಾದರೂ, ಮಾರ್ಗಮಧ್ಯೆಯೇ ಅವರು ಕೊನೆಯುಸಿರೆಳೆದಿದ್ದಾರೆ. ವೈದ್ಯರು ಅವರು ಹೃದಯಾಘಾತದಿಂದ ನಿಧನರಾಗಿರುವುದನ್ನು ದೃಢಪಡಿಸಿದ್ದಾರೆ. ಕೆಲವೇ ತಿಂಗಳುಗಳ ಹಿಂದೆ ಉಲ್ಲಾಸ್ ಗೌಡ ಅವರಿಗೆ ವಿವಾಹ ನಿಶ್ಚಯವಾಗಿತ್ತು. ಇತ್ತೀಚೆಗಷ್ಟೇ ಮನೆಯಲ್ಲಿ ದೀಪ ಶಾಸ್ತ್ರದ ಕಾರ್ಯಕ್ರಮವೂ ಜರುಗಿದ್ದು, ಕುಟುಂಬದಲ್ಲಿ ಮದುವೆಯ ಸಂಭ್ರಮ ಮನೆಮಾಡಿತ್ತು. ಆಗಸ್ಟ್‌ನಲ್ಲಿ ನಿಶ್ಚಿತಾರ್ಥ ಮತ್ತು ಡಿಸೆಂಬರ್‌ನಲ್ಲಿ ಅದ್ದೂರಿಯಾಗಿ ಮದುವೆ ಮಾಡಲು ಕುಟುಂಬಸ್ಥರು ಸಿದ್ಧತೆ ನಡೆಸಿದ್ದರು. ಆದರೆ, ಅವರ ಅಕಾಲಿಕ ಸಾವಿನಿಂದಾಗಿ ಮದುವೆ ಮನೆ ಶೋಕಸಾಗರದಲ್ಲಿ ಮುಳುಗಿದೆ.

ಕೊಪ್ಪಳ : ಓಮಿನಿಗೆ ಡಿಕ್ಕಿ ಹೊಡೆದ ಲಾರಿ ; ಐವರು ಮೃತ, ಗಾಯಗೊಂಡ 6 ಮಂದಿಯಲ್ಲಿ ಇಬ್ಬರ ಸ್ಥಿತಿ ಗಂಭೀರ

ಕೊಪ್ಪಳ, ಜೂ. 27- ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ಭಾನಾಪೂರ ಸಮೀಪ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಶನಿವಾರ ಬೆಳಗಿನ ಜಾವ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಐವರು ಮೃತಪಟ್ಟಿದ್ದು, ಇಬ್ಬರ ಸ್ಥಿತಿ ಗಂಭೀರವಾಗಿದೆ. ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲೂಕಿನ ಕಬ್ಬಾರ್ ಗ್ರಾಮದ ನಿವಾಸಿಗಳು ಮಂತ್ರಾಲಯಕ್ಕೆ ತೆರಳುತ್ತಿದ್ದಾಗ, ಅಶೋಕ್ ಲೇಲ್ಯಾಂಡ್ ಲಾರಿ ನಿಯಂತ್ರಣ ತಪ್ಪಿ ಡಿವೈಡರ್ ದಾಟಿ ಎದುರು ಬರುತ್ತಿದ್ದ ಓಮಿನಿ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ದುರಂತ ಸಂಭವಿಸಿದೆ.

ಮೃತರಲ್ಲಿ ಕೆಂಚಮ್ಮ ಬಾಳೆಕಾಯಿ (35), ಅಮೃತಾ ಕೋಟ್ಯಾಳ್ (25), ರಮೇಶ್ ಬಳ್ಳಾರಿ (45), ಪ್ರವೀಣ್ ಬಾಳೆಕಾಯಿ (23) ಸ್ಥಳದಲ್ಲೇ ಸಾವನ್ನಪ್ಪಿದ್ದು, ತೀವ್ರ ಗಾಯಗೊಂಡಿದ್ದ ಚಿನ್ಮಯ (30) ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಗಾಯಗೊಂಡ ಆರು ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ. ಘಟನಾ ಸ್ಥಳಕ್ಕೆ ಕುಕನೂರು ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಂಸದ ಬಸವರಾಜ ಬೊಮ್ಮಾಯಿ ಸಂತಾಪ ಸೂಚಿಸಿ, ಮಂತ್ರಾಲಯ ದರ್ಶನಕ್ಕೆ ತೆರಳುತ್ತಿದ್ದವರ ಸಾವು ನೋವು ಸುದ್ದಿ ಅತ್ಯಂತ ದುಃಖಕರ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಕುಟುಂಬಸ್ಥರಿಗೆ ದೇವರು ಶಕ್ತಿ ನೀಡಲಿ. ಗಾಯಾಳುಗಳಿಗೆ ಉತ್ತಮ ಚಿಕಿತ್ಸೆ ದೊರಕಲಿ. ರಾಜ್ಯ ಸರ್ಕಾರವು ತಕ್ಷಣ ಪರಿಹಾರ ಘೋಷಿಸಬೇಕು ಎಂದು ಎಕ್ಸ್ ಪೋಸ್ಟ್ ಮಾಡಿದ್ದಾರೆ.

ಧಾರವಾಡದಲ್ಲಿ ಪ್ರತ್ಯೇಕ ಘಟನೆ: ಧಾರವಾಡ ತಾಲೂಕಿನ ಬೇಲೂರ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಶುಕ್ರವಾರ ನಡೆದ ಮತ್ತೊಂದು ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ನಿಂತಿದ್ದ ಲಾರಿಗೆ ಹಿಂಬದಿಯಿಂದ ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಷಣ್ಮುಖ ಜೋಗಿ (28) ಹಾಗೂ ಉತ್ತರ ಪ್ರದೇಶದ ಸಾಗರ್ (30) ಮೃತಪಟ್ಟಿದ್ದಾರೆ. ಟೈರ್‌ಬ್ಲಾಸ್ಟ್ ಆಗಿದ್ದ ಕಾರಣ ಲಾರಿ ಮಧ್ಯೆ ನಿಲ್ಲಿಸಲಾಗಿತ್ತು. ಗರಗ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

*Printed & Published by Mr. Pravin Murlidhar Shingote on behalf of Shree Ambika Printers & Publications and Printed at Shree Ambika Printers & Publications, Plot No. D-222/1/B, T T C Industrial Area, MIDC, Shiravane, Opp. D. Y. Patil Stadium, Near Mumbai-Pune Highway, Nerul (E), Navi Mumbai, Thane-400706. Published from 215, 2nd Flr, Narayan Udyog Bhavan, Industrial Estate, Lalbaug, Mumbai - 400012. Tel. : 24715208 To 2 471 5224. Founder : Late Murlidhar Ananta Shingote. Editor : Chandrashekhar Palethady (*Responsible for selection of News under the PRB Act) Regd.No.MH/by South 296 RNI No.: 56957/92 E-mail : shrirammalla@gmail.com*



ಅಶೋಕ್ ಪುರೋಹಿತ್
98699 60301

ನಿಮ್ಮ ಭವಿಷ್ಯ

28-06-2026 ರಿಂದ 04-07-2026

ಮೇಷ ರಾಶಿ : ವ್ಯಾಪಾರಸ್ಥರು ಧನ ಪ್ರಾಪ್ತಿಯನ್ನು ಪಡೆಯುವರು. ಮಕ್ಕಳಿಗೆ ಆರೋಗ್ಯದಲ್ಲಿ ಎಚ್ಚರ ವಹಿಸಿರಿ. ವಿದೇಶದಿಂದ ಪರಸ್ಥಳದಿಂದ ಬಂಧು ಮಿತ್ರರ ಆಗಮನವಿರುವುದು. ಅವಿವಾಹಿತರಿಗೆ ವಿವಾಹ ಯೋಗ ಇರುವುದು. ಸ್ತ್ರೀಯರಿಗೆ ವಾರಪೂರ್ತಿ ಮಾನಸಿಕ ಗೊಂದಲ ಇರುವುದು. ನೌಕರಿಯಲ್ಲಿರುವವರಿಗೆ ಭಡ್ತಿ ಅಥವಾ ಉತ್ತಮ ಸ್ಥಾನಮಾನ ಪ್ರಾಪ್ತಿಯಾಗಲಿರುವುದು.
ಶುಭದಿನ : ಶುಕ್ರವಾರ, ಶುಭ ಸಂಖ್ಯೆ : 6. ಆದಾಯ : 7, ಖರ್ಚು : 4.

ವೃಷಭ ರಾಶಿ : ಈ ವಾರದಲ್ಲಿ ಮಕ್ಕಳಿಗೆ ಶುಭವಾಗಿರುವುದು. ಮನೆಯಲ್ಲಿ ಮಂಗಳ ಕಾರ್ಯದ ತಯಾರಿ ನಡೆಯಲಿರುವುದು. ವಿದೇಶದಿಂದ ಬಂಧುಗಳ ಮಿತ್ರರ ಆಗಮನವಿರುವುದು. ಸ್ತ್ರೀಯರಿಗೆ ನೂತನ ವಸ್ತ್ರಾಭರಣ ಲಾಭವಾಗಲಿದೆ. ಅನಿರೀಕ್ಷಿತ ಮೂಲಗಳಿಂದ ಧನ ಪ್ರಾಪ್ತಿಯಾಗಲಿರುವುದು. ನೌಕರಿಯಲ್ಲಿರುವವರಿಗೆ ಸ್ಥಿರ ಸ್ಥಾನ ಪ್ರಾಪ್ತವಾಗಲಿದೆ. ಅವಿವಾಹಿತರಿಗೆ ವಿವಾಹ ಯೋಗ ಇರುವುದು. ಸ್ಥಿರ ಮನಸ್ಸಿನಿಂದ ಕಾರ್ಯ ಮಾಡಿದರೆ ಶುಭವಾಗುವುದು.
ಶುಭದಿನ : ಬುಧವಾರ, ಶುಭ ಸಂಖ್ಯೆ : 6. ಆದಾಯ : 10, ಖರ್ಚು : 6.

ಮಿಥುನ ರಾಶಿ : ಧಾರ್ಮಿಕ ಕಾರ್ಯಗಳ ಬಗ್ಗೆ ತಿರುಗಾಡಬೇಕಾಗುವುದು. ಪುರುಷರಿಗೆ ಹಳೆಯ ಮಿತ್ರರಿಂದ ಆರ್ಥಿಕ ಸಹಾಯ ದೊರಕಲಿರುವುದು. ಭೂಮಿ ವಸ್ತು ವಾಹನ ಖರೀದಿಸುವ ಯೋಗ ಇರುವುದು. ವ್ಯಾಪಾರಸ್ಥರಿಗೆ ಲಾಭವಾಗಲಿರುವುದು. ನೌಕರಿಯಲ್ಲಿರುವವರಿಗೆ ಅನಿರೀಕ್ಷಿತ ಕೆಲಸದ ಒತ್ತಡ ಹೆಚ್ಚಾಗಲಿರುವುದು. ಆತುರ ಸ್ವಭಾವ ಕಷ್ಟ ನಷ್ಟವನ್ನು ತಂದುಕೊಡುವುದು. ವಿಶೇಶ ವ್ಯಕ್ತಿಗಳ ಸಂದರ್ಶನವಾಗಲಿರುವುದು.
ಶುಭದಿನ : ಸೋಮವಾರ, ಶುಭ ಸಂಖ್ಯೆ : 3. ಆದಾಯ : 9, ಖರ್ಚು : 4.

ಕರ್ಕಾಟಕ ರಾಶಿ : ಪ್ರತಿದಿನ ವ್ಯವಹಾರದಲ್ಲಿ ವಾರಪೂರ್ತಿ ಶುಭವಾಗಲಿರುವುದು. ಹಳೆಯ ಮಿತ್ರರಿಂದ ಸಂತೋಷ ದೊರಕಲಿರುವುದು. ಮಕ್ಕಳಿಗೆ ಆರೋಗ್ಯದ ಬಗ್ಗೆ ಎಚ್ಚರ ವಹಿಸಿರಿ. ನೌಕರಿಯಲ್ಲಿರುವವರಿಗೆ ಸ್ಥಿರ ಸ್ಥಾನ ಪ್ರಾಪ್ತಿಯಾಗಲಿರುವುದು. ವ್ಯಾಪರಸ್ಥರಿಗೆ ನಿರೀಕ್ಷಿತ ಧನ ಪ್ರಾಪ್ತಿಯಾಗಲಿರುವುದು. ದೂರ ಪ್ರಯಾಣದಲ್ಲಿ ವಸ್ತುಗಳನ್ನು ಜಾಗ್ರತೆ ವಹಿಸಿರಿ. ಅವಿವಾಹಿತರಿಗೆ ವಿವಾಹ ಯೋಗ ಇದೆ. ವಿದೇಶ ಪ್ರಯಾಣದಲ್ಲಿ ಮಂದಗತಿಯಾಗಲಿದೆ. ಅಪರಿಚಿತರಿಂದ ಎಚ್ಚರವಿರಿ.
ಶುಭದಿನ : ಶುಕ್ರವಾರ, ಶುಭ ಸಂಖ್ಯೆ : 6. ಆದಾಯ : 8, ಖರ್ಚು : 5.

ಸಿಂಹ ರಾಶಿ : ನಿರೀಕ್ಷಿತ ಧನ ಲಾಭವಾಗಲಿದೆ. ಅಕಸ್ಮಿಕ ಬಂದ ಅತಿಥಿಗಳಿಂದ ಸಂತೋಷವಾಗಲಿದೆ. ವಿದೇಶ ಪ್ರಯಾಣದಲ್ಲಿ ಶುಭವಾಗಲಿರುವುದು. ಸ್ಥಿರ ಮನಸ್ಸಿನಿಂದ ಕಾರ್ಯ ಮಾಡಿದಾಗ ಶುಭವಾಗಲಿದೆ. ಪುರುಷರಿಂದ ಸ್ತ್ರೀಯರಿಗೆ ಮಾನಸಿಕ ಸಹಕಾರ ದೊರಕಲಿದೆ. ವ್ಯಾಪಾರಸ್ಥರಿಗೆ ಕೆಲಸ ಕಾರ್ಯದ ನಿಮಿತ್ತ ಪ್ರಯಾಣವಿರುವುದು. ನೌಕರಿಯಲ್ಲಿರುವವರಿಗೆ ಹಳೆಯ ಮಿತ್ರರಿಂದ ಉಪಕಾರ ಸಿಗುವುದು. ಸ್ತ್ರೀಯರಿಗೆ ಆರೋಗ್ಯದ ಬಗ್ಗೆ ಎಚ್ಚರ ವಹಿಸಿರಿ. ವಸ್ತು ವಾಹನ ಖರೀದಿಸುವ ಬಗ್ಗೆ ಚಿಂತಿಸಿರಿ.
ಶುಭದಿನ : ಬುಧವಾರ, ಶುಭ ಸಂಖ್ಯೆ : 3. ಆದಾಯ : 10, ಖರ್ಚು : 8.

ಕನ್ಯಾ ರಾಶಿ : ಕುಟುಂಬದಲ್ಲಿ ಹಿರಿಯರೊಂದಿಗೆ ಮಾತಿನ ಚಕಮಕಿ ನಡೆಯಿತು. ಸಹೋದರ ಸಹೋದರಿಯ ನಡುವೆ ಶಾಂತಿ ಕಾಪಾಡಿರಿ. ವ್ಯಾಪಾರಸ್ಥರಿಗೆ ಧನ ಲಾಭವಾಗಲಿದೆ. ಬಂಧು ಮಿತ್ರರ ಆಗಮನವಿರುವುದು. ನೌಕರಿಯಲ್ಲಿರುವವರಿಗೆ ಹೊಸ ನೌಕರಿ ಸಿಗುವ ಸೂಚನೆ ಕಾಣುವುದು. ಮಕ್ಕಳಿಗೆ ಶುಭವಾಗಲಿದೆ. ವಿದ್ಯಾರ್ಥಿಗಳ ಚಂಚಲತೆಯನ್ನು ಬಿಟ್ಟು ಕೆಲಸ ಮಾಡಿದಾಗ ಶುಭವಾಗಲಿದೆ. ದೂರ ಪ್ರಯಾಣದಲ್ಲಿ ಎಚ್ಚರವಹಿಸಿರಿ.
ಶುಭದಿನ : ಸೋಮವಾರ, ಶುಭ ಸಂಖ್ಯೆ : 6. ಆದಾಯ : 4, ಖರ್ಚು : 4.

ತುಲಾ ರಾಶಿ : ಆಗತ್ಯ ಕಾರ್ಯಗಳ ನಿಮಿತ್ತ ಖರ್ಚುಗಳು ಬರಲಿರುವುದು. ಸ್ತ್ರೀಯರಿಗೆ ಸ್ಥಿರ ಮನಸ್ಸಿನಿಂದ ಕಾರ್ಯ ಮಾಡುವಾಗ ಕಾರ್ಯ ಜಯವಾಗಲಿದೆ. ವ್ಯಾಪಾರಸ್ಥರಿಗೆ ಅಭಿವೃದ್ಧಿಯ ಎಲ್ಲಾ ಸೂಚನೆಗಳು ಕಾಣಲಿರುವುದು. ವಿದ್ಯಾರ್ಥಿಗಳಿಗೆ ಮಧ್ಯಮ ಫಲವಿರುವುದು. ಕುಟುಂಬದಲ್ಲಿ ಮಂಗಳ ಕಾರ್ಯದ ನಿಮಿತ್ತ ಖರ್ಚು ವೆಚ್ಚಗಳು ಬರುವುದು. ನೌಕರಿಯಲ್ಲಿರುವವರಿಗೆ ಮೇಲಾಧಿಕಾರಿಗಳಿಂದ ಮಾನಸಿಕ ಒತ್ತಡವಿರುವುದು.
ಶುಭದಿನ : ಬುಧವಾರ, ಶುಭ ಸಂಖ್ಯೆ : 1. ಆದಾಯ : 8, ಖರ್ಚು : 7.

ವೃಶ್ಚಿಕ ರಾಶಿ : ಆದಾಯ ಮೀರಿದ ಖರ್ಚುಗಳನ್ನು ಕಾಣುತ್ತೀರಿ. ವಿದೇಶದಿಂದ ಬಂಧುಗಳ ಆಗಮನವಿರುವುದು. ಮಕ್ಕಳಿಗೆ ಆರೋಗ್ಯದ ಬಗ್ಗೆ ಎಚ್ಚರ ವಹಿಸಿರಿ. ವಿದ್ಯಾರ್ಥಿಗಳಿಗೆ ಕಠಿಣ ಪರಿಶ್ರಮದಿಂದ ಮಾತ್ರ ಫಲ ಪ್ರಾಪ್ತಿಯಾಗಲಿರುವುದು. ವ್ಯಾಪಾರಸ್ಥರಿಗೆ ಕಾನೂನಿನ ಸಂಬಂಧ ಪಟ್ಟ ವಿಷಯದಲ್ಲಿ ಎಚ್ಚರವಹಿಸಿರಿ. ಅವಿವಾಹಿತರಿಗೆ ವಿವಾಹ ಯೋಗ ಕೂಡಿ ಬರಲಿದೆ. ವಿದೇಶ ಪ್ರಯಾಣ ಸಾಧ್ಯತೆ ಇರುವುದು. ಅಪರಿಚಿತರಿಂದ ಎಚ್ಚರವಹಿಸಿರಿ. ಭೂಮಿ ಖರೀದಿಸುವಾಗ ಎಚ್ಚರವಹಿಸಿರಿ.
ಶುಭದಿನ : ಶುಕ್ರವಾರ, ಶುಭ ಸಂಖ್ಯೆ : 4. ಆದಾಯ : 6, ಖರ್ಚು : 8.

ಧನು ರಾಶಿ : ಧನ ಲಾಭವಾಗಲಿದೆ. ದೂರ ಪ್ರಯಾಣ ಮಾಡುವಿರಿ. ನೌಕರಿಯಲ್ಲಿರುವವರು ಸಹನೆ ಕಾಪಾಡಿರಿ. ಪುರುಷರಿಗೆ ಮಾನಸಿಕ ಒತ್ತಡವಿರಲಿದೆ. ಸ್ತ್ರೀಯರಿಗೆ ಮಕ್ಕಳಿಂದ ಶುಭವಾಗಲಿದೆ. ವ್ಯಾಪಾರಸ್ಥರಿಗೆ ಕಾರ್ಯ ಲಾಭವಾಗಲಿರುವುದು. ಸಹೋದರರಿಂದ ಸಂತೋಷ ಪ್ರಾಪ್ತಿಯಾಗಲಿದೆ. ವಾಹನದಲ್ಲಿ ಎಚ್ಚರವಹಿಸಿರಿ. ಅಪರಿಚಿತರಿಂದ ಎಚ್ಚರ ವಹಿಸಿ. ಬಂಧುಗಳಿಂದ ಜಾಗ್ರತೆಯಿರಿ. ವಿದ್ಯಾರ್ಥಿಗಳಿಗೆ ಶುಭವಾಗಲಿದೆ. ಅವಿವಾಹಿತರಿಗೆ ವಿವಾಹ ಯೋಗ ಇರುವುದು.
ಶುಭದಿನ : ಗುರುವಾರ, ಶುಭ ಸಂಖ್ಯೆ : 1. ಆದಾಯ : 10, ಖರ್ಚು : 4.

ಮಕರ ರಾಶಿ : ಹಣದ ವಿಚಾರದಲ್ಲಿ ಬಂಧುಗಳ ಹಸ್ತಕ್ಷೇಪವಿರುವುದು. ಮಕ್ಕಳಿಗೆ ಆರೋಗ್ಯದಲ್ಲಿ ಎಚ್ಚರ ವಹಿಸಿ. ಸ್ತ್ರೀಯರಿಗೆ ಸ್ನೇಹಿತರಿಂದಲೇ ಮಾನಸಿಕ ಕಿರಿಕಿರಿಯಾಗುವುದು. ವ್ಯಾಪಾರಸ್ಥರಿಗೆ ದೂರ ಪ್ರಯಾಣದ ಸಾಧ್ಯತೆ ಇರುವುದು. ವಿದ್ಯಾರ್ಥಿಗಳಿಗೆ ಕಠಿಣ ಪರಿಶ್ರಮದ ಅಗತ್ಯವಿರುವುದು. ವಿದೇಶದಲ್ಲಿರುವವರಿಗೆ ಮಾನಸಿಕ ಅಶಾಂತಿ ಕಾಣಬಹುದು. ನೌಕರಿಯಲ್ಲಿರುವವರಿಗೆ ಧನ ಪ್ರಾಪ್ತಿಯಾಗಲಿದೆ.
ಶುಭದಿನ : ಶನಿವಾರ, ಶುಭ ಸಂಖ್ಯೆ : 2. ಆದಾಯ : 7, ಖರ್ಚು : 6.

ಕುಂಭ ರಾಶಿ : ಪಾಲಿಗೆ ಬಂದದ್ದು ಪಂಚಾಮೃತ ಅನ್ನುವ ಹಾಗೆ ಸಿಕ್ಕಿದರಲ್ಲೇ ತೃಪ್ತಿ ಪಡೆಯಿರಿ. ವಿದೇಶದಿಂದ ಶುಭ ಸಮಾಚಾರವಾಗಲಿದೆ. ಮಕ್ಕಳಿಗೆ ಶುಭವಾಗಲಿದೆ. ಅವಿವಾಹಿತರಿಗೆ ಶಾಂತಿ ಕಾಪಾಡಿರಿ. ಪುರುಷರಿಗೆ ಪರಸ್ಪರ ಪ್ರಯಾಣದಲ್ಲಿ ಶುಭವಾಗಲಿರುವುದು. ಸ್ಥಿರತೆಯಿಂದ ನಿರ್ಧಾರವನ್ನು ತೆಗೆದುಕೊಂಡಾಗ ಶುಭವಾಗಲಿದೆ. ವ್ಯಾಪಾರಸ್ಥರಿಗೆ ಅನಿರೀಕ್ಷಿತ ಧನ ಲಾಭವಾಗಲಿದೆ. ಆರೋಗ್ಯದಲ್ಲಿ ಎಚ್ಚರವಿರಿ.
ಶುಭ ದಿನ : ಶನಿವಾರ, ಶುಭ ಸಂಖ್ಯೆ : 3. ಆದಾಯ : 9, ಖರ್ಚು : 4.

ಮೀನಾ ರಾಶಿ : ದೇವತಾ ಕಾರ್ಯಕ್ಕೆ ಖರ್ಚು ವೆಚ್ಚಗಳು ಬರುವುದು. ಪುರುಷರಿಗೆ ಶುಭವಾಗಲಿದೆ. ಸ್ತ್ರೀಯರಿಗೆ ವಸ್ತು, ವಸ್ತ್ರ, ಆಭರಣ ಲಾಭವಾಗಲಿದೆ. ವ್ಯಾಪಾರಸ್ಥರಿಗೆ ಕಾರ್ಯದಲ್ಲಿ ಜಯ ಪ್ರಾಪ್ತಿಯಾಗಲಿದೆ. ಕೋರ್ಟು ಕಛೇರಿಯಲ್ಲಿ ಜಯ ದೊರಕುವುದು. ಅವಿವಾಹಿತರಿಗೆ ವಿವಾಹ ಯೋಗ ಇದೆ. ನೌಕರಿಯಲ್ಲಿರುವವರಿಗೆ ಸ್ಥಿರ ಸ್ಥಾನ ಪ್ರಾಪ್ತಿಯಾಗಲಿದೆ. ವಾಹನ ಖರೀದಿಸುವ ಯೋಗ ಇದೆ. ಮಕ್ಕಳಿಗೆ ಮನರಂಜನೆ ಇದೆ.
ಶುಭದಿನ : ಬುಧವಾರ, ಶುಭ ಸಂಖ್ಯೆ : 1. ಆದಾಯ : 10, ಖರ್ಚು : 6.

ಥಾಣೆ: ನಿಲ್ಲಿಸಿದ್ದ ಕಾರಿನೊಳಗೆ ಏರ್‌ಬ್ಯಾಗ್ ಡಿಪ್ಲೊಸ್: ವ್ಯಕ್ತಿ ಸಾವು

ಥಾಣೆ, ಜೂ. 27 - ಥಾಣೆ ಜಿಲ್ಲೆಯಲ್ಲಿ ನಡೆದ ವಿಚಿತ್ರ ಅಪಘಾತವೊಂದರಲ್ಲಿ ನಿಲ್ಲಿಸಿದ್ದ ವಾಹನದೊಳಗೆ ಏರ್‌ಬ್ಯಾಗ್ ಅನಿರೀಕ್ಷಿತವಾಗಿ ಡಿಪ್ಲೊಸ್ ಆಗಿ 25 ವರ್ಷದ ವ್ಯಕ್ತಿಯೊಬ್ಬ ರಕ್ತಸ್ರಾವವಾಗಿ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಬುಧವಾರ ಕಾಶಿಮಿರಾ ಪ್ರದೇಶದಲ್ಲಿ ಈ ಘಟನೆ ನಡೆದಿದ್ದು, ಬಲಿಪಶು ಕಾರು ವ್ಯಾಪಾರಿ 15 ವರ್ಷ ಹಳೆಯ ಕಾರಿನಲ್ಲಿದ್ದಾಗ, ಸುರಕ್ಷತಾ ವ್ಯವಸ್ಥೆ ಇದ್ದಕ್ಕಿದ್ದಂತೆ ಕಾರ್ಯಪ್ರವೃತ್ತವಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಏರ್‌ಬ್ಯಾಗ್ ಸಡಿಲಗೊಂಡು, ಭಾರೀ ಡಿಕ್ಕಿ ಹೊಡೆದ ಪರಿಣಾಮ ಅವರಿಗೆ ತೀವ್ರ ಗಾಯಗಳಾಗಿದ್ದು, ವೈದ್ಯಕೀಯ ನೆರವು ಪಡೆಯುವ ಮೊದಲೇ ಮಾರಕ ರಕ್ತ ನಷ್ಟ ಸಂಭವಿಸಿದೆ. ಪ್ರಾಥಮಿಕ ತನಿಖೆಯ ಪ್ರಕಾರ, ಕಾರು ಹಳೆಯದಾಗಿದ್ದರೂ, ಅಧಿಕೃತ ದಾಖಲೆಗಳು ಕಾರು ಇನ್ನೂ ಮಾನ್ಯವಾದ ಫಿಟ್‌ನೆಸ್ ಪ್ರಮಾಣಪತ್ರವನ್ನು ಹೊಂದಿದೆ ಎಂದು ಸೂಚಿಸುತ್ತವೆ. ಪೊಲೀಸರು ಆಕಸ್ಮಿಕ ಸಾವಿನ ಪ್ರಕರಣವನ್ನು ದಾಖಲಿಸಿದ್ದಾರೆ ಮತ್ತು ತನಿಖೆಯನ್ನು ಪ್ರಾರಂಭಿಸಿದ್ದಾರೆ ಮತ್ತು ಆಟೋಮೊಬೈಲ್ ತಜ್ಞರೊಂದಿಗೆ ಸಮಾಲೋಚಿಸುತ್ತಿದ್ದಾರೆ ಎಂದು ಅಧಿಕಾರಿ ಹೇಳಿದರು.

ಮಾಸ್ಟರ್‌ಮೈಂಡ್ ವಿರುದ್ಧ ಮೋಕಾ ಅಡಿ ಕ್ರಮ ; ಏಕನಾಥ್ ಶಿಂದೆ

ಮುಂಬಯಿ,ಜೂ.27 - ಟಿಇಟಿ ಪತ್ರಿಕೆ ಸೋರಿಕೆಯ ಮಾಸ್ಟರ್‌ಮೈಂಡ್‌ಗಳ ವಿರುದ್ಧ ಮೋಕಾ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ತಿಳಿಸಿದ್ದಾರೆ.

ಈ ಪ್ರಕರಣದ ಅಪರಾಧಿಗಳನ್ನು ಬಂಧಿಸಿ ಅವರ ವಿರುದ್ಧ ಮೋಕಾ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರೊಂದಿಗೆ ಈ ವಿಷಯವನ್ನು ವಿವರವಾಗಿ ಚರ್ಚಿಸುವುದಾಗಿ ಶಿಂದೆ ಹೇಳಿದ್ದಾರೆ.

ಟಿಇಟಿ ಪ್ರಶ್ನೆಪತ್ರಿಕೆ ಸೋರಿಕೆ ಘಟನೆ ತುಂಬಾ ತೊಂದರೆದಾಯಕವಾಗಿದ್ದು, ಈ ಪ್ರಕರಣದ ಪ್ರಮುಖ ಮಾಸ್ಟರ್‌ಮೈಂಡ್‌ಗಳು ಮತ್ತು ಆರೋಪಿಗಳ ವಿರುದ್ಧ ಮೋಕಾ ಅಡಿಯಲ್ಲಿ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿ ಫಡ್ನವೀಸ್ ಅವರೊಂದಿಗೆ ಈ ವಿಷಯವನ್ನು ವಿವರವಾಗಿ ಚರ್ಚಿಸುವುದಾಗಿ ಅವರು ತಿಳಿಸಿದ್ದಾರೆ. ಟಿಇಟಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವನ್ನು ಕೂಲಂಕಷವಾಗಿ ತನಿಖೆ ಮಾಡಲಾಗುವುದು. ಈ ಪ್ರಕರಣದಲ್ಲಿ ಅಪರಾಧಿಗೆ ಅವರ ಸ್ಥಾನಮಾನ ಅಥವಾ ಅವರು ಯಾವುದೇ ಸಂಘಟಿತ ಗ್ಯಾಂಗ್‌ನ ಭಾಗವಾಗಿದ್ದರೂ ಯಾವುದೇ ರಿಯಾಯಿತಿ ನೀಡಲಾಗುವುದಿಲ್ಲ. ಕಾನೂನಿನ ಪ್ರಕಾರ ಸಂಬಂಧಪಟ್ಟ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಶಿಂದೆ ಸ್ಪಷ್ಟಪಡಿಸಿದ್ದಾರೆ.

ರಹಸ್ಯ ಮಾಹಿತಿಯ ಆಧಾರದ ಮೇಲೆ ತ್ವರಿತ ದಾಳಿ ನಡೆಸುವ ಮೂಲಕ ಲಕ್ಷಾಂತರ ಶ್ರಮಶೀಲ ಮತ್ತು ಪ್ರಾಮಾಣಿಕ ಅಭ್ಯರ್ಥಿಗಳ ಭವಿಷ್ಯವನ್ನು ಕತ್ತಲೆಯಲ್ಲಿ ಬೀಳದಂತೆ ಪೊಲೀಸರು ಉಳಿಸಿದ್ದಾರೆ. ಟಿಇಟಿ ಪರೀಕ್ಷೆಗೆ ಹಾಜರಾದ ಎಲ್ಲಾ ಅಭ್ಯರ್ಥಿಗಳಿಗೆ ಭರವಸೆ ನೀಡಿದ ಶಿಂದೆ,ಈ ಪರೀಕ್ಷೆಯನ್ನು ಸಾಧ್ಯವಾದಷ್ಟು ಬೇಗ ಹೊಸ ದಿನಾಂಕಗಳಲ್ಲಿ ಸಂಪೂರ್ಣವಾಗಿ ಪಾರದರ್ಶಕ ಮತ್ತು ನ್ಯಾಯಯುತ ರೀತಿಯಲ್ಲಿ ನಡೆಸಲಾಗುವುದು ಎಂದು ಹೇಳಿದ್ದಾರೆ.

ಯಾವುದೇ ಪ್ರಾಮಾಣಿಕ ಅಭ್ಯರ್ಥಿಯ ಹಕ್ಕುಗಳನ್ನು ಉಲ್ಲಂಘಿಸಲು ಬಿಡುವುದಿಲ್ಲ. ಮಹಾರಾಷ್ಟ್ರದ ಶಿಕ್ಷಣ ವ್ಯವಸ್ಥೆಯನ್ನು ಭ್ರಷ್ಟಾಚಾರ ಮುಕ್ತ, ಗುಣಮಟ್ಟ ಮತ್ತು ಹೆಚ್ಚು ಸಮರ್ಥವಾಗಿಸುವುದು ಮಹಾಯುತಿ ಸರಕಾರದ ಗುರಿ ಎಂದು ಉಪಮುಖ್ಯಮಂತ್ರಿ ತಿಳಿಸಿದ್ದಾರೆ.

ಥಾಣೆ: ಸುಳ್ಳು ದೂರು ನೀಡಿ ಶಾಲೆಯಿಂದ 15 ಲಕ್ಷ ರೂ. ಸುಲಿಗೆ ಮಾಡಲು ಯತ್ನಿಸಿದ ಇಬ್ಬರ ಬಂಧನ

ಥಾಣೆ, ಜೂ. 27 - ಮಹಾರಾಷ್ಟ್ರದ ಥಾಣೆ ನಗರದ ಖಾಸಗಿ ಶಾಲೆಯ ಕಟ್ಟಡ ಅನಧಿಕೃತವಾಗಿದೆ ಎಂದು ಸುಳ್ಳು ದೂರುಗಳನ್ನು ದಾಖಲಿಸಿ ಆಡಳಿತ ಮಂಡಳಿಯಿಂದ 15 ಲಕ್ಷ ರೂ. ಸುಲಿಗೆ ಮಾಡಲು ಯತ್ನಿಸಿದ ಆರೋಪದ ಮೇಲೆ ಇಬ್ಬರು ವ್ಯಕ್ತಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ದೂರಿನ ಆಧಾರದ ಮೇಲೆ, ಗುರುವಾರ ನಗರದ ಪಂಚ ಪಾಖಡಿ ಪ್ರದೇಶದಲ್ಲಿ ಸುಲಿಗೆ ಮೊತ್ತವನ್ನು ಸ್ವೀಕರಿಸುತ್ತಿದ್ದಾಗ ಸುಲಿಗೆ ವಿರೋಧಿ ವಿಭಾಗ (ಎಇಸಿ) ಬಲೆ ಬೀಸಿ ಆರೋಪಿಗಳನ್ನು ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಆರ್‌ಟಿಐ ಕಾರ್ಯಕರ್ತರೆಂದು ಹೇಳಿಕೊಂಡ ಆರೋಪಿಗಳಾದ ರಾಜ್‌ವೀರ್ ರಜಪೂತ್ ಮತ್ತು ನಾರಾಯಣ್ ಶರ್ಮಾ, ಘೋಡ್‌ಬಂದರ್ ರೋಡ್ ಪ್ರದೇಶದಲ್ಲಿರುವ ಸೇಂಟ್ ಕ್ಸೇವಿಯರ್ಸ್ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜಿನ ಕಟ್ಟಡವು ಅನಧಿಕೃತವಾಗಿದೆ ಎಂದು ಆರೋಪಿಸಿ ನಗರ ಪಾಲಿಕೆಗೆ ದೂರುಗಳನ್ನು ಸಲ್ಲಿಸಿದ್ದರು. ಈ ಇಬ್ಬರು ಸಂಸ್ಥೆಯ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಬೆದರಿಕೆ ಹಾಕಿದ್ದಾರೆ ಮತ್ತು ತಮ್ಮ ದೂರುಗಳನ್ನು ಹಿಂಪಡೆಯಲು 25 ಲಕ್ಷ ರೂ. ಕೇಳಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಶಾಲಾ ಆಡಳಿತ ಮಂಡಳಿಯು ಆರೋಪಿಗಳೊಂದಿಗೆ ಮಾತುಕತೆ ನಡೆಸಿ ಅವರ ಬೇಡಿಕೆಯನ್ನು 15 ಲಕ್ಷ ರೂ.ಗಳಿಗೆ ಇಳಿಸಿತ್ತು ಎಂದು ಅವರು ಹೇಳಿದರು.

ಬಂಧಿತ ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 308(2) (ಸುಲಿಗೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅವರು ಹೇಳಿದರು.

ಚಿನ್ನದ ಮಾರುಕಟ್ಟೆ

22 ಕ್ಯಾರೆಟ್ : 1,36,950 ರೂ. (10 ಗ್ರಾಮ್‌ಗೆ)
24 ಕ್ಯಾರೆಟ್ : 1,43,950 ರೂ. (10 ಗ್ರಾಮ್‌ಗೆ)
ಬೆಳ್ಳಿ : 2,40,000 ರೂ. (ಒಂದು ಕೆಜಿಗೆ)

ಬಂಡಾಯ ಸಂಸದ ಓಂರಾಜೆ ನಿಂಬಾಳ್ಕರ್ ಪಕ್ಷ ಸೇರ್ಪಡೆ; ಧಾರಾಶಿವ್ ಶಿವಸೇನೆಯಲ್ಲಿ ಭಿನ್ನಮತ ಸ್ಫೋಟ

ಧಾರಾಶಿವ್,ಜೂ.27- ಇಲ್ಲಿನ ಸಂಸದ ಓಂರಾಜೆ ನಿಂಬಾಳ್ಕರ್ ಅವರು ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದ ಶಿವಸೇನೆಗೆ ಪ್ರವೇಶ ಪಡೆದಿರುವುದು ಉದ್ಧವ್ ಠಾಕ್ರೆಗೆ ದೊಡ್ಡ ಆಘಾತವನ್ನುಂಟು ಮಾಡಿರುವುದು ಮಾತ್ರವಲ್ಲದೆ, ಈಗ ಧಾರಾಶಿವ್ ಜಿಲ್ಲೆಯ ಶಿಂದೆಸೇನೆಯೊಳಗೆ ಆಂತರಿಕ ವಿವಾದವೂ ಭುಗಿಲೆದ್ದಿದೆ. ಓಂರಾಜೆ ಪಕ್ಷಕ್ಕೆ ಪ್ರವೇಶಿಸಿದ ಕೆಲವೇ ಗಂಟೆಗಳಲ್ಲಿ ಧಾರಾಶಿವ್ ಜಿಲ್ಲೆಯ ಸ್ಥಳೀಯ ಕಾರ್ಯಕರ್ತರ ಸಂಪೂರ್ಣ ಕಾರ್ಯಕಾರಿ ಸಮಿತಿಯನ್ನು ಪಕ್ಷವು ವಜಾಗೊಳಿಸಿದೆ.

ಈ ಹಠಾತ್ ನಿರ್ಧಾರವು ಶಿವಸೈನಿಕರಲ್ಲಿ ತೀವ್ರ ಅಸಮಾಧಾನವನ್ನು ಉಂಟುಮಾಡಿದೆ ಮತ್ತು ಪಕ್ಷದ ಧಾರಾಶಿವ್ ಜಿಲ್ಲಾ ಮುಖ್ಯಸ್ಥ ಅಜಿತ್ ಪಿಂಗಳೆ ಬಹಿರಂಗವಾಗಿ ವಿಷಾದ ವ್ಯಕ್ತಪಡಿಸಿದ್ದಾರೆ.

ಅಜಿತ್ ಪಿಂಗಳೆ ಅವರನ್ನು ಕೇವಲ ಎರಡು-ಮೂರು ತಿಂಗಳ ಹಿಂದೆ ಧಾರಾಶಿವ್ ಜಿಲ್ಲಾ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಆದಾಗ್ಯೂ, ನಿಂಬಾಳ್ಕರ್ ಅವರ ಪಕ್ಷ ಪ್ರವೇಶವು ಸ್ಥಳೀಯ ಮಟ್ಟದಲ್ಲಿ ಸಮೀಕರಣಗಳನ್ನು ಸಂಪೂರ್ಣವಾಗಿ ಬದಲಾಯಿಸಿದೆ.

ಕಾರ್ಯಕಾರಿಣಿ ವಿಸರ್ಜನೆಯ ಬಳಿಕ ಜಿಲ್ಲಾ ಮುಖ್ಯಸ್ಥ ಹುದ್ದೆಯಿಂದ ತೆಗೆದುಹಾಕಲ್ಪಟ್ಟ ಅಜಿತ್ ಪಿಂಗಳೆ, ನನ್ನಿಂದ ನಿಖರವಾಗಿ ಏನು ತಪ್ಪಾಯಿತು ಎಂದು ಪಕ್ಷವನ್ನು ಕೇಳಿದ್ದಾರೆ.

'ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಈ ಹುದ್ದೆಯನ್ನು ಹೊಂದಿದ್ದೇನೆ. ಜಿಲ್ಲಾ ಪರಿಷತ್ ಮತ್ತು ಪಂಚಾಯತ್ ಸಮಿತಿ ಚುನಾವಣೆಯಲ್ಲಿ ಪಕ್ಷಕ್ಕೆ ಉತ್ತಮ ಫಲಿತಾಂಶಗಳನ್ನು ಪಡೆದುಕೊಂಡಿದ್ದೇನೆ. ಇದರ ಹೊರತಾಗಿಯೂ, ಪಕ್ಷವು ಕೇವಲ ಎರಡು ತಿಂಗಳಲ್ಲಿ ನನ್ನ ಜಿಲ್ಲಾ ಮುಖ್ಯಸ್ಥ ಹುದ್ದೆಯನ್ನು ತೆಗೆದುಹಾಕಿದ್ದಕ್ಕೆ ನನಗೆ ತುಂಬಾ ದುಃಖವಾಗಿದೆ' ಎಂದು ಪಿಂಗಳೆ ಹೇಳಿದ್ದಾರೆ.

ಸಂಸದ ನಿಂಬಾಳ್ಕರ್ ಅವರೊಂದಿಗೆ ತನಗೆ ಯಾವುದೇ ವೈಯಕ್ತಿಕ ದ್ವೇಷವಿಲ್ಲ. ಇದಕ್ಕೆ ವಿರುದ್ಧವಾಗಿ ಅವರು ಪಕ್ಷಕ್ಕೆ ಸೇರಿದ ಬಳಿಕ ನಾನು ಅವರೊಂದಿಗೆ ಸಾಮರಸ್ಯ ಮತ್ತು ಬಲದಿಂದ ಕೆಲಸ ಮಾಡಲು ಸಂಪೂರ್ಣವಾಗಿ ಸಿದ್ಧರಾಗಿದ್ದೆ. ಆದಾಗ್ಯೂ, ಸ್ಥಳೀಯ ಹಳೆಯ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಕಾರ್ಯಕಾರಿಣಿಯನ್ನು ನೇರವಾಗಿ ವಜಾಗೊಳಿಸಿರುವುದು ಇಡೀ ಜಿಲ್ಲೆಯ ಶಿವಸೈನಿಕರಲ್ಲಿ ವ್ಯಾಪಕ ಅಸಮಾಧಾನವನ್ನು ಉಂಟುಮಾಡಿದೆ ಎಂದು ಅವರು ತಿಳಿಸಿದ್ದಾರೆ.

ಇತ್ತೀಚಿನ ಈ ನಾಟಕೀಯ ಬೆಳವಣಿಗೆಗಳ ಬಳಿಕ ಪಿಂಗಳೆ ಅವರು ನೇರವಾಗಿ ಪಕ್ಷದ ನಾಯಕತ್ವವನ್ನು ಗುರಿಯಾಗಿಸಿಕೊಂಡಿದ್ದಾರೆ. ಪಕ್ಷವು ನಮ್ಮನ್ನು ಯಾವಾಗ ಕರೆಯುತ್ತದೆ ಮತ್ತು ನಮಗೆ ಆಗಿರುವ ಈ ಅನ್ಯಾಯವನ್ನು ಅದು ಹೇಗೆ ತೆಗೆದುಹಾಕುತ್ತದೆ ಎಂಬುದನ್ನು ನೋಡಲು ನಾವು ಕಾಯುತ್ತಿದ್ದೇವೆ.ಪಕ್ಷದಿಂದ ಅಂತಿಮ ಸಂದೇಶಕ್ಕಾಗಿ ನಾನು ಕಾಯುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ.

ರಾಜೀನಾಮೆ ನೀಡಿ ಆರ್‌ಎಸ್‌ಎಸ್‌ಗೆ ಸೇರಿ : ಹಿಂದೂ ಸಮ್ಮೇಳನದಲ್ಲಿ ಭಾಗವಹಿಸಿದ ಐಪಿಎಸ್ ಅಧಿಕಾರಿ ವಿಶ್ವಾಸ್ ನಂಗ್ರೆ ಪಾಟೀಲ್‌ಗೆ ರಾಜ್‌ಠಾಕ್ರೆ ತರಾಟೆ

ಮುಂಬಯಿ, ಜೂ.27 - ಹಿಂದೂ ಸಕಲ್ ಸಮಾಜ ಕಾರ್ಯಕ್ರಮದಲ್ಲಿ ಭಾಗವಹಿಸಿ ಆರ್‌ಎಸ್‌ಎಸ್‌ನ್ನು 'ಹೊಗಳಿದ್ದಕ್ಕಾಗಿ' ಹಿರಿಯ ಐಪಿಎಸ್ ಅಧಿಕಾರಿ ವಿಶ್ವಾಸ್ ನಂಗ್ರೆ ಪಾಟೀಲ್ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಮನಸೇ ಮುಖ್ಯಸ್ಥ ರಾಜ್‌ಠಾಕ್ರೆ ಅವರು, ಈ ಉನ್ನತ ಪೊಲೀಸ್ ಅಧಿಕಾರಿ ಸಾರ್ವಜನಿಕವಾಗಿ ಇಂತಹ ಮೆಚ್ಚುಗೆಯನ್ನು ವ್ಯಕ್ತಪಡಿಸಲು ಬಯಸಿದರೆ ರಾಜೀನಾಮೆ ನೀಡಿ ಬಲಪಂಥೀಯ ಸಂಘಟನೆಗೆ ಸೇರಬೇಕು ಎಂದು ಹೇಳಿದರು.

ಪೊಲೀಸ್ ಅಧಿಕಾರಿಯ ನಿಷ್ಠೆಯು ಪಡೆಯ ಕರ್ತವ್ಯಗಳು ಮತ್ತು ಜವಾಬ್ದಾರಿಗಳೊಂದಿಗೆ ಮಾತ್ರ ಇರಬೇಕು.ಆದರೆ ನಂಗ್ರೆ ಪಾಟೀಲ್ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಗೆ ತಮ್ಮ ನಿಷ್ಠೆಯನ್ನು ಸಾರ್ವಜನಿಕವಾಗಿ ಪ್ರದರ್ಶಿಸಲು ಉತ್ಸುಕರಾಗಿದ್ದಾರೆ ಮತ್ತು ಅವರು ಈ ರೀತಿ ದ್ವಿನಿಷ್ಠೆಯನ್ನು ತೋರಿಸಲು ಒಲವು ತೋರುತ್ತಿದ್ದಾರೆ ಎಂದು ಠಾಕ್ರೆ ಫೇಸ್‌ಬುಕ್‌ನಲ್ಲಿ ಪೋಸ್ಟ್‌ನಲ್ಲಿ ತಿಳಿಸಿದರು.

ಸಕಲ್ ಹಿಂದೂ ಸಮಾಜ ಆಯೋಜಿಸಿದ್ದ ಹಿಂದೂ ಸಮ್ಮೇಳನದಲ್ಲಿ ನಂಗ್ರೆ ಪಾಟೀಲ್ ಅವರ ಭಾಷಣದ ದಿನಾಂಕವಿಲ್ಲದ ವೀಡಿಯೊ ಗುರುವಾರ ವೈರಲ್ ಆಗಿದ್ದು, ವಿವಾದಕ್ಕೆ ಕಾರಣವಾದ ಬಳಿಕ ಮನಸೇ ಮುಖ್ಯಸ್ಥರ ಈ ಹೇಳಿಕೆ ಬಂದಿದೆ. ಈ ವಾರದ ಆರಂಭದಲ್ಲಿ ಈ ಐಪಿಎಸ್ ಅಧಿಕಾರಿಯನ್ನು ನಾಗ್ಪುರ ಪೊಲೀಸ್ ಆಯುಕ್ತರನ್ನಾಗಿ ನೇಮಿಸಲಾಯಿತು.

ಹಿರಿಯ ಅಧಿಕಾರಿಯೊಬ್ಬರು ಈ ಕಾರ್ಯಕ್ರಮದಲ್ಲಿ ಮಾಡಿದ ಭಾಷಣದ ಬಗ್ಗೆ ತನಿಖೆ ನಡೆಸಬೇಕೆಂದು ಮಹಾರಾಷ್ಟ್ರ ಕಾಂಗ್ರೆಸ್ ಕೂಡ ಒತ್ತಾಯಿಸಿದೆ. ಅವರು ಆರ್‌ಎಸ್‌ಎಸ್‌ನ್ನು ಪ್ರಶಂಸಿಸಿದರು. ಅವರ ತಟಸ್ಥತೆ ಮತ್ತು ಸೇವಾ ನಿಯಮಗಳ ಅನುಸರಣೆಯ ಬಗ್ಗೆ ಅದು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎಂದು ಪಕ್ಷ ಹೇಳಿದೆ.

ಈ ಸಮಾವೇಶಗಳನ್ನು ಯಾರು ಆಯೋಜಿಸುತ್ತಿದ್ದಾರೆ ಮತ್ತು ಅವುಗಳ ನಿಜವಾದ ಉದ್ದೇಶಗಳು ಏನೆಂದು ಪರೀಕ್ಷಿಸಲು ಸ್ವಲ್ಪ ಸಮಯ ತೆಗೆದುಕೊಳ್ಳುವ ಯಾರಿಗಾದರೂ ಅವುಗಳ ಹಿಂದೆ ಯಾರಿದ್ದಾರೆಂದು ಅರ್ಥವಾಗುತ್ತದೆ ಎಂದು ಠಾಕ್ರೆ ತಮ್ಮ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ರಾಜಕೀಯೇತರ ಎಂದು ಹೇಳಿಕೊಳ್ಳುವ ಪ್ರತಿಯೊಂದು ರಾಜಕೀಯ ಪಕ್ಷ ಅಥವಾ ಸಂಘಟನೆಯು ಕಾರ್ಯಕ್ರಮಗಳನ್ನು ಆಯೋಜಿಸುವ ಮತ್ತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕನ್ನು ಹೊಂದಿದ್ದರೂ, ಸೇವೆಯಲ್ಲಿರುವ ಸರಕಾರಿ ಅಧಿಕಾರಿ - ವಿಶೇಷವಾಗಿ ಪೊಲೀಸ್ ಅಧಿಕಾರಿ - ಅಂತಹ ಸಭೆಗೆ ಹಾಜರಾಗಬೇಕೇ ಎಂಬುದು ನಿಜವಾದ ಸಮಸ್ಯೆಯಾಗಿದೆ ಎಂದು ಅವರು ತಿಳಿಸಿದ್ದಾರೆ.

'ನೀವು (ನಂಗ್ರೆ ಪಾಟೀಲ್) ಒಬ್ಬ ಪೊಲೀಸ್ ಅಧಿಕಾರಿ ಎಂಬುದನ್ನು ಮತ್ತು ನಿಮ್ಮ ಹುದ್ದೆಯಲ್ಲಿರುವ ಯಾರಿಗಾದರೂ ನಿಷ್ಪಕ್ಷಪಾತವು ಪ್ರಮುಖ ನಿರೀಕ್ಷೆಗಳಲ್ಲಿ ಒಂದಾಗಿದೆ ಎಂಬುದನ್ನು ನೀವು ಮರೆತಿದ್ದೀರಾ?. ನಿಮಗೆ ಆರ್‌ಎಸ್‌ಎಸ್ ಬಗ್ಗೆ ಪ್ರೀತಿ ಅಥವಾ ಮೆಚ್ಚುಗೆ ಇದ್ದರೆ, ಅದನ್ನು ನಿಮ್ಮಲ್ಲಿಯೇ ಇಟ್ಟುಕೊಳ್ಳಿ' ಎಂದು ಅವರು ಹೇಳಿದ್ದಾರೆ.

'ನೀವು ಅದನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸಲು ಬಯಸಿದರೆ, ಸೇವೆಗೆ ರಾಜೀನಾಮೆ ನೀಡಿ ಆರ್‌ಎಸ್‌ಎಸ್ ಅಥವಾ ಬಿಜೆಪಿಗೆ ಸೇರಿ. ಎಲ್ಲಾ ಬಳಿಕ.ಕಳೆದ ಹಲವಾರು ವರ್ಷಗಳಿಂದ, ಅನುಕೂಲಕರ ಅಧಿಕಾರಿಗಳಿಗೆ ಪ್ರಾಯೋಗಿಕವಾಗಿ ಖಾತರಿಪಡಿಸಿದ ಪುನರ್ವಸತಿ ಯೋಜನೆ ಇದೆ. ನಿಮಗೂ ಖಂಡಿತವಾಗಿಯೂ ಅವಕಾಶ ನೀಡಲಾಗುವುದು' ಎಂದು ಅವರು ತಿಳಿಸಿದ್ದಾರೆ.

2012ರಲ್ಲಿ ರಜಾ ಅಕಾಡೆಮಿ ವಿರುದ್ಧ ಮನಸೇ ನಡೆಸಿದ ಪ್ರತಿಭಟನಾ ಮೆರವಣಿಗೆಯಲ್ಲಿ ಪೊಲೀಸ್ ಪಡೆಯು ಬೆಂಬಲಕ್ಕೆ ನಿಂತಿದ್ದಕ್ಕಾಗಿ ಪೊಲೀಸ್ ಕಾನ್‌ಸ್ಟೇಬಲ್‌ನನ್ನು ಅಭಿನಂದಿಸಿದ ಘಟನೆಯನ್ನು ಠಾಕ್ರೆ ಮತ್ತಷ್ಟು ಉಲ್ಲೇಖಿಸಿದ್ದಾರೆ.

ಆಗಿನ ಸರಕಾರ ಅದನ್ನು ನಿಷ್ಪಕ್ಷಪಾತದ ಉಲ್ಲಂಘನೆ ಎಂದು ಪರಿಗಣಿಸಿ ಪೊಲೀಸರನ್ನು ಕಡ್ಡಾಯ ರಜೆಯ ಮೇಲೆ ಕಳುಹಿಸಿದೆ ಎಂದು ಅವರು ಹೇಳಿಕೊಂಡರು.

ನಂಗ್ರೆ ಪಾಟೀಲ್ ಪ್ರಕರಣದಲ್ಲಿ ಪ್ರಸ್ತುತ ಸರಕಾರವು ಅದೇ ಮಾನದಂಡವನ್ನು ಅಳವಡಿಸಿಕೊಳ್ಳುತ್ತದೆಯೇ ಅಥವಾ ಈ ರೀತಿಯ ದ್ವಂದ್ವ ನಿಷ್ಠೆ ಸರಕಾರಕ್ಕೆ ಸ್ವೀಕಾರಾರ್ಹವಾಗಿದೆಯೇ, ಅಪೇಕ್ಷಣೀಯವಾಗಿದೆಯೇ ಎಂದು ಅವರು ಪ್ರಶ್ನಿಸಿದ್ದಾರೆ.

ಸೀಶೆಲ್ಸ್‌ಗೆ ತಲುಪಿದ ಪ್ರಧಾನಿ ಮೋದಿ ಅನಿವಾಸಿ ಭಾರತೀಯರಿಂದ ಭವ್ಯ ಸ್ವಾಗತ

ವಿಕ್ಟೋರಿಯಾ (ಸೀಶೆಲ್ಸ್), ಜೂ.27 - ಮೂರು ದಿನಗಳ ಅಧಿಕೃತ ಭೇಟಿಗಾಗಿ ಶನಿವಾರ ಸೀಶೆಲ್ಸ್‌ಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅನಿವಾಸಿ ಭಾರತೀಯರಿಂದ ಆತ್ಮೀಯ ಸ್ವಾಗತ ದೊರೆಯಿತು.



ಮೋದಿ ಅವರು ಆಗಮಿಸಿದಾಗ, ನೃತ್ಯ ಪ್ರದರ್ಶನಗಳೊಂದಿಗೆ ಅವರನ್ನು ಸ್ವಾಗತಿಸಲಾಯಿತು, ಅವುಗಳಲ್ಲಿ ಒಂದು ಗುಂಪು ಗುಜರಾತ್‌ನ ಕಚ್ ನೃತ್ಯ ಪ್ರದರ್ಶನ ನೀಡಿ ಗಮನ ಸೆಳೆಯಿತು.

'ಅದ್ಭುತ ಸಾಂಸ್ಕೃತಿಕ ಸಂಪರ್ಕ. ಸೀಶೆಲ್ಸ್‌ನ ವಿಮಾನ ನಿಲ್ದಾಣದಲ್ಲಿ ದೊರೆತ ಸ್ವಾಗತದಲ್ಲಿ ಕಚ್‌ನ ನೃತ್ಯವೂ ಸೇರಿತ್ತು. ನಮ್ಮ ಅನಿವಾಸಿ ಜನರು ಭಾರತದ ವಿವಿಧ ಭಾಗಗಳಿಂದ ಸಂಸ್ಕೃತಿಯನ್ನು ಸಂರಕ್ಷಿಸಿ ಆಚರಿಸಿದ ರೀತಿ ಶ್ಲಾಘನೀಯ' ಎಂದು ಪ್ರಧಾನಿ ಎಕ್ಸ್‌ನಲ್ಲಿ ಹೇಳಿದರು.

ಮೋದಿ ಹೊರನಡೆಯುತ್ತಿದ್ದಂತೆ ಅನಿವಾಸಿ ಭಾರತೀಯರು ಸೇರಿದಂತೆ ಹೆಚ್ಚಿನ ಸಂಖ್ಯೆಯ ಜನರು ಸೀಶೆಲ್ಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೊರಗೆ ಜಮಾಯಿಸಿದ್ದರು. ಅವರಲ್ಲಿ ಹಲವರು ಭಾರತೀಯ ಧ್ವಜಗಳನ್ನು ಬೀಸುತ್ತಿರುವುದನ್ನು ಕಾಣಬಹುದು.ಮೋದಿ ಅವರಲ್ಲಿ ಹಲವರೊಂದಿಗೆ ಅಲ್ಪಾವಧಿಗೆ ಸಂವಾದ ನಡೆಸಿದರು.

ಬಳಿಕ ವಲಸೆ ಬಂದ ಜನರು ಹಿಂದೂ ದೇವರಾದ ರಾಮನಿಗೆ ಸಮರ್ಪಿತವಾದ ಭಜನೆ ಮತ್ತು ಶಿವ ತಾಂಡವ ಸ್ತೋತ್ರದ ಲಯಬದ್ಧವಾದ ವಾಚನವನ್ನು ಸಂಯೋಜಿಸುವ ಭರತನಾಟ್ಯ ಪ್ರದರ್ಶನವನ್ನು ಪ್ರಸ್ತುತಪಡಿಸಿದರು.

ಮೋದಿ ಮಧ್ಯಾಹ್ನ ಸೀಶೆಲ್ಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತಲುಪಿದಾಗ ಅಲ್ಲಿ ಅವರಿಗೆ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರು ಭವ್ಯ ಸ್ವಾಗತ ನೀಡಿದರು. ಪ್ರಧಾನಿ ಗೌರವ ರಕ್ಷೆಯನ್ನು ಕೂಡ ಪಡೆದರು.

ಬಳಿಕ ಹರ್ಮಿನಿ ಮೋದಿ ಅವರೊಂದಿಗೆ ಸೀಶೆಲ್ಸ್‌ನ ರಾಷ್ಟ್ರೀಯ ಸಸ್ಯೋದ್ಯಾನಕ್ಕೆ ಹೋದರು, ಅಲ್ಲಿ ಅವರು ದೈತ್ಯ ಆಮೆ ಆವರಣಕ್ಕೆ ಭೇಟಿ ನೀಡಿ,ಮರ ನೆಡುವ ಸಮಾರಂಭದಲ್ಲಿ ಭಾಗವಹಿಸಿದರು.

ಅಧ್ಯಕ್ಷ ಹರ್ಮಿನಿ ಅವರ ಆಹ್ವಾನದ ಮೇರೆಗೆ ಈ ಭೇಟಿ ಕೈಗೊಂಡಿರುವ ಪ್ರಧಾನಿ, ಅಲ್ಲಿನ ರಾಷ್ಟ್ರೀಯ ದಿನಾಚರಣೆಯಲ್ಲಿ ಗೌರವ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಉದ್ಧವ್ ಠಾಕ್ರೆ ಅಹಂಕಾರದ ಕಾರಣ ಶಿವಸೇನೆ (ಯುಬಿಟಿ) ನಾಶವಾಗುತ್ತಿದೆ; ಸಚಿವ ಸಂಜಯ್ ಶಿರ್ಸಾಟ್

ಛತ್ರಪತಿ ಸಂಭಾಜಿನಗರ, ಜೂ.27 - ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ತಮ್ಮ ಪಕ್ಷದ ಬಂಡಾಯ ಸಂಸದರ ಕ್ಷೇತ್ರಗಳಿಗೆ ಭೇಟಿ ನೀಡುವುದನ್ನು ಟೀಕಿಸಿರುವ ಮಹಾರಾಷ್ಟ್ರ ಸಚಿವ ಹಾಗೂ ಶಿವಸೇನೆ ನಾಯಕ ಸಂಜಯ್ ಶಿರ್ಸಾಟ್ ಅವರು,ಇದು ಸುದ್ದಿ ಪ್ರಸಾರವನ್ನು ಪಡೆಯುವ ಗುರಿ ಹೊಂದಿರುವ ಕೇವಲ 'ಟಚ್ ಆ್ಯಂಡ್ ಗೋ' ಪ್ರವಾಸವಾಗಿದೆ ಎಂದು ಬಣ್ಣಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಶಿವಸೇನಾ ನಾಯಕ, ಠಾಕ್ರೆ ಅವರ ಅಹಂಕಾರವು ಅವರ ಪಕ್ಷವನ್ನು ನಾಶಪಡಿಸುತ್ತಿದೆ ಎಂದು ಆರೋಪಿಸಿದರಲ್ಲದೆ,ಬಂಡಾಯ ಸಂಸದರು ಈ ಹಿಂದೆ ಚುನಾವಣೆಯಲ್ಲಿ ಗೆದ್ದಿರುವುದು ನನ್ನ ಕಾರಣದಿಂದಾಗಿ ಎಂಬ ಮಾಜಿ ಮುಖ್ಯಮಂತ್ರಿಯ ಹೇಳಿಕೆಯನ್ನು ನಿರಾಕರಿಸಿದರು. ಈ ವಾರದ ಆರಂಭದಲ್ಲಿ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದ ಪ್ರತಿಸ್ಪರ್ಧಿ ಶಿವಸೇನೆ ಬಣಕ್ಕೆ ಸೇರ್ಪಡೆಯಾದ ತನ್ನ ಪಕ್ಷದ ಆರು ಸಂಸದರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಠಾಕ್ರೆ ಅವರು ಪ್ರವಾಸವನ್ನು ಕೈಗೊಂಡಿದ್ದಾರೆ.

ಉದ್ಧವ್ ಠಾಕ್ರೆ ಅವರ ಈ ಪ್ರವಾಸ ಕೇವಲ 'ಸ್ಪರ್ಶಿಸಿ ಹೋಗಿ' ಎಂಬುದಾಗಿದೆ.ತಮ್ಮನ್ನು ತೊರೆದ ಸಂಸದರ ಕ್ಷೇತ್ರಗಳಿಗೆ ಅವರು ಭೇಟಿ ನೀಡಿದ್ದಾರೆ ಎಂದು ತೋರಿಸಲು ಮಾತ್ರ ಇದನ್ನು ಉದ್ದೇಶಿಸಲಾಗಿದೆ. ಅವರು ತಮ್ಮ ಕ್ಷೇತ್ರಗಳಿಗೆ ಭೇಟಿ ನೀಡಿದ್ದಾರೆ ಎಂಬ ಸುದ್ದಿಯ ಮೂಲಕ ಜನರು ತಿಳಿದುಕೊಳ್ಳಲು ಇದನ್ನು ಮಾಡಲಾಗುತ್ತಿದೆ ಎಂದು ಶಿರ್ಸಾಟ್ ಹೇಳಿದರು.

ಠಾಕ್ರೆ ಮತ್ತು ಅವರ ಪಕ್ಷದ ನಾಯಕರು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರಿದ್ದ ಅದೇ ವಿಮಾನದಲ್ಲಿ ನಾಗ್ಪುರಕ್ಕೆ ಒಟ್ಟಿಗೆ ಪ್ರಯಾಣಿಸಿದ್ದು ಕಾಕತಾಳೀಯ ಎಂದು ಶಿರ್ಸಾಟ್ ತಿಳಿಸಿದರು.

'ಅವರ ನಡುವೆ ಯಾವುದೇ ಸಂವಹನ ನಡೆದಿಲ್ಲ ಎಂದು ನಾನು ಭಾವಿಸುತ್ತೇನೆ. ಆದರೆ ರಾಜಕೀಯದಲ್ಲಿ ಅದು ಪ್ರಾಮುಖ್ಯತೆಯನ್ನು ಹೊಂದಿರುವುದರಿಂದ ಸಂವಹನ ನಡೆಯಬೇಕು' ಎಂದು ಅವರು ಹೇಳಿದರು.

ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಬಂಡಾಯ ಸಂಸದರು ತಮ್ಮ ಕಾರಣದಿಂದಾಗಿಯೇ ಗೆದ್ದಿದ್ದಾರೆ ಎಂಬ ಠಾಕ್ರೆ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿರ್ಸಾಟ್, ಅಂತಹ ದುರಹಂಕಾರವು ವಿರೋಧ ಪಕ್ಷವನ್ನು ನಾಶಪಡಿಸುತ್ತಿದೆ ಎಂದು ಪ್ರತಿವಾದಿಸಿದರು.

ಠಾಕ್ರೆ ಅವರ ಅಹಂಕಾರವು ಅವರ ಪಕ್ಷವನ್ನು ಮುಗಿಸುತ್ತಿದೆ ಎಂದು ಅವರು ಆರೋಪಿಸಿದರು.

'ನಿಮ್ಮ ಮಾತಿನ ಮೇರೆಗೆ ಎಲ್ಲರೂ ಚುನಾವಣೆ ಗೆದ್ದಿದ್ದರೆ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅವರ (ಸೇನಾ ಯುಬಿಟಿ) ಶಾಸಕರ ಸಂಖ್ಯೆ 63 ರಿಂದ 20 ಕ್ಕೆ ಏಕೆ ಇಳಿಯಿತು?. ಅವರು ಮುಂಬಯಿ ಪಾಲಿಕೆ ಚುನಾವಣೆಯಲ್ಲೂ ಸೋತರು. ಅವರ ನಾಯಕತ್ವದಲ್ಲಿ ಚುನಾವಣೆ ಗೆದ್ದ ಸಂಸದರು ಮತ್ತು ಶಾಸಕರು ಪಕ್ಷವನ್ನು ತೊರೆದರು. ಶಿವಸೇನೆ (ಯುಬಿಟಿ) ಮತ್ತು ಅದರ ನಾಯಕತ್ವವು ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು' ಎಂದು ಅವರು ಹೇಳಿದರು.

ಸಿಯಾ ಹೇಳಿದ್ದರೆ ಪ್ರಿಯಕರನ ಜತೆಗೆ ಮದುವೆ ಮಾಡಿಸುತ್ತಿದ್ದೆವು ; ಪೊಲೀಸರಿಗೆ ಸಹೋದರನ ಹೇಳಿಕೆ

ಮಗಳು ಕುಡಿಯುತ್ತಿರಲಿಲ್ಲ,ಆರೋಪಿಗೆ ಮರಣದಂಡನೆಯಾಗಲಿ-ತಾಯಿಯ ಮಾತು

ಪುಣೆ,ಜೂ.27 - ಕೋಟ್ಯಾಧಿಪತಿ ಕುಟುಂಬದ ಯುವ ಉದ್ಯಮಿ ಕೇತನ್ ಅಗರ್ವಾಲ್ ಕೊಲೆ ಪ್ರಕರಣದಲ್ಲಿ ದಿನಕ್ಕೊಂದು ಮಾಹಿತಿಗಳು ಬೆಳಕಿಗೆ ಬರುತ್ತಿದ್ದು,ಕೇತನ್ ವಿಗ್ ಧರಿಸುತ್ತಿದ್ದ, ಆತನ ತಲೆಯಲ್ಲಿ ಕೂದಲು ಇರಲಿಲ್ಲ, ಆದ್ದರಿಂದ ಆತನನ್ನು ಮದುವೆಯಾಗಲು ಬಯಸದೆ ಆತನನ್ನು ಕೊಲೆ ಮಾಡಿದ್ದಾಗಿ ಸಿಯಾ ಪೊಲೀಸರ ಬಳಿ ಹೇಳಿಕೊಂಡಿದ್ದಾಳೆ. ಈಗ ಅದೇ ಕೊಲೆ ಪ್ರಕರಣದಲ್ಲಿ ಸಿಯಾಳ ಕುಟುಂಬವನ್ನು ವಿಚಾರಣೆ ನಡೆಸಲಾಗುತ್ತಿದ್ದು,ಆಕೆಯ ಸಹೋದರ ಕೂಡ ಆಘಾತಕಾರಿ ಮಾಹಿತಿಯನ್ನು ನೀಡಿದ್ದಾರೆ. ಸಿಯಾಳ ಸಹೋದರ ಸಾಹಿಲ್ ಗೋಯಲ್ ನೀಡಿದ ಮಾಹಿತಿಯ ಬಳಿಕ ಸಿಯಾಳ ಬಗ್ಗೆ ಪೊಲೀಸರಿಗೆ ಅಗತ್ಯ ವಿಷಯ ಸಿಕ್ಕಿದಂತಾಗಿದೆ.



ಇಲ್ಲಿಯವರೆಗೆ ತನಿಖೆಯ ಸಮಯದಲ್ಲಿ ಬಹಿರಂಗಗೊಂಡ ಮಾಹಿತಿಯ ಆಧಾರದ ಮೇಲೆ, ಪೊಲೀಸರು ವಿಷಯದ ಮೂಲವನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಇದಕ್ಕಾಗಿ ಡಿಜಿಟಲ್ ಪುರಾವೆಗಳನ್ನು ಕೂಡ ತನಿಖೆ ಮಾಡಲಾಗುತ್ತಿದೆ. ಪೊಲೀಸರು ಸಿಯಾಳ ಪೋಷಕರು ಮತ್ತು ಸಹೋದರನನ್ನು ವಿಚಾರಣೆಗಾಗಿ ಲೋನಾವಳ ಪೊಲೀಸ್ ಠಾಣೆಗೆ ಕರೆಸಿದರು. ಗೋಯಲ್ ಕುಟುಂಬವನ್ನು ಸತತ ಎರಡನೇ ದಿನವೂ ವಿಚಾರಣೆ ನಡೆಸಲಾಯಿತು. ಶುಕ್ರವಾರ ಸಾಹಿಲ್ ಗೋಯಲ್‌ನನ್ನು 10 ಗಂಟೆಗಳ ಕಾಲ ವಿಚಾರಣೆ ನಡೆಸಲಾಯಿತು. ಅದೇ ವಿಚಾರಣೆಯ ಸಮಯದಲ್ಲಿ, ಸಾಹಿಲ್,' ನನ್ನ ಸಹೋದರಿ ಹೇಳಿದ್ದರೆ, ಕೇತನ್ ಜೊತೆ ಆಕೆಯ ಮದುವೆಯನ್ನು ನಾವು ನಿಶ್ಚಯಿಸುತ್ತಿರಲಿಲ್ಲ' ಎಂದು ಹೇಳಿದರು. ಮೂಲಗಳ ಪ್ರಕಾರ, ಸಿಯಾ ತನ್ನ ಕುಟುಂಬಕ್ಕೆ ಕೇತನ್ ನನ್ನು ಮದುವೆಯಾಗಲು ಇಷ್ಟವಿಲ್ಲ ಎಂದು ಹೇಳಿರಲಿಲ್ಲ. ಸಿಯಾ ತನ್ನ ಇಚ್ಛೆಯನ್ನು ನಮಗೆ ಹೇಳಿದ್ದರೆ, ನಾವು ಪ್ರಿಯಕರ ಚೇತನ್ ಚೌಧರಿ ಜೊತೆ ಆಕೆಯ ಮದುವೆಯನ್ನು ನಿಶ್ಚಯಿಸುತ್ತಿದ್ದೆವು ಎಂದು ಸಾಹಿಲ್ ಪೊಲೀಸರ ಬಳಿ ತಿಳಿಸಿದರು.

'ಚೇತನ್ ನಮ್ಮ ಸಮುದಾಯದವರು. ಆತನ ಕುಟುಂಬವೂ ವ್ಯಾಪಾರ ಮಾಡುತ್ತದೆ. ಆರ್ಥಿಕ ದೃಷ್ಟಿಕೋನದಿಂದ, ಅವರು ನಮಗೆ ಸಮಾನರು. ಅಂತಹ ಪರಿಸ್ಥಿತಿಯಲ್ಲಿ, ನಾವು ಸಿಯಾ ಮತ್ತು ಚೇತನ್ ಸಂಬಂಧವನ್ನು ಒಪ್ಪಿಕೊಳ್ಳುತ್ತಿದ್ದೆವು' ಎಂದು ಸಾಹಿಲ್ ಪೊಲೀಸರಿಗೆ ವಿವರಿಸಿದರು. ಸಿಯಾ ಕೇತನ್‌ನನ್ನು ಇಷ್ಟಪಡುವುದಿಲ್ಲ ಎಂದು ನಾವು ಎಂದಿಗೂ ಭಾವಿಸಿರಲಿಲ್ಲ.ಇದರ ಜೊತೆಗೆ, ಸಿಯಾ ಈ ಮದುವೆಯ ಬಗ್ಗೆ ಸಂತೋಷವಾಗಿಲ್ಲ ಎಂದು ನನಗೆ ಹೇಳಿದ್ದರೆ, ನಾನು ಈ ಮದುವೆಯನ್ನು ತಪ್ಪಿಸುತ್ತಿದ್ದೆ ಎಂದು ಸಹೋದರ ಹೇಳಿದರು.

ಇದೇ ವೇಳೆ ಸಿಯಾಳ ತಾಯಿ ಈ ಪ್ರಕರಣದಲ್ಲಿ ತಮ್ಮ ಮಗಳ ಮೇಲಿನ ಆರೋಪಗಳನ್ನು ಪ್ರಶ್ನಿಸಿದ್ದು, 'ನನ್ನ ಮಗಳು ಹೇಗೆ ಕೆಟ್ಟದಾಗಿ ಕಾಣಲು ಸಾಧ್ಯ?' ಎಂದು ಕೇಳಿದರಲ್ಲದೆ, ಆಕೆಯ ಮದ್ಯ ಸೇವನೆ ಅಭ್ಯಾಸ ಮತ್ತು ಪಾರ್ಟಿಗಳ ಕುರಿತಾದ ಹೇಳಿಕೆಗಳನ್ನು ನಿರಾಕರಿಸಿದರು.

ಸಿಯಾ ಮದ್ಯ ಸೇವಿಸುತ್ತಿದ್ದರು.ಆಕೆಗೆ ಆಗಾಗ್ಗೆ ಮದ್ಯಪಾನ ಮಾಡುವುದನ್ನು ನಿಲ್ಲಿಸುವಂತೆ ಕೇಳಲಾಗುತ್ತಿತ್ತು. ಕೇತನ್‌ನ ತಾಯಿ ಕೂಡ ಆಕೆಗೆ ಪಾರ್ಟಿಗಳಿಗೆ ಹೋಗಬೇಡಿ ಎಂದು ಹೇಳಿದ್ದರೆಂಬ ಮಾತುಗಳನ್ನು ಆಕೆ ನಿರಾಕರಿಸಿದರಲ್ಲದೆ, ನನ್ನ ಮಗಳು ಕುಡಿಯುತ್ತಿರಲಿಲ್ಲ, ಆಕೆ ಇಷ್ಟು ದಿನ ಒಳ್ಳೆಯವಳಾಗಿದ್ದಳು. ನನ್ನ ಮಗಳು ಈಗ ಹೇಗೆ ಕೆಟ್ಟದಾಗಿ ಕಾಣಲು ಆರಂಭಿಸಿದಳು?ಎಂದು ಪೂಜಾ ಗೋಯಲ್ ಕೇಳಿದರು.

'ನನ್ನ ಮಗಳು ಕುಡಿಯುತ್ತಿರಲಿಲ್ಲ. ಕೇತನ್‌ನ ಕುಟುಂಬವು ಆಕೆಯ ಕುಡಿತ ಮತ್ತು ಪಾರ್ಟಿಗಳ ಬಗ್ಗೆ ನಮಗೆ ಎಂದಿಗೂ ಹೇಳಲಿಲ್ಲ. ಆಕೆ ಎಂದಿಗೂ ಕುಡಿದಿಲ್ಲ. ಆಕೆ ಕುಡಿಯುತ್ತಿದ್ದಳು ಎಂದು ನಮಗೆ ತಿಳಿದಿರುವುದು ಇದೇ ಮೊದಲು, ಆದರೆ ನಿನ್ನೆಯವರೆಗೂ ಸಿಯಾ ಒಳ್ಳೆಯವಳು ಎಂದು ಹೇಳುತ್ತಿದ್ದರು. ಆದರೆ ಇಂದು ಆಕೆ ಕೆಟ್ಟವಳಾಗಿದ್ದಾಳೆ' ಎಂದು ಪೂಜಾ ಗೋಯಲ್ ಹೇಳಿದರು.

ಸಿಯಾ ಮತ್ತು ಕೇತನ್ ಅವರ ಮದುವೆಯಿಂದ ನಮಗೆ ಹೆಚ್ಚಿನ ನಿರೀಕ್ಷೆಗಳಿದ್ದವು. ಅಗರ್ವಾಲ್ ಕುಟುಂಬವು ಸಿಯಾ ಅವರನ್ನು ತುಂಬಾ ಪ್ರೀತಿಸುತ್ತಿತ್ತು. ಅವರೇ ಸಿಯಾಳ ಹುಟ್ಟುಹಬ್ಬವನ್ನು ಆಯೋಜಿಸಿದ್ದರು. ಸಿಯಾ ಮತ್ತು ಕೇತನ್ ಹೊಂದಿಕೆಯಾಗದಿದ್ದರೆ, ಅವರು ನಮಗೆ ಹೇಳಬೇಕಿತ್ತು. ಹುಡುಗಿ ಮದುವೆಯನ್ನು ಎಂದಿಗೂ ವಿರೋಧಿಸಲಿಲ್ಲ, ನಾವು ಪ್ರತಿದಿನ ಕೇತನ್ ಜೊತೆ ಮಾತನಾಡುತ್ತಿದ್ದೆವು. ಕೇತನ್ ಪ್ರತಿದಿನ ಬೆಳಿಗ್ಗೆ ಮತ್ತು ರಾತ್ರಿ ವೀಡಿಯೊ ಕರೆಗಳನ್ನು ಮಾಡುತ್ತಿದ್ದ. ಆತ ತುಂಬಾ ಒಳ್ಳೆಯ ಹುಡುಗ. ಅಗರ್ವಾಲ್ ಕುಟುಂಬವು ತಮ್ಮ ಮಗನನ್ನು ಕಳೆದುಕೊಂಡಿದ್ದು ಮಾತ್ರವಲ್ಲದೆ, ನಾವು ನಮ್ಮ ಮಗನನ್ನೂ ಕಳೆದುಕೊಂಡಿದ್ದೇವೆ ಎಂದು ಅವರು ತಿಳಿಸಿದರು.

ಉದಯಪುರದಲ್ಲಿ ಮದುವೆಗಾಗಿ ಅನಂತ್ ರೆಸಾರ್ಟ್‌ನ್ನು ಬುಕ್ ಮಾಡಲಾಗಿತ್ತು. ಮದುವೆಗೆ 14-15 ಕೋಟಿ ಖರ್ಚು ಮಾಡುವ ಪ್ರಶ್ನೆಯೇ ಇರಲಿಲ್ಲ. ರೆಸಾರ್ಟ್‌ಗೆ 3 ಕೋಟಿ ಖರ್ಚು ಮಾಡಲಾಗುತ್ತಿತ್ತು. ಮದುವೆಗೆ ಐದರಿಂದ ಐದೂವರೆ ಕೋಟಿ ರೂ ಖರ್ಚು ಮಾಡಬೇಕಿತ್ತು. ಜೆಟ್ ಬುಕ್ ಮಾಡಿರಲಿಲ್ಲ. ಜುಲೈ ಅಂತ್ಯದ ವೇಳೆಗೆ ಬುಕಿಂಗ್ ಮಾಡಬೇಕಿತ್ತು. ಕೇತನ್ ನನಗೆ ಸಿಯಾಗಿಂತ ಹತ್ತಿರವಾಗಿದ್ದ. ನಾವು ಆತನನ್ನು ಪ್ರೀತಿಸುತ್ತಿದ್ದೆವು. ನಾವು ಹತ್ತಿರವಾಗಿದ್ದೆವು. ಆದರೆ ಇದು ಆಗಬಾರದಿತ್ತು. ಇದನ್ನು ಮಾಡಿದ ಯಾರನ್ನಾದರೂ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಆರೋಪಿಗೆ ಮರಣದಂಡನೆ ವಿಧಿಸಬೇಕು. ಅಥವಾ ಆರೋಪಿಯನ್ನು ಲೋಹಗಡ್‌ನಿಂದ ಗಲ್ಲಿಗೇರಿಸಬೇಕು ಎಂದು ಅವರು ಒತ್ತಾಯಿಸಿದರು.

ವಿಮಾನ ಪ್ರಯಾಣಕ್ಕಿಂತ ಪ್ರಾಮಾಣಿಕತೆ ಮುಖ್ಯ: ಉದ್ಧವ್ ಠಾಕ್ರೆಗೆ ಏಕನಾಥ್ ಶಿಂದೆ ಟಾಂಗ್

ರಾಯಗಢ,ಜೂ.27 - ಜೀವನದಲ್ಲಿ ವಿಮಾನ ಪ್ರಯಾಣಕ್ಕಿಂತ ಪ್ರಾಮಾಣಿಕತೆ ಅತ್ಯಂತ ಮುಖ್ಯವಾಗಿದ್ದು, ಕಪಟ ಸ್ನೇಹಿತ ಎಷ್ಟು ಅಪಾಯಕಾರಿ ಎಂಬುದು 2019ರಲ್ಲೇ ದೇವೇಂದ್ರ ಫಡ್ನವೀಸ್ ಅವರಿಗೆ ಚೆನ್ನಾಗಿ ಮನವರಿಕೆಯಾಗಿದೆ ಎಂದು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.



ರಾಯಗಢದಲ್ಲಿ ಹಮ್ಮಿಕೊಳ್ಳಲಾಗಿದ್ದ ಛತ್ರಪತಿ ಶಿವಾಜಿ ಮಹಾರಾಜರ 353ನೇ ಶಿವರಾಜಾಭಿಷೇಕ ಮಹೋತ್ಸವದಲ್ಲಿ ಪಾಲ್ಗೊಂಡ ಬಳಿಕ, ಉದ್ಧವ್ ಠಾಕ್ರೆ ಹಾಗೂ ದೇವೇಂದ್ರ ಫಡ್ನವೀಸ್ ಅವರ ಇತ್ತೀಚಿನ ಜಂಟಿ ವಿಮಾನ ಪ್ರಯಾಣದ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು ಈ ಉತ್ತರ ನೀಡಿದರು. 2019ರ ಚುನಾವಣೆಯಲ್ಲಿ ಜನತೆ ಶಿವಸೇನೆ ಮತ್ತು ಬಿಜೆಪಿಗೆ ಒಂದೇ ವಿಮಾನದಲ್ಲಿ ಪ್ರಯಾಣಿಸಲು ಜನಾದೇಶದ ಟಿಕೆಟ್ ನೀಡಿದ್ದರು. ಆದರೆ, ಉದ್ಧವ್ ಠಾಕ್ರೆ ತಮ್ಮ ಸ್ವಾರ್ಥಕ್ಕಾಗಿ ಕೊನೆಯ ಕ್ಷಣದಲ್ಲಿ ಕಾಂಗ್ರೆಸ್ ವಿಮಾನವೇರಿ ಜನಾದೇಶಕ್ಕೆ ದ್ರೋಹ ಬಗೆದರು. ಈಗ ಅವರು ಹತಾಶರಾಗಿ ಇಂತಹ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆದರೆ ಫಡ್ನವೀಸ್ ಅವರು ಅತ್ಯಂತ ಚಾಣಾಕ್ಷರಾಗಿದ್ದು, ಇಂತಹ ತಂತ್ರಗಳಿಗೆ ಮರುಳಾಗುವುದಿಲ್ಲ ಎಂದು ಶಿಂದೆ ಲೇವಡಿ ಮಾಡಿದರು.

ಉದ್ಧವ್ ಠಾಕ್ರೆ ಅವರ ಸಭೆಗಳ ಕುರಿತು ಮಾತನಾಡಿದ ಅವರು, ಎಲ್ಲವೂ ಮುಗಿದ ಮೇಲೆ ಸಭೆ ನಡೆಸುತ್ತಿರುವ ಅವರ ಸ್ಥಿತಿ 'ಮದುವೆ ಮುಗಿದ ಮೇಲೆ ವರನ ಕುದುರೆ ಬಂದಂತೆ' ಆಗಿದೆ ಎಂದರು. ಇದೇ ವೇಳೆ ರಾಯಗಢ ಜಿಲ್ಲಾ ಉಸ್ತುವಾರಿ ಸಚಿವ ಹುದ್ದೆಯ ಕುರಿತು ಶೀಘ್ರದಲ್ಲೇ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು. ಇತಿಹಾಸ ಪ್ರಸಿದ್ಧ ರಾಯಗಢ ಕೋಟೆಯಲ್ಲಿ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ಅಲ್ಲಿನ ಜಲಾನಯನ ಮತ್ತು ನೀರು ಸರಬರಾಜು ಯೋಜನೆಗೆ ಶೀಘ್ರದಲ್ಲೇ ಮಂಜೂರಾತಿ ನೀಡಲಾಗುವುದು ಎಂದು ಶಿಂದೆ ಪ್ರಕಟಿಸಿದರು. ಈ ಬಾರಿ ಮಳೆ ಕೊಂಚ ವಿಳಂಬವಾಗಿದ್ದರೂ, ಯಾವುದೇ ಕಠಿಣ ಪರಿಸ್ಥಿತಿ ಎದುರಾದರೂ ಮಹಾಯುತಿ ಸರಕಾರವು ರೈತರ ಬೆನ್ನಿಗೆ ದೃಢವಾಗಿ ನಿಲ್ಲಲಿದೆ ಎಂದು ಅವರು ಭರವಸೆ ನೀಡಿದರು.

ರಾಯಗಢ ಕೋಟೆಯು ಕೇವಲ ಕಲ್ಲು-ಮಣ್ಣುಗಳ ಕೋಟೆಯಲ್ಲ, ಅದು ನಮ್ಮ ಸ್ವಾಭಿಮಾನದ ಸಂಕೇತವಾಗಿದೆ ಎಂದು ಬಣ್ಣಿಸಿದ ಶಿಂದೆ, ಶಿವಾಜಿ ಮಹಾರಾಜರ ರಾಜಮುದ್ರೆಯನ್ನು ಭಾರತೀಯ ನೌಕಾಪಡೆಯ ನೂತನ ಲೋಗೋದಲ್ಲಿ ಅಳವಡಿಸಿರುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಶಿವಾಜಿ ಮಹಾರಾಜರು ಮಹಿಳೆಯರ ಗೌರವ, ಧಾರ್ಮಿಕ ಸಾಮರಸ್ಯ ಮತ್ತು ರೈತರ ಕಲ್ಯಾಣಕ್ಕಾಗಿ ಶ್ರಮಿಸಿದ ಆದರ್ಶ ರಾಜರಾಗಿದ್ದಾರೆ. ಅವರ ಇತಿಹಾಸವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ರಾಯಗಢ ಸೇರಿದಂತೆ ರಾಜ್ಯದ ಒಟ್ಟು 12 ಕೋಟೆಗಳನ್ನು ಯುನೆಸ್ಕೋ ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸಲಾಗಿದೆ ಎಂದು ಅವರು ಹೆಮ್ಮೆಯಿಂದ ತಿಳಿಸಿದರು. ಈ ವೈಭವದ ಶಿವಭಕ್ತರ ಸಮಾವೇಶದಲ್ಲಿ ಸಚಿವ ಭರತ್ ಶೇಟ್ ಗೊಗಾವಲೆ, ಗೃಹ ರಾಜ್ಯ ಸಚಿವ ಯೋಗೇಶ್ ಕದಂ, ಜಿಲ್ಲಾಧಿಕಾರಿ ಕಿಶನ್ ಜಾವಳೆ, ಪೊಲೀಸ್ ವರಿಷ್ಠಾಧಿಕಾರಿ ಆಂಚಲ್ ದಲಾಲ್ ಸೇರಿದಂತೆ ಸಾವಿರಾರು ಶಿವಭಕ್ತರು ಪಾಲ್ಗೊಂಡಿದ್ದರು.

ಬಹುಪತ್ನಿತ್ವದ ಕುರಿತ ತನ್ನ ಶಾಸಕಿ ಸನಾ ಮಲಿಕ್ ಹೇಳಿಕೆಯಿಂದ ದೂರವುಳಿದ ಎನ್‌ಸಿಪಿ

ಮುಂಬಯಿ, ಜೂ. 27 - ತಲಾಖ್ ಮತ್ತು ಬಹುಪತ್ನಿತ್ವದ ಕುರಿತು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಪಕ್ಷದ ಶಾಸಕಿ ಸನಾ ಮಲಿಕ್ ಅವರ ಹೇಳಿಕೆಗಳಿಂದ ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಶನಿವಾರ ದೂರವುಳಿದಿದ್ದು, ಅದು ಪಕ್ಷದ ಅಧಿಕೃತ ನಿಲುವನ್ನು ಪ್ರತಿಬಿಂಬಿಸುತ್ತಿಲ್ಲ, ಅವರ ವೈಯಕ್ತಿಕ ಅಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತವೆ ಎಂದು ಹೇಳಿದೆ.

ಮಹಾರಾಷ್ಟ್ರ ಎನ್‌ಸಿಪಿ ಅಧ್ಯಕ್ಷ ಸುನಿಲ್ ತಟ್ಕರೆ, ಎಕ್ಸ್‌ನ ಪೋಸ್ಟ್‌ನಲ್ಲಿ ಸ್ಪಷ್ಟಪಡಿಸಿದ್ದು, ಜೂನ್ 23 ರಂದು ಮಲಿಕ್ ಅವರ ಕಾಮೆಂಟ್‌ಗಳೊಂದಿಗೆ ಪಕ್ಷವು ಭಿನ್ನಾಭಿಪ್ರಾಯ ಹೊಂದಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಎನ್‌ಸಿಪಿ ಜಾತಿ, ಧರ್ಮ ಅಥವಾ ನಂಬಿಕೆಯನ್ನು ಲೆಕ್ಕಿಸದೆ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ನಿರಂತರವಾಗಿ ನಿಲ್ಲುತ್ತದೆ ಎಂದು ಪ್ರತಿಪಾದಿಸಿದ್ದಾರೆ.

ಈ ವಾರದ ಆರಂಭದಲ್ಲಿ ರಾಜ್ಯ ವಿಧಾನಸಭೆಯಲ್ಲಿ ಬಹುಪತ್ನಿತ್ವದ ವಿಷಯವು ಮುಸ್ಲಿಂ ಪುರುಷರಿಗೆ ಮಾತ್ರ ಸೀಮಿತವಾಗಿಲ್ಲ ಎಂದು ಮಲಿಕ್ ಹೇಳಿಕೆ ನೀಡಿದ್ದಕ್ಕಾಗಿ ಟೀಕೆಗೆ ಗುರಿಯಾಗಿದ್ದರು. ತ್ರಿವಳಿ ತಲಾಖ್ ಪದ್ಧತಿಯಿಂದಾಗಿ ಮುಸ್ಲಿಂ ಮಹಿಳೆಯರು ಎದುರಿಸುತ್ತಿರುವ ದೌರ್ಜನ್ಯಗಳ ಕುರಿತು ವಿಧಾನಸಭೆಯಲ್ಲಿ ನಡೆದ ಚರ್ಚೆಯ ಸಂದರ್ಭದಲ್ಲಿ, ಬಿಜೆಪಿ ಶಾಸಕಿ ದೇವಯಾನಿ ಫರಾಂಡೆ ಅವರು ಪಾಕಿಸ್ತಾನದಲ್ಲಿ ಕೇವಲ ಒಂದು ಪ್ರತಿಶತದಷ್ಟು ಪುರುಷರು ಬಹುಪತ್ನಿತ್ವವನ್ನು ಆಚರಿಸುತ್ತಾರೆ ಮತ್ತು ಪುರುಷರಿಗೆ ಎರಡನೇ ಮದುವೆಗೆ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕು ಎಂದು ಹೇಳಿದ್ದರು.

ಇದಕ್ಕೆ ಎನ್‌ಸಿಪಿ ಶಾಸಕಿ, ''ಕುರಾನ್‌ನಲ್ಲಿ ಏನನ್ನಾದರೂ ಉಲ್ಲೇಖಿಸಿದ್ದರೆ ಮತ್ತು ಅದನ್ನು ಪಾಕಿಸ್ತಾನದಲ್ಲಿ ಜಾರಿಗೆ ತಂದಿದ್ದರೆ, ಅದನ್ನು ಇಲ್ಲಿಯೂ ತರಬೇಕೆಂದು ನಾವು ಒತ್ತಾಯಿಸುತ್ತೇವೆ'' ಎಂದು ಹೇಳಿದ್ದರು. ಅವರು ಗುರುವಾರ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡರು, ಅವರು ಬಹುಪತ್ನಿತ್ವವನ್ನು ಬೆಂಬಲಿಸುವುದಿಲ್ಲ, ಆದರೆ ಬಹುಪತ್ನಿತ್ವದ ಮಾರ್ಗಗಳ ಬಗ್ಗೆ ಸದನಕ್ಕೆ ತಿಳಿಸುತ್ತಿದ್ದೇನೆ ಎಂದು ಹೇಳಿದ್ದರು.

ಅವರ ಹೇಳಿಕೆಗಳು ಬಲವಾದ ಪ್ರತಿಕ್ರಿಯೆಗಳನ್ನು ಹುಟ್ಟುಹಾಕಿದವು, ಅನೇಕ ನಾಯಕರು ಮುಸ್ಲಿಂ ವೈಯಕ್ತಿಕ ಕಾನೂನು ಮತ್ತು ಮಹಿಳಾ ಹಕ್ಕುಗಳ ಕುರಿತು ಅವರ ನಿಲುವನ್ನು ವಿರೋಧಿಸಿದರು.

''ತಲಾಖ್ ವಿಷಯದ ಕುರಿತು ಶಾಸಕಿ ಸನಾ ಮಲಿಕ್ ನೀಡಿದ ಹೇಳಿಕೆ ಅವರ ವೈಯಕ್ತಿಕ ಅಭಿಪ್ರಾಯ. ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಆ ಅಭಿಪ್ರಾಯಗಳನ್ನು ಅನುಮೋದಿಸುವುದಿಲ್ಲ'' ಎಂದು ತಟ್ಕರೆ ಹೇಳಿದರು.

ಜಾತಿ, ಧರ್ಮ ಅಥವಾ ನಂಬಿಕೆಯನ್ನು ಲೆಕ್ಕಿಸದೆ ಮಹಿಳಾ ಹಕ್ಕುಗಳ ರಕ್ಷಣೆಗಾಗಿ ಪಕ್ಷವು ನಿರಂತರವಾಗಿ ನಿಂತಿದೆ ಎಂದು ಅವರು ಪ್ರತಿಪಾದಿಸಿದರು.

''ಯಾವುದೇ ಮಹಿಳೆ ಏಕಪಕ್ಷೀಯ ಮತ್ತು ಅನ್ಯಾಯದ ವಿವಾಹ ವಿಸರ್ಜನೆಯ ನಿರಂತರ ಬೆದರಿಕೆಯನ್ನು ಎದುರಿಸಬಾರದು ಎಂಬುದು ಪಕ್ಷದ ನಿಲುವು'' ಎಂದು ಅವರು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಬಿ ಆರ್ ಅಂಬೇಡ್ಕರ್ ರಚಿಸಿದ ಸಂವಿಧಾನಕ್ಕೆ ಎನ್‌ಸಿಪಿ ಬದ್ಧವಾಗಿದೆ ಮತ್ತು 'ಶಿವ-ಶಾಹು-ಫುಲೆ-ಅಂಬೇಡ್ಕರ್' ಅವರ ಸಿದ್ಧಾಂತವನ್ನು ಅನುಸರಿಸುತ್ತದೆ ಎಂದು ತಟ್ಕರೆ ಹೇಳಿದರು. ತ್ರಿವಳಿ ತಲಾಖ್ ಕುರಿತು ಸುಪ್ರೀಂ ಕೋರ್ಟ್‌ನ ತೀರ್ಪು ಮತ್ತು ಈ ವಿಷಯದ ಕುರಿತು ಸಂಸತ್ತು ಜಾರಿಗೆ ತಂದ ಕಾನೂನು ಅತ್ಯುನ್ನತವಾಗಿದೆ ಮತ್ತು ಎಲ್ಲರೂ ಗೌರವಿಸಬೇಕು ಎಂದು ಅವರು ಹೇಳಿದರು.

ಕರ್ನಾಟಕ ಮಲ್ಲ ಪುಟ -II 28-06-2026
KARNATAKA MALLA MUMBAI

ವಾರದ ಕಥೆ

ಪ್ರಮಾದ

ಜಯಂತಿ ಸತೀಶ್ ಐಲ್
ವಿಕ್ರೋಲಿ.

ಊರಿನಲ್ಲಿ ಎಲ್ಲಾ ಕಡೆ ದೀಪಾವಳಿ ಹಬ್ಬದ ಸಂಭ್ರಮ ಎದ್ದು ಕಾಣುತಿತ್ತು. ಆದರೆ ಶಾರದಕ್ಕನಿಗೆ ತನ್ನ ಮನೆ ಬಿಕೋ ಎನಿಸುತ್ತಿದೆ ಎಂದೆನಿಸಿತು. ತಮ್ಮ ವರಾಂಡದಲ್ಲಿ ಕೂತು ಆಚೀಚೆ ಕಣ್ಣು ಹಾಯಿಸಿದರೆ ನೆರೆಮನೆಯ ಮಕ್ಕಳೆಲ್ಲಾ ಸಡಗರದಿಂದ ಓಡಾಡುವುದು ಕಾಣಿಸಿತು. ಪಟಾಕಿ ಸಿಡಿಸುವುದು, ಸಿಹಿ ಹಂಚುವುದು,ಹೂ ಕೊಡುವುದು.... ಇತ್ಯಾದಿ, ಅಂತೂ ಎಲ್ಲಾ ಕಡೆ ಸಡಗರದ ಗದ್ದಲವೇ ಗದ್ದಲ. ಆದರೆ ತನ್ನ ಮನೆ ನಿದ್ರಿಸಿದಂತಿದೆ. ಅದಕ್ಕೆ ನಾನೇ ಕಾರಣ, ಎಲ್ಲಾ ನನ್ನಿಂದಲೇ ಹೀಗಾಯಿತು ಎಂದು ನಿಟ್ಟುಸಿರು ಬಿಟ್ಟರು ಶಾರದಕ್ಕ...........

ಆಗ ಆಚೆ ಮನೆಯ ಪ್ರಮೀಳಕ್ಕ ಸಣ್ಣ ಡಬ್ಬದಲ್ಲಿ ಸ್ವಲ್ಪ ಸಿಹಿ ತಂದು 'ಶಾರದಕ್ಕ ಸಿಹಿ ತಗೊಳ್ಳಿ, ದೀಪಾವಳಿ ಹಬ್ಬವಲ್ಲವೇ ? ನಿಮ್ಮ ಮಗ ಬರಲಿಲ್ಲವೆಂದು ಕಾಣುತ್ತದೆ ಎಂದರು'.

'ಇಲ್ಲಕ್ಕ ಬರಲಿಲ್ಲ, ಮಗನನ್ನು ಅದೇನೋ ಕರಾಟೆ ಕ್ಲಾಸಿಗೆ ಹಾಕಿದ್ದಾರಂತೆ. ಹಾಗೆ ಬರಲಿಕ್ಕೆ ಆಗುವದಿಲ್ಲ ಎಂದು ತಿಳಿಸಿದ್ದಾನೆ' ಎಂದರು. ಅದೇನೇ ಕಾರಣ ಹೇಳಿದರೂ ಅದು ನಿಜವಲ್ಲ ಎಂದು ಪ್ರಮೀಳಕ್ಕನಿಗೂ ಗೊತ್ತು. ಶಾರದಕ್ಕನ ಅಲ್ಪ ಸ್ವಲ್ಪ ಕತೆ ಅವರಿಗೂ ಗೊತ್ತಿತ್ತು. 'ಸರಿ ಅಕ್ಕ ಬರ್ತೇನೆ, ಮನೆಯಲ್ಲಿ ಮಗಳು,ಅಳಿಯ ಇದ್ದಾರೆ. ನನ್ನ ಮಗ ಹಾಗೂ ಸೊಸೆ ಅವಳ ಮನೆಗೆ ಹೊರಟಿದ್ದಾರೆ' ಎನ್ನುತ್ತಾ ಪ್ರಮೀಳಕ್ಕ ಅವಸರದಿಂದ ಹೊರಟು ಹೋದರು.

ಶಾರದಕ್ಕನಿಗೆ ತನ್ನ ಹರೆಯದ ಹುಚ್ಚಿನಿಂದ ತನ್ನ ಸಂಸಾರ ತಾನೇ ನಾಶಗೊಳಿಸಿಬಿಟ್ಟೆ ಎಂದೆನಿಸಿತು.

ಅಂದು ಕಾಲೇಜಿನಲ್ಲಿ ಕಲಿಯುತ್ತಿರುವಾಗಲೇ ವಿಶ್ವನ ಪರಿಚಯವಾಗಿ ಅದು ಪ್ರೇಮಕ್ಕೆ ತಿರುಗಿತ್ತು. ಆ ಸಮಯ ಶಾರದಕ್ಕನ ಜೀವನ ವಿಶ್ವನೊಂದಿಗೆ ತಿರುಗಾಟದಲ್ಲಿಯೇ ಕಳೆದಿತ್ತು. ಒಮ್ಮೊಮ್ಮೆ ಶಾರದಕ್ಕನ ಮನೆಗೂ ಬಂದು ಹೋಗುತಿದ್ದ. ಶಾರದಕ್ಕ ಡಿಗ್ರಿ ಮುಗಿಸಿ ಒಂದು ಖಾಸಗಿ ಬ್ಯಾಂಕಿನಲ್ಲಿ ಕೆಲಸಕ್ಕೆ ಸೇರಿಕೊಂಡರೆ , ವಿಶ್ವ ನರ್ಸಿಂಗ್ ಕೋರ್ಸ್ ಮುಗಿಸಿ ಒಂದು ದೊಡ್ಡ ಆಸ್ಪತ್ರೆಯಲ್ಲಿ ಪರಿಚಾರಕನಾಗಿ ಕೆಲಸಕ್ಕೆ ಸೇರಿಕೊಂಡಿದ್ದ. ಅದಲ್ಲದೆ ರಜೆಯಿದ್ದರೆ ಇವರಿಬ್ಬರೂ ಒಟ್ಟಾಗಿ ಎಲ್ಲಿಗಾದರೂ ಪಿಕ್ನಿಕ್ ಹೋಗುತಿದ್ದರು. ಹೀಗೆಲ್ಲಾ ಮಾಡಬೇಡ ಎಂದು ತಂದೆ ತಾಯಿ ಅಡ್ಡಿಪಡಿಸಿದರೂ ಶಾರದಕ್ಕ ಅವರ ಮಾತನ್ನು ಲೆಕ್ಕಿಸುತ್ತಿರಲಿಲ್ಲ.

ಶಾರದಕ್ಕನ ಮದುವೆಯ ಪ್ರಯತ್ನ ನಡೆಯುತ್ತಿರುವಾಗ 'ನಾನು ವಿಶ್ವನನ್ನೇ ಮದುವೆ ಆಗುತ್ತೇನೆ' ಎಂದು ಹಠ ಹಿಡಿದಿದ್ದಳು. ಆದರೆ 'ಅನ್ಯ ಜಾತಿಯ ಹುಡುಗನೊಂದಿಗೆ ನಿನ್ನ ವಿವಾಹವನ್ನು ಮಾಡಿಸುವುದಿಲ್ಲ' ಎಂದು ಅವಳ ತಂದೆ ಖಡಾ ಖಂಡಿತವಾಗಿ ಹೇಳಿದಾಗ ಶಾರದಕ್ಕ ಅನ್ಯ ಮಾರ್ಗವಿಲ್ಲದೆ ಒಪ್ಪಿಕೊಳ್ಳಬೇಕಾಯಿತು. ಮನಸ್ಸಿಲ್ಲದ ಮನಸ್ಸಿನಿಂದ ದುಬೈಯಲ್ಲಿರುವ ತನ್ನ ಮಾವನ ಮಗ ದಿಲೀಪ್‌ನನ್ನು ಮದುವೆಯಾಗಿ ತಾಯಿ ಮನೆಯನ್ನು ತೊರೆದು ಶಾರದಕ್ಕ ಗಂಡನ ಮನೆ ಸೇರಿದರು. ಗಂಡ ದಿಲೀಪ್‌ನಲ್ಲಿ ಒಂದಿನಿತೂ ಪ್ರೀತಿ ಇಲ್ಲದಿದ್ದರೂ ಇಷ್ಟಪಟ್ಟವರಂತೆ ನಟಿಸಿದ್ದರು.

ಮದುವೆ ಆದ ನಂತರ ಎಲ್ಲಾ ಸರಿಯಾಗಬಹುದೆಂಬ ನಿರೀಕ್ಷೆಯಲ್ಲಿ ಇದ್ದರು ಶಾರದಕ್ಕನ ಹೆತ್ತವರು. ಆದರೆ ಶಾರದಕ್ಕನ ಆಟ ಅಲ್ಲಿಗೇ ನಿಲ್ಲಲಿಲ್ಲ. ಮದುವೆ ಆಗಿ ಐದು ತಿಂಗಳು ಕಳೆಯುವಾಗ ದಿಲೀಪ್ ಪುನಃ ದುಬೈಗೆ ಹೊರಡಬೇಕಾಯಿತು. ಆದರೆ ಈಗಾಗಲೇ ಶಾರದಕ್ಕನಲ್ಲಿ ಬಸುರಿತನದ ಲಕ್ಷಣಗಳು ಕಾಣಲಾರಂಭಿಸಿದ್ದವು. ಹತ್ತಿರದಲ್ಲಿಯೇ ಇರುವ ಸ್ತ್ರೀ ರೋಗ ತಜ್ಞೆಯನ್ನು ಭೇಟಿಯಾಗಲು ಶಾರದಕ್ಕ ದಿಲೀಪ್‌ನೊಂದಿಗೆ ಹೋಗಿ ಬಂದರು. ಅವರ ಸಲಹೆಯಂತೆ ಯಾವುದೇ ಆತಂಕ ಪಡುವ ಅಗತ್ಯವಿಲ್ಲ, ಮಗು ಅವಳಿ ಜವಳಿ ಇದೆ ಎಂದರು. ಗರ್ಭಕ್ಕೆ ಸಾದಾರಣ ಮೂರು ತಿಂಗಳು ಕಳೆದಿವೆ. ಕ್ಯಾಲ್ಸಿಯಂ ಮಾತ್ರೆ ಮತ್ತು ಟಾನಿಕ್ ಬರೆದು ಕೊಟ್ಟು ಜಾಗ್ರತೆ ವಹಿಸಬೇಕು ಎಂದರು. ಈ ಸ್ಥಿತಿಯಲ್ಲಿ ಹೆಂಡತಿಯನ್ನು ಬಿಟ್ಟು ದುಬೈಗೆ ಹೋಗಲು ದಿಲೀಪನಿಗೆ ಮನಸ್ಸೇ ಬರಲಿಲ್ಲ. ಆದರೆ ಹೊರಡುವುದು ಅನಿವಾರ್ಯವಾಯಿತು.

ದಿಲೀಪ್ ದುಬೈಗೆ ಹೋದದ್ದು ಶಾರದಕ್ಕನಿಗೆ ಅನುಕೂಲವೇ ಆಯಿತು. ಗಂಡನಿಲ್ಲದ ಮನೆಯಲ್ಲಿ ನಾನಿರುವುದಿಲ್ಲ, ಅವರು ಬಂದ ನಂತರ ನಾನು ಇಲ್ಲಿಗೆ ಬರುತ್ತೇನೆ, ಅಲ್ಲಿಯವರೆಗೆ ನಾನು ಅಮ್ಮನ ಮನೆಯಲ್ಲಿ ಇರುತ್ತೇನೆ ಎಂದು ತಾಯಿ ಮನೆಗೆ ಬಂದರು. ಶಾರದಕ್ಕನಿಗೆ ಅಮ್ಮನ ಮನೆಯಲ್ಲಿ ಸಿಕ್ಕಾಪಟ್ಟೆ ಸ್ವಾತಂತ್ರ್ಯ ದೊರೆಯಿತು. ತನ್ನ ಕೆಲಸಕ್ಕೆ ಅಲ್ಲಿಂದಲೇ ಹೋಗಿ ಬರುತ್ತಿದ್ದರು. ಬಿಡುವು ಸಿಕ್ಕಿದಾಗ ಪುನಃ ವಿಶ್ವನೊಂದಿಗೆ ತಿರುಗಾಟ ಪ್ರಾರಂಭಿಸಿದ್ದರು. ಗರ್ಭಿಣಿ ಮಗಳನ್ನು ತಾಯಿ ಚೆನ್ನಾಗಿ ಆರೈಕೆ ಮಾಡುತ್ತಿದ್ದರು. ಅವಳ ಬೇಕು ಬೇಡಗಳಿಗೆ ತುಂಬಾ ಒತ್ತು ಕೊಡುತ್ತಿದ್ದರು. ತನ್ನ ಹೆರಿಗೆಗೋಸ್ಕರ ವಿಶ್ವ ಪರಿಚಾರಕನಾಗಿರುವ ಆಸ್ಪತ್ರೆಯನ್ನೇ ಆರಿಸಿದ್ದಳು. ಅಂತೂ ಒಬ್ಬ ಪರಿಚಯದ ವ್ಯಕ್ತಿ ಅಲ್ಲಿ ಇರುವುದು ಒಳ್ಳೆಯದು ಎನಿಸಿತ್ತು ಅವಳ ಅಮ್ಮನಿಗೆ.

ದಿಲೀಪ್ ಸಮಯ ಸಿಕ್ಕಿದಾಗ ಪತ್ನಿಗೆ ಫೋನ್ ಮಾಡಿ ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದ. ಶಾರದಕ್ಕ ದಿಲೀಪ್ ನೊಂದಿಗೆ ಫೋನ್ ನಲ್ಲಿ ಅಷ್ಟಕಷ್ಟೇ ಮಾತನಾಡುತ್ತಿದ್ದರು. ಪ್ರೀತಿಯಿಂದ ಮಾತನಾಡುವಂತೆ ನಾಟಕ ಮಾಡುತಿದ್ದರು.

ದಿನಗಳು ಉರುಳುತಿತ್ತು. ಅವಳ ಸೀಮಂತ ಶಾಸ್ತ್ರ ಆದ ನಂತರ ಅವಳು ತನ್ನ ಕೆಲಸಕ್ಕೆ ಹೋಗುವುದು ಬೇಡ ಎಂದು ನಿರ್ಧರಿಸಿದಳು. ಮಕ್ಕಳು ಅವಳಿ ಜವಳಿ ಇರುವ ಕಾರಣ ಸ್ವಲ್ಪ ನಡೆದರೆ ಅವಳಿಗೆ ಏದುಸಿರು ಬರುತಿತ್ತು. ಅದನ್ನು ನೋಡಿ ಅವಳು ಮನೆಯಲ್ಲೇ ಇರುವಂತೆ ಅವಳ ಅಮ್ಮ ಸಲಹೆಯನ್ನು ಕೊಟ್ಟರು. ಆಗಾಗ ತಪಾಸಣೆಗೋಸ್ಕರ ಮಗಳನ್ನು ಕರೆದುಕೊಂಡು ಅಮ್ಮ ಆಸ್ಪತ್ರೆಗೆ ಹೋಗಿ ಬರುತ್ತಿದ್ದರು. ಅಲ್ಲಿ ಅವಳು ವಿಶ್ವನನ್ನು ಸಿಕ್ಕಿ ಮಾತನಾಡುತ್ತಿದ್ದಳು. ಒಮ್ಮೊಮ್ಮೆ ವಿಶ್ವ ಶಾರದಕ್ಕನನ್ನು ಭೇಟಿಯಾಗಲು ಅವಳ ಮನೆಗೆ ಬರುತಿದ್ದ.

ಒಂಬತ್ತು ತಿಂಗಳು ಕಳೆಯುತಿರುವಾಗಲೇ ಹೆರಿಗೆ ನೋವು ಬಂದು ಶಾರದಕ್ಕ ಆಸ್ಪತ್ರೆಯಲ್ಲಿ ದಾಖಲಾದರು. ಅಂತೂ ಒಂದೆರಡು ದಿನ ಕಳೆಯುವಾಗ ಅವಳಿ ಗಂಡು ಮಕ್ಕಳಿಗೆ ಜನ್ಮವಿತ್ತರು. ಶಾರದಕ್ಕನ ತಂದೆ ತಾಯಿಗೆ ತುಂಬಾ ಸಂತೋಷವಾಯಿತು. ಫೋನ್ ಮುಖಾಂತರ ಅಳಿಯನಿಗೆ ವಿಷಯ ತಿಳಿಸಿದರು. ವಿಷಯ ತಿಳಿದು ದಿಲೀಪನಿಗೆ ಖುಷಿ ಆಯಿತು, ಸಾದ್ಯವಾದರೆ ಮುಂದಿನ ತಿಂಗಳು ಊರಿಗೆ ಬರುತ್ತೇನೆ ಎಂದು ತಿಳಿಸಿದನು. ಹೆರಿಗೆಯ ನಂತರ ಹತ್ತು ದಿನಗಳ ಕಾಲ ಶಾರದಕ್ಕ ಆಸ್ಪತ್ರೆಯಲ್ಲಿ ಇದ್ದರು. ಆ ಸಮಯದಲ್ಲಿ ವಿಶ್ವ ತುಂಬಾ ಸಹಾಯ ಮಾಡುತಿದ್ದ. ಡಾಕ್ಟರ್‌ಯಾವುದೇ ಔಷಧ ಚೀಟಿ ಕೊಟ್ಟರೂ ಶಾರದಕ್ಕನ ಅಮ್ಮ ವಿಶ್ವನಿಗೆ ಹೇಳಿ ತರಿಸುತ್ತಿದ್ದರು. ಮಗಳಿಗೆ ಚಾ ತಿಂಡಿ ಬೇಕಾದರೂ ಅವನಿಗೇ ಹೇಳುತ್ತಿದ್ದರು. ಅಂತೂ ಅವನು ಆ ಕುಟುಂಬಕ್ಕೆ ಇನ್ನೂ ಸ್ವಲ್ಪ ಹತ್ತಿರವಾದ. ಹತ್ತು ದಿನಗಳ ನಂತರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಮನೆಗೆ ಹೋದರು.

ಇಬ್ಬರು ಮಕ್ಕಳೊಂದಿಗೆ ಮನೆ ಸೇರಿದ ನಂತರ ಶಾರದಕ್ಕನಿಗೆ ತುಂಬಾ ಕಷ್ಟವಾಗತೊಡಗಿತು. ಆಗ ವಿಶ್ವನ ಸಹಾಯದಿಂದ ಮಕ್ಕಳನ್ನು ನೋಡಿಕೊಳ್ಳಲು ಒಬ್ಬಳನ್ನು ಮನೆಯಲ್ಲಿ ಇರಿಸಿಕೊಂಡರು. ಅವಳು ಬಂದ ನಂತರ ಶಾರದಕ್ಕನಿಗೆ ಸ್ವಲ್ಪ ನಿರಾಳವಾದಂತೆನಿಸಿತು. ನಲುವತ್ತು ದಿನ ಕಳೆದ ನಂತರ ಮಕ್ಕಳಿಗೆ ನಾಮಕರಣದ ಶಾಸ್ತ್ರ ಮಾಡಿಸಿ ಸುಮಿತ್ ಮತ್ತು ಸುಜಿತ್ ಎಂಬ ಹೆಸರನ್ನಿಟ್ಟರು. ದಿಲೀಪನ ರಜೆ ಸರಿಯಾಗದ ಕಾರಣ ಅವನಿಗೆ ಊರಿಗೆ ಬರಲಿಕ್ಕೆ ಆಗಲಿಲ್ಲ. ನಾಮಕರಣಕೆ ವಿಶ್ವನೂ ಬಂದಿದ್ದ. ಸಮಯ ವೇಗವಾಗಿ ಸಾಗುತಿತ್ತು.

ಇಬ್ಬರೂ ಮಕ್ಕಳು ಅಂಬೆಗಾಲಿಡುವ ಸಮಯದಲ್ಲಿ ದಿಲೀಪ್ ಊರಿಗೆ ಬಂದಿದ್ದ. ಮುದ್ದು ಮುದ್ದಾದ ಮಕ್ಕಳನ್ನು ನೋಡಿ ಸಂತಸಗೊಂಡ. ಒಂದೆರಡು ತಿಂಗಳು ಇಲ್ಲಿದ್ದು ಪುನಃ ದುಬೈಗೆ ಹೊರಟು ಹೋಗಿದ್ದ. ವರುಷಗಳು ಉರುಳುತಿತ್ತು. ಮಕ್ಕಳೂ ಬೆಳೆದು ದೊಡ್ಡವರಾದರು. ಈಗಲೂ ವಿಶ್ವ ಮನೆಗೆ ಬರುತಿದ್ದ. ಶಾರದಕ್ಕನೊಂದಿಗೆ ಅವ ಹರಟೆ ಹೊಡೆಯುವುದನ್ನು ಕಂಡರೆ ಮಕ್ಕಳಿಗೆ ಆಗುತ್ತಿರಲಿಲ್ಲ.

ದೊಡ್ಡವ ಸುಮಿತ್ ಶಾಂತವಾಗಿದ್ದರೂ ಸಣ್ಣವ ಸುಜಿತ್ ತನ್ನ ಕೋಪವನ್ನು ವ್ಯಕ್ತಪಡಿಸುತಿದ್ದನು. ಅವನ ಗೆಳೆಯರು ಹಾಗೂ ಊರಿನವರು ಶಾರದಕ್ಕನ ಹೆಸರನ್ನು ವಿಶ್ವನೊಂದಿಗೆ ಸೇರಿಸಿ ಏನೇನೋ ಹೇಳುವುದು ಅವನ ಕಿವಿಗೂ ಬಿದ್ದಿತ್ತು. ಅವನು ತನ್ನ ತಾಯಿಗೆ ಈ ಬಗ್ಗೆ ಹೇಳಿದಾಗ....ನೀನು ಊರಿನವರ ಮಾತಿಗೆ ಕಿವಿಗೊಡಬೇಡ, ಸುಮ್ಮನಿರು ಎಂದು ಅವನ ಬಾಯಿ ಮುಚಿಸಿದ್ದಳು.

ಮಕ್ಕಳ ವಿದ್ಯಾಭ್ಯಾಸ ಮುಗಿಯುವ ಹಂತದಲ್ಲಿ ಇತ್ತು. ಈ ಸಮಯದಲ್ಲಿ ದುಬೈಯಿಂದ ಬಂದ ಫೋನ್ ಶಾರದಕ್ಕನನ್ನು ದಿಗ್ಭ್ರಮೆ ಗೊಳಿಸಿತು. ಆ ಫೋನ್ ಮುಖಾಂತರ ದಿಲೀಪ್ ಒಂದು ಅಪಘಾತದಲ್ಲಿ ತೀರಿಕೊಂಡ ವಿಷಯ ತಿಳಿದರು. ಮನೆಯವರೆಲ್ಲಾ ಶೋಕ ಸಾಗರದಲ್ಲಿ ಮುಳುಗಿದರು. ಅಂತೂ ಸಮಯ ಯಾರನ್ನೂ ಕಾಯುವುದಿಲ್ಲ, ಅದು ವೇಗವಾಗಿ ಹೋಗುತ್ತಿತ್ತು.

ಕಾಲಕ್ರಮೇಣ ಶಾರದಕ್ಕನ ಹೆತ್ತವರೂ ವಿಧಿವಶರಾದರು. ಮಕ್ಕಳು ಉದ್ಯೋಗ ಅರಸಿ ಹೊರದೇಶಕ್ಕೆ ಹೋಗಿದ್ದರು. ಅವರು ಪ್ರಾಯಕ್ಕೆ ಬಂದಾಗ ಶಾರದಕ್ಕ ಅವರಿಬ್ಬರ ಮದುವೆಯನ್ನೂ ಮಾಡಿ ಮುಗಿಸಿದ್ದರು. ದೊಡ್ಡವ ಸುಮಿತ್ ತನ್ನ ಸಂಸಾರದೊಂದಿಗೆ ಅಮೆರಿಕದಲ್ಲಿ ಇದ್ದರೆ ಸಣ್ಣವ ಸುಜಿತ್ ದುಬೈಯ ಹವಾಮಾನ ಒಗ್ಗಿ ಬರಲಿಲ್ಲವಾದ ಕಾರಣ ಊರಿನಲ್ಲಿಯೇ ನೆಲೆಸಿದ್ದ. ಅಮ್ಮನ ಮನೆಯಿಂದ ಕೆಲವೇ ಅಂತರದಲ್ಲಿ ಅವನ ಮನೆಯಿತ್ತು. ಈಗ ಶಾರದಕ್ಕನಿಗೆ ಏನು ಮಾಡಿದರೂ ಹೇಳುವವರು ಕೇಳುವವರು ಯಾರೂ ಇರಲಿಲ್ಲ. ತನ್ನ ಮನಸೋಇಚ್ಛೆ ವರ್ತಿಸುತ್ತಿದ್ದರು. ಅವರು ಈಗ ಮನೆಯಲ್ಲಿ ಒಬ್ಬರೇ ಇರುವ ಕಾರಣ ವಿಶ್ವ ಆಗಾಗ ಮನೆಗೆ ಬರುತಿದ್ದ. ಊರಿನವರು ಏನಾದರೂ ಅಂದರೆ ಶಾರದಕ್ಕ ಲೆಕ್ಕಿಸುತಿರಲಿಲ್ಲ.

ಒಂದು ದಿನ ಸುಜಿತ್ ಆಕಸ್ಮಿಕವಾಗಿ ಅಮ್ಮನ ಮನೆಗೆ ಬಂದಾಗ, ಅಲ್ಲಿ ಅಮ್ಮ ಹಾಗೂ ವಿಶ್ವನ ಅನೈತಿಕ ಚಟುವಟಿಕೆಯನ್ನು ಕಂಡು ದಂಗಾದನು. ಮಗನ ಮುಂದೆ ತನ್ನ ಜೀವನ ಬಟ್ಟ ಬಯಲಾಯಿತಲ್ಲ ಎಂದು ಶಾರದಕ್ಕ ಅಂಜಿಕೊಂಡರು. ತನ್ನ ಎಲ್ಲಾ ರಹಸ್ಯಗಳನ್ನು ತಿಳಿದ ಇವನನ್ನು ಹೀಗೆ ಬಿಟ್ಟರೆ ತನಗೆ ಕಷ್ಟ ಎಂದು ಅರಿತ ಅವರು ಸುಜಿತ್‌ನನ್ನು ಮುಗಿಸಿ ಬಿಡಲು ಹುನ್ನಾರ ಹೂಡಿದರು.

ವಿಶ್ವನಿಗೂ ಈ ವಿಷಯವನ್ನು ಸೂಕ್ಷ್ಮವಾಗಿ ಅರುಹಿದ್ದರು. ಅವನೂ ಸಂದರ್ಭ ಬರಲಿ ಎಂದು ಕಾಯುತ್ತಿದ್ದ. ಹೀಗಿರುವಾಗ ಸುಜಿತ್ ಒಮ್ಮೆ ನ್ಯುಮೋನಿಯಾ ದಿಂದ ಬಳಲುತ್ತಿದ್ದ. ಉಸಿರಾಟದ ತೊಂದರೆಯೊಂದಿಗೆ ಜ್ವರ, ಕೆಮ್ಮು ಎಲ್ಲಾ ಸೇರಿ ತೀವ್ರ ಸ್ವರೂಪವನ್ನು ಪಡೆಯಿತು. ಶಾರದಕ್ಕ ಉದ್ದೇಶಪೂರ್ವಕವಾಗಿ ಅವನನ್ನು ವಿಶ್ವನಿರುವ ಆಸ್ಪತ್ರೆಯಲ್ಲೇ ದಾಖಲೆ ಮಾಡಿದರು. ಒಂದೆರಡು ವಾರ ಅಲ್ಲೇ ಇದ್ದರೂ ಅವನ ಜ್ವರ ಕಡಿಮೆಯಾಗಲೇ ಇಲ್ಲ. ಅಥವಾ ಜ್ವರ ಕಡಿಮೆ ಆಗದ ಹಾಗೆ ವಿಶ್ವ ನೋಡಿಕೊಂಡ ಎನ್ನಬಹುದು. ಸುಜಿತ್ನ ಪತ್ನಿ ಅವನನ್ನು ಈ ಆಸ್ಪತ್ರೆಯಿಂದ ಬೇರೆ ಆಸ್ಪತ್ರೆಗೆ ವರ್ಗಾಯಿಸುವ ಎಂದರೆ ಶಾರದಕ್ಕ ಅನುಮತಿ ಕೊಡಲಿಲ್ಲ. ಒಂದು ರಾತ್ರಿ ವಿಶ್ವನ ಸಹಾಯದಿಂದ ಯಾರಿಗೂ ಅನುಮಾನ ಬಾರದ ರೀತಿಯಲ್ಲಿ ಶಾರದಕ್ಕ ಸುಜಿತ್‌ನನ್ನು ಕೊನೆಗಾಣಿಸಿದರು. ಯಾರೂ ಸಂಶಯ ಪಡದಂತೆ ಜಾಗ್ರತೆ ವಹಿಸಿದರು. ಅಂತೂ ಆ ಅಧ್ಯಾಯವನ್ನು ಅಲ್ಲಿಗೇ ಮುಗಿಸಿಬಿಟ್ಟರು. ಆದರೆ ಅದರ ನಂತರ ಶಾರದಕ್ಕನ ಜೀವನದಲ್ಲಿ ನೆಮ್ಮದಿ ಎಂಬುದು ಇರಲಿಲ್ಲ.

ಆತ್ಮಸಾಕ್ಷಿ ನಿಧಾನವಾಗಿ ಅವರ ಮನಸ್ಸನ್ನು ಕೆಡಿಸಲಾರಂಭಿಸಿತು. ತಾನು ಮಾಡಿದ ತಪ್ಪು ಈಗ ಅವರಿಗೆ ಅರಿವಾಗಿದೆ. ಆದರೆ ಸಮಯ ಮಿಂಚಿ ಹೋಗಿತ್ತು. ಊರಿನವರು ಯಾರೂ ಸರಿಯಾಗಿ ಮುಖ ಕೊಟ್ಟು ಮಾತನಾಡಿಸುತ್ತಿರಲಿಲ್ಲ. ಈಗ ವಿಶ್ವನೂ ಬರುತ್ತಿರಲಿಲ್ಲ. ವಿಶ್ವನ ಬರವನ್ನು ಶಾರದಕ್ಕನೂ ಅಪೇಕ್ಷಿಸುತ್ತಿರಲಿಲ್ಲ. ನನ್ನ ಜೀವನಕ್ಕೆ ನಾನೇ ಬೆಂಕಿ ಇಟ್ಟುಕೊಂಡೆ ಎಂದು ಹಲುಬಿದರು.

ನೆರೆಮನೆಯ ಪಟಾಕಿ ಶಬ್ದಕ್ಕೆ ಬೆಚ್ಚಿ ಎಚ್ಚೆತ್ತ ಶಾರದಕ್ಕ ವಾಸ್ತವಕ್ಕೆ ಮರಳಿದರು.

ವಾರದ ಕವನ

ಅತಿಯಾದ ಸ್ನೇಹ

ಅತಿಯಾದ ಸ್ನೇಹವು ಸುರಾಪಾನವಿದ್ದಂತೆ
ಮತಿಕೆಡಿಸುವುದಯ್ಯ ಗೆದ್ದಲು ಹಿಡಿದಂತೆ

ಏರಿದಾ ಅತಿ ಅಮಲು ಇಳಿಯುವುದು ಗಾಢ
ಮರುಗಿದರು ಫಲವಿಲ್ಲ ತಿಳಿಯೊ ನೀ ಮೂಢ

ಧನ ಬಲವಿರುವಾಗ ಇರುವೆಯಾ ತೆರದಿ
ಕನಕಗೋಸುಗ ಸುತ್ತ ತಿರುಗುವರು ಭರದಿ

ಭರತ ಇಳಿತದ ರೀತಿ ಲಕ್ಷ್ಮಿ ಬಂದು ಹೋಗುವಳು
ಪರಮ ಧಾರ್ಮಿಕನೊಡನೆ ಮಾತ್ರ ನಿಲ್ಲುವಳು

ಮಧುವ ಹೀರಲು ದುಂಬಿ ಹೂಗಿಡದ ಮೇಲೆ
ಮುದದಿ ಹೀರುತ ಹಾರಿ ಹೋಗುವುದಾ ಮೇಲೆ

ನಂಬದಿರು ಯಾರನ್ನು ಕೆಡುಕ ಯೋಚಿಪರು
ನಂಬದಿದ್ದರು ಬಂದು ಕದನಗೈಯುವರು

ನುಂಗಲಾಗದು ಉಗುಳು ಬಿಸಿತುಪ್ಪದಂತೆ
ಕಂಗಳನು ತೆರೆವನಕ ಗೋಚರಿಸದಾ ವಿಷವಂತೆ

ಅಂಗನೆಯ ಜೊತೆಗೂಡಿ ಪೂಜಿಸಲು ತಂದೆ
ಮಂಗಳವ ಮಾಡುವನು ಗೋವಿಂದ ಮುಂದೆ

ದೇವಲ್ಕುಂದ ಭಾಸ್ಕರ ಶೆಟ್ಟಿ

ಕವನ

ಯಾವ ಮೋಹನ...



ಪೇತ್ರಿ ವಿಶ್ವನಾಥ ಶೆಟ್ಟಿ

ನಗು-ನಗುತ್ತಾ ನಗಿಸುತ್ತಾ
ಮನೆ-ಮನದ ನಂದಾ ದೀಪವಾಗಿದ್ದವಳು ನೀವು
ವಿಧಿ ಲಿಖಿತ ಇಷ್ಟೇ ಇತ್ತು ನಂದಾದೀಪ ಇಂದು ನಂದಿತು
'ಸುಮತಿ'ಯವರ ಕರುಳ ಕುಡಿ
'ಸುಜಾತಾ' ಕಣ್ಣೀರ ಸುಧೆಯಾಗಿ ಹರಿದು ಹೋದಳು
ಕನಸುಗಳ ತೊಟ್ಟಿಲಲ್ಲಿ
ತೂಗುತ್ತಾ ನೂರು 'ವಸಂತ' ಕಾಣಬೇಕಿದ್ದವಳು
ನೂರ್ಕಾಲ ಬದುಕ ಬಟ್ಟಲು ಉಣಬೇಕಿತ್ತು
ಕಾಲನ ಕರೆಗೆ ಒಗೊಡಲು ಬದುಕು ಅರ್ಧ ಉಳಿದಿತ್ತು
'ಶರತ್ಕಾ'ಲದ ಮುಸ್ಸಂಜೆಯಲಿ
ಸಾವಿರ ಮಾತುಗಳು ಆಡಲು ಉಳಿದು ಹೋಗಿವೆ ಗೆಳತಿ
ಬರೆಯಲಿದ್ದ ನೂರಾರು ಕವಿತೆಗಳು ಬಾಕಿ ಉಳಿದಿವೆ
ದೇವರ ಮಗಳು ನೀವು ಭಗವಂತನೊಂದಿಗೆ ಕುಳಿತು ಬರೆದು ಬಿಡಿ
ಅಕ್ಷರ, ಕಲೆ ಆರಾಧಿಸುವ ನೀವು
ಇಷ್ಟು ಬೇಗ ಆರಿ ಹೋಗುವಿ ಆ ಕನಸು ನಾವು ಕಂಡವರಲ್ಲ
ಬಿರುಸಾದ ಒಡನಾಟ ಹದವಾದ ಜಗಳಾಟ ಇನ್ನೆಲ್ಲಾ ನೆನಪು ಮಾತ್ರ
ನಿಮ್ಮ ನೆನಪಿನ ನವಿಲ ಗರಿ
ಹೃದಯ ಪುಸ್ತಕದಲ್ಲಿ ಜೋಪಾನ ಮಾಡಿರುವೆ
ನೀವು 'ಪೃಥ್ವಿ'ಯ ಬಿಟ್ಟು ಹೋದರೇನಾಯಿತು?
ಆ ಪೃಥ್ವಿಯೊಂದಿಗೆ ನಾವು ಇರುವೇವು...!

(ಮುಂಬಯಿ ಸಾಹಿತ್ಯ ಜಗತ್ತು ಕಂಡ ನಗುಮುಖದ ಕವಯತ್ರಿ ಸುಜಾತಾ ಅವರ ನೆನಪಿಗೆ 'ಅಕ್ಷರ ನಮನ')

ಡಿ. ಕೆ. ಶಿವಕುಮಾರ್ ಸಂಪುಟ ವಿಸ್ತರಣೆ ಮತ್ತಷ್ಟು ವಿಳಂಬ?

ಕರ್ನಾಟಕದ ಮುಖ್ಯಮಂತ್ರಿಯಾಗಿ ಡಿ. ಕೆ. ಶಿವಕುಮಾರ್ ಅವರು ಜೂನ್ 3ರಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಶಿವಕುಮಾರ್ ಜತೆಯಲ್ಲಿ ಇತರ 9 ಸಚಿವರೂ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ಸಂಪುಟದಲ್ಲಿ ಇನ್ನೂ 24 ಸಚಿವರ ಸೇರ್ಪಡೆ ಬಾಕಿಯಿದೆ. ಅವುಗಳನ್ನು ಶಿವಕುಮಾರ್ ಯಾವಾಗ ಭರ್ತಿ ಮಾಡುತ್ತಾರೆ ಎನ್ನುವ ಕುತೂಹಲ ಹಾಗೇ ಇದೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಲು ಕನಿಷ್ಠ ಆರು ತಿಂಗಳುಗಳಿಂದ ಕಾಂಗ್ರೆಸ್ ಹೈಕಮಾಂಡ್ ಜತೆ ಮುಸುಕಿನ ಯುದ್ಧ ನಡೆಸಿದ್ದಾರೆ.

ಸಿದ್ದರಾಮಯ್ಯ ಅವರು ಎರಡೂವರೆ ವರ್ಷ ಅಧಿಕಾರ ನಡೆಸಿ ಮುಖ್ಯಮಂತ್ರಿ ಸ್ಥಾನವನ್ನು ಶಿವಕುಮಾರ್ ಅವರಿಗೆ ಹಸ್ತಾಂತರ ಮಾಡುವ ಒಪ್ಪಂದ 2023ರ ಮೇ ತಿಂಗಳಲ್ಲಿ ಕಾಂಗ್ರೆಸ್ ಸರಕಾರ ರಚನೆ ಆಗುವಾಗ ಆಗಿತ್ತು ಎಂಬ ಸುದ್ದಿ ಆಗಲೇ ಹರಡಿದ್ದರೂ ಆ ಬಗ್ಗೆ ಯಾವುದೇ ಕಾಂಗ್ರೆಸ್ ನಾಯಕರೂ ಯಾವುದೇ ಸ್ಪಷ್ಟನೆ ನೀಡಿರಲಿಲ್ಲ. ಆದರೆ ಅದು ನಿಜ ಎಂದು ಬಹಿರಂಗ ಆಗಿದ್ದು ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲು ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿದಾಗ ಮಾತ್ರ. ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮೂರು ವರ್ಷದ ಹಿಂದೆ ಆಗಿರುವ ನಿರ್ಧಾರದಂತೆ ಡಿ. ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಲು ಪದ ತ್ಯಾಗ ಮಾಡುವಂತೆ ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡಿದಾಗ ತಾನು ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಹೇಳಿದ್ದರು. ಅದರಂತೆಯೇ ಅವರು 2026ರ ಮೇ 28ರಂದು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆ ಬಳಿಕ ಜೂನ್ 3ರಂದು ಶಿವಕುಮಾರ್ ಮುಖ್ಯಮಂತ್ರಿಯಾಗಿ ಪದಗ್ರಹಣ ಸ್ವೀಕಾರ ಮಾಡಿದ್ದಾರೆ.

ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಆಯ್ದುಕೊಂಡ ಮಂತ್ರಿಗಳಲ್ಲಿ 8 ಮಂದಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸಚಿವರಾಗಿದ್ದವರು. ಮತ್ತಿಬ್ಬರಲ್ಲಿ ಒಬ್ಬರು ಸಿದ್ದರಾಮಯ್ಯ ಅವರ ಮಗ ವಿಧಾನ ಪರಿಷತ್ ಸದಸ್ಯ ಯತೀಂದ್ರ ಅವರಾದರೆ ಮತ್ತೊಬ್ಬರು ಸಿದ್ದರಾಮಯ್ಯ ಸರಕಾರದ ಅವಧಿಯಲ್ಲಿ ವಿಧಾನಸಭಾ ಸ್ಪೀಕರ್ ಆಗಿದ್ದ ಯು. ಟಿ. ಖಾದರ್. ಇದರಿಂದಾಗಿ ವಿಧಾನಸಭೆಗೆ ಹೊಸ ಸ್ಪೀಕರ್ ಆಯ್ಕೆ ಕೂಡಾ ಆಗಬೇಕಿದೆ. 2023ರಲ್ಲಿ ಭರ್ಜರಿ ಬಹುಮತದಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಸರಕಾರ ರಚನೆ ಆಗುವಾಗ ಸ್ಪೀಕರ್ ಹುದ್ದೆಯನ್ನು ವಹಿಸಿಕೊಳ್ಳಲು ಹಿರಿಯ ಎಂಎಲ್‌ಎಗಳು ಯಾರೂ ಇಷ್ಟಪಡಲಿಲ್ಲ.

ಕೊನೆಗೆ ಸಿದ್ದರಾಮಯ್ಯ ಅವರು ಯು. ಟಿ. ಖಾದರ್ ಅವರನ್ನು ಸ್ಪೀಕರ್ ಆಗುವಂತೆ ಮನವೊಲಿಸಿದ್ದರು ಮಾತ್ರವಲ್ಲ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಮೊದಲ ಬಾರಿ ಅಲ್ಪ ಸಂಖ್ಯಾತ ಮುಸ್ಲಿಂ ಸಮುದಾಯದ ನಾಯಕರೊಬ್ಬರು ಸ್ಪೀಕರ್ ಆಗಿದ್ದರು. ಖಾದರ್ ಅವರ ಭಾಷಾ ಉಚ್ಚಾರಣೆಯಲ್ಲಿ ಕಂಡು ಬರುತ್ತಿದ್ದ ತಪ್ಪನ್ನು ವಿರೋಧ ಪಕ್ಷದ ಸದಸ್ಯರು ಸಾಕಷ್ಟು ಬಾರಿ ಲೇವಡಿ ಮಾಡಿದ್ದರೂ ಸ್ಪೀಕರ್ ಆಗಿ ಖಾದರ್ ಅವರು ಅವರ ಕರ್ತವ್ಯವನ್ನು ಬದ್ಧತೆಯಿಂದಲೇ ನಿರ್ವಹಿಸಿದ್ದಾರೆ. ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ವಿಚಾರದಲ್ಲಿ ಸ್ಪೀಕರ್ ಆಗಿ ಸಮಾನ ಗೌರವದಿಂದಲೇ ನಡೆದುಕೊಳ್ಳುವ ಮೂಲಕ ಗಮನ ಸೆಳೆದಿದ್ದಾರೆ. ಸದನದಲ್ಲಿ ಸರಕಾರದ ಮತ್ತು ಸಚಿವರುಗಳ ಹೊಣೆಗಾರಿಕೆಯನ್ನು ಮತ್ತು ವಿರೋಧ ಪಕ್ಷಗಳ ಸದಸ್ಯರ ನಡವಳಿಕೆಗಳನ್ನು ಖಾದರ್ ಸರಿಯಾಗಿ ನಿರ್ವಹಿಸುವ ಮೂಲಕ ಸಾಂವಿಧಾನಿಕ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಆಡಳಿತ ಕಾಂಗ್ರೆಸ್ ಪಕ್ಷದ ಪಕ್ಷಪಾತಿಯಾಗಿ ಖಾದರ್ ಯಾವತ್ತೂ ಯೋಚಿಸದೆ ಕರ್ತವ್ಯ ನಿರ್ವಹಣೆ ಮಾಡಿ ಗಮನ ಸೆಳೆದಿದ್ದಾರೆ.



ಖಾದರ್ ಅವರ ಸ್ಥಾನದಲ್ಲಿ ಹೊಸ ಸ್ಪೀಕರ್ ಆಗಿ ಕಾಂಗ್ರೆಸ್ ಯಾರನ್ನು ಆಯ್ಕೆ ಮಾಡಲು ಬಯಸಿದೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಹಿರಿಯ ಕಾಂಗ್ರೆಸ್ ನಾಯಕ ಎಚ್. ಕೆ. ಪಾಟೀಲ್ ಸಹಿತ ಹಲವು ಹಿರಿಯರ ಹೆಸರು ಚರ್ಚೆಯಲ್ಲಿದೆ. ಹಿರಿಯ ಕಾಂಗ್ರೆಸ್ ನಾಯಕ ಆರ್. ವಿ. ದೇಶಪಾಂಡೆ ಅವರನ್ನು ಸ್ಪೀಕರ್ ಮಾಡಲು ಕಾಂಗ್ರೆಸ್ 2023ರಲ್ಲಿ ಯೋಚನೆ ಮಾಡಿತ್ತು. ಮತ್ತೊಬ್ಬ ಹಿರಿಯ ಎಂಎಲ್‌ಎ ಟಿ. ಬಿ. ಜಯಚಂದ್ರ ಅವರ ಹೆಸರೂ ಸ್ಪೀಕರ್ ಸ್ಥಾನಕ್ಕೆ ಮುಂಚೂಣಿಯಾಗಿ ಚರ್ಚೆಯಲ್ಲಿತ್ತು. ಅವರಿಬ್ಬರೂ ಸ್ಪೀಕರ್ ಸ್ಥಾನ ಬೇಡ ಎಂದು ನಿರಾಕರಿಸಿದ್ದರಿಂದ ಖಾದರ್ ಅವರು ಸ್ಪೀಕರ್ ಆದರು. ಜಯಚಂದ್ರ ಅವರನ್ನು ಕಾಂಗ್ರೆಸ್ ಪಕ್ಷ ಅದರ ದಿಲ್ಲಿ ಪ್ರತಿನಿಧಿ ಎಂದು ನೇಮಕ ಮಾಡಿದರೆ ದೇಶಪಾಂಡೆ ಅವರಿಗೆ ಸಚಿವ ಸ್ಥಾನ ನಿರಾಕರಿಸಿತ್ತು. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಲೇ ದೇಶಪಾಂಡೆ ಮತ್ತು ಜಯಚಂದ್ರ ಮತ್ತೆ ತಮಗೆ ಸಚಿವ ಸ್ಥಾನ ಬೇಕು ಎಂಬ ಬೇಡಿಕೆ ಇಟ್ಟಿದ್ದಾರೆ.

ಡಿ. ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಎರಡು ವಾರಗಳ ಒಳಗೆ ಪೂರ್ಣ ಪ್ರಮಾಣದ ಮಂತ್ರಿ ಮಂಡಲದ ರಚನೆಗೆ ಸಂಪುಟ ವಿಸ್ತರಣೆ ಮಾಡುವುದಾಗಿ ಹೇಳಿಕೊಂಡಿದ್ದರು. ಆದರೆ ಮೂರು ವಾರ ಕಳೆದರೂ ಸಂಪುಟ ವಿಸ್ತರಣೆ ಬಗ್ಗೆ ಯಾವುದೇ ತೀರ್ಮಾನ ಆಗಿಲ್ಲ. ಅದಕ್ಕೆ ಕಾರಣ ಸಂಪುಟಕ್ಕೆ ಸೇರಲು ಇರುವ ಪೈಪೋಟಿ ಎನ್ನುವುದು ವಾಸ್ತವ. ದೀರ್ಘ ಕಾಲ ಮಂತ್ರಿಗಳಾಗಿ ಅಧಿಕಾರ ಅನುಭವಿಸಿದವರನ್ನು ಕೈಬಿಟ್ಟು ಈ ತನಕ ಮಂತ್ರಿಗಳಾಗಿ ನೇಮಕ ಆಗದೇ ಇರುವವರನ್ನು



ಮತ್ತು ಹೊಸ ಎಂಎಲ್‌ಎಗಳನ್ನು ಸಚಿವರಾಗಿ ಸೇರ್ಪಡೆ ಮಾಡಿಕೊಂಡು ಆಡಳಿತಕ್ಕೆ ಜೀವ ತುಂಬಿ 2028ರ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷವನ್ನು ಅಣಿ ಮಾಡಬೇಕು ಎನ್ನುವ ಪ್ರತಿಪಾದನೆ ಕಾಂಗ್ರೆಸ್ ಪಕ್ಷದ ಒಂದು ವಲಯದಿಂದ ಇದೆ. ಮತ್ತೊಂದೆಡೆ ಸಿದ್ದರಾಮಯ್ಯ ಅವರ ಮಂತ್ರಿಮಂಡಲದಲ್ಲಿ ಇದ್ದ ಎಲ್ಲರೂ ತಮಗೆ ಸಚಿವ ಸ್ಥಾನ ಬೇಕೇ ಬೇಕು ಎಂದು ಬೇಡಿಕೆ ಇಟ್ಟು ಕುಳಿತಿದ್ದಾರೆ. ಸಚಿವ ಸ್ಥಾನಕ್ಕಾಗಿ ಸಿದ್ದರಾಮಯ್ಯ ಮತ್ತು ಕೇಂದ್ರ ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರ ಮೇಲೆ ಒತ್ತಡ ಹಾಕಲೂ ಹಲವು ಹಿರಿಯ ಕಾಂಗ್ರೆಸ್ ಎಂಎಲ್‌ಎಗಳು ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದಾಗಿ ಸಂಪುಟ ವಿಸ್ತರಣೆ ವಿಳಂಬ ಆಗಿದೆ.

ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ಬಳಿಕ ತನ್ನ ಹರಿಕೆ ತೀರಿಸಿಕೊಳ್ಳಲು ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಪುನಸ್ಕಾರಗಳನ್ನು ಮಾಡಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಸಂಪುಟ ವಿಸ್ತರಣೆ ಬಗ್ಗೆಯೂ ಒಂದು ಸುತ್ತಿನ ಮಾತುಕತೆ ನಡೆಸಿದ್ದಾರೆ. ಆದರೆ ಅವರು ಕೇಂದ್ರ ಕಾಂಗ್ರೆಸ್ ನಾಯಕರಿಗೆ ಒಪ್ಪಿಸಿದ ಪಟ್ಟಿಯಂತೆ ಮುಂದುವರಿಯಲು ಅವರಿಗೆ ಹಸಿರು ನಿಶಾನೆ ಸಿಕ್ಕಿಲ್ಲ. ಸಿಕ್ಕಿದ್ದರೆ ಜೂನ್ 20ರ ಮೊದಲೇ ಪೂರ್ಣ ಪ್ರಮಾಣದ ಸಂಪುಟ ವಿಸ್ತರಣೆ ಮಾಡಿ ಖಾತೆಗಳ ಹಂಚಿಕೆ ಮಾಡಿ ಸಚಿವರನ್ನೆಲ್ಲ ಸರಕಾರದ ಕೆಲಸಗಳಿಗೆ ಇಳಿಸಿ ಉಳಿದ ಶಾಸಕರಿಗೆ ನಿಗಮ ಮಂಡಳಿಗಳ ಮತ್ತು ಪಕ್ಷದ ಜವಾಬ್ದಾರಿ ವಹಿಸಿ ಮುಂದಿನ ವಿಧಾನಸಭಾ ಚುನಾವಣೆಗೆ ಪೂರ್ಣ ತಯಾರಿ ನಡೆಸುವುದು ಶಿವಕುಮಾರ್ ಚಿಂತನೆ ಆಗಿತ್ತು. ಸಿದ್ದರಾಮಯ್ಯ ಅವರಿಂದ ಅಧಿಕಾರವನ್ನು ವಹಿಸಿಕೊಳ್ಳುವುದು ಕಠಿಣ ಎಂದು ನಿರೀಕ್ಷೆ ಮಾಡಿದ್ದ ಡಿಕೆಶಿಗೆ ಅಧಿಕಾರ ಸ್ವೀಕಾರ ಸುಲಭವಾಗಿತ್ತು. ಆದರೆ ಸಂಪುಟ ವಿಸ್ತರಣೆ ಮಾತ್ರ ಶಿವಕುಮಾರ್ ಅವರು ನಿರೀಕ್ಷೆ ಮಾಡಿರುವಷ್ಟು ಸುಲಭವಾಗಿ ಆಗುವುದಿಲ್ಲ. ಹಾಗೆ ಆಗುತ್ತಿದ್ದರೆ ಇದರ ಮೊದಲು ಸಂಪುಟ ವಿಸ್ತರಣೆ ಮುಗಿಯುತ್ತಿತ್ತು.

ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಖಾತೆ ಹಂಚಿದ ವಿಚಾರದಲ್ಲೇ ಹಲವು ಸಚಿವರು ಅತೃಪ್ತರಾಗಿದ್ದರು. ಹಿರಿಯ ಸಚಿವ ರಾಮಲಿಂಗಾ ರೆಡ್ಡಿ ಅವರು ತನಗೆ ಬೆಂಗಳೂರು ನಗರ ಅಭಿವೃದ್ಧಿ ಖಾತೆ ನೀಡಿಲ್ಲ ಎಂದು ಸಚಿವ ಸ್ಥಾನಕ್ಕೇ ರಾಜೀನಾಮೆ ನೀಡಿದ್ದರು. ಮತ್ತೊಂದೆಡೆ ಕೃಷ್ಣ ಬೈರೇಗೌಡ ಅವರೂ ತನಗೆ ಅರ್ಧಂಬರ್ಧ ಖಾತೆ ನೀಡಲಾಗಿದೆ ಎಂದು ಮುನಿಸಿಕೊಂಡು ಖಾತೆ ವಹಿಸಿಕೊಳ್ಳದೆ ಕೆಲದಿನ ಮೌನವಾಗಿ ಕುಳಿತಿದ್ದರು.

ಹಿರಿಯ ದಲಿತ ಕಾಂಗ್ರೆಸ್ ನಾಯಕ ಮುನಿಯಪ್ಪ ಅವರಂತೂ ಅವರಿಗೆ ಹಿಂದಿನ ಆಹಾರ ಮತ್ತು ನಾಗರಿಕ ಸರಬರಾಜು ಖಾತೆಯನ್ನೇ ನೀಡಿದ್ದರೂ ತನಗೆ ನೀಡಿದ ಖಾತೆ ಕಡಿಮೆ ಮೌಲ್ಯ ಹೊಂದಿದೆ ಮತ್ತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಪಕ್ಷದ ತಾಯಿ ಸ್ಥಾನದಲ್ಲಿ ಇದ್ದು ಎಲ್ಲರನ್ನೂ ಸಮಾನರಾಗಿ ನೋಡಿಕೊಂಡಿಲ್ಲ ಎಂದು ಬಹಿರಂಗವಾಗಿ ಹೇಳಿಕೊಂಡಿದ್ದಾರೆ. ಖಾತೆ ಹಂಚಿಕೆ ವಿಚಾರದಲ್ಲಿ ಎದ್ದಿದ್ದ ಅಸಮಾಧಾನವನ್ನು ಶಿವಕುಮಾರ್, ಸಿದ್ದರಾಮಯ್ಯ ಮತ್ತು ಖರ್ಗೆ ಅವರು ನಿವಾರಣೆ ಮಾಡಲು ಭಾಗಶಃ ಯಶಸ್ವಿ ಆಗಿದ್ದರೂ ಸಂಪುಟ ವಿಸ್ತರಣೆ ವಿಚಾರದಲ್ಲಿ ಇನ್ನೂ ಇತ್ಯರ್ಥಕ್ಕೆ ಬರಲಾರದ ಸಂಕಷ್ಟದಲ್ಲಿ ಸಿಲುಕಿದ್ದಾರೆ ಎನ್ನುವುದು ವಾಸ್ತವವಾಗಿದೆ.

ಶಿವಕುಮಾರ್ ಅವರಿಗೆ ಸಂಪುಟ ವಿಸ್ತರಣೆಗೆ ಯಾರೂ ಒತ್ತಡ ಹಾಕಬಾರದು ಎಂಬ ಸೂಚನೆಯನ್ನು ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಶಾಸಕರಿಗೆ ಇತ್ತೀಚೆಗೆ ಕಿವಿ ಮಾತು ಹೇಳಿದ್ದಾರೆ ಎಂಬ ಸುದ್ದಿಯಿದೆ. ಸಚಿವ ಸ್ಥಾನಕ್ಕಾಗಿ ಯಾರೂ ಅತಿಯಾದ ಬೇಡಿಕೆ ಇಡದೆ ಸಂಪುಟ ವಿಸ್ತರಣೆಗೆ ಸಹಕರಿಸಬೇಕು ಎಂದು ಖರ್ಗೆ ಅವರು ಶಾಸಕರಿಗೆ ಅದರಲ್ಲೂ ಹಿರಿಯ ಎಂಎಲ್‌ಎಗಳಿಗೆ ಸಲಹೆ ಮಾಡಿದ್ದು, ಶಿವಕುಮಾರ್ ಅವರು ಸಂಪುಟಕ್ಕೆ ಹೊಸವರನ್ನು ಸೇರಿಸಿಕೊಂಡು ಪಕ್ಷದಲ್ಲಿ ಯುವಕರು ಮತ್ತು ಹೊಸ ನಾಯಕರನ್ನು ಉತ್ತೇಜಿಸುವ ಮೂಲಕ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಿ ಮುಂಬರುವ ವಿಧಾನಸಭಾ ಚುನಾವಣಾ ಸಿದ್ಧತೆಗೆ ಬೆಂಬಲವಾಗಿ ನಿಲ್ಲಬೇಕು ಎಂದು ಸೂಚನೆ ನೀಡಿದ್ದಾರೆ.

ಆದರೆ ಬಿ. ಕೆ. ಹರಿಪ್ರಸಾದ್ ಅವರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಕಾರ್ಯಕರ್ತರು ಶಿವಕುಮಾರ್ ಪರವಾಗಿ ಘೋಷಣೆ ಹಾಕಿದಾಗ ಖರ್ಗೆ ಕೆರಳಿದ್ದು ಶಿವಕುಮಾರ್ ಮತ್ತು ಅವರ ಬೆಂಬಲಿಗರಲ್ಲಿ ಅಸಮಾಧಾನಕ್ಕೆ ಕಾರಣವಾಗಿದ್ದು, ಶಿವಕುಮಾರ್ ಅವರ ಸಂಪುಟ ವಿಸ್ತರಣೆ ಮತ್ತಷ್ಟು ವಿಳಂಬಕ್ಕೆ ಕಾರಣವಾದರೆ ಆಶ್ಚರ್ಯವಿಲ್ಲ.

ಸುಡೊಕು 1836

5	9			3			8	7
8	7		1		5			
		2			9			4
	6				2		3	5
3	8		4	1	7		2	9
2	4		6				1	
7			3			8		
			5		8		7	3
9	3			2			6	1

MANGAL SENACHA, BANGALORE

1ರಿಂದ 9 ರ ನರೆಗಿನ ಸಂಖ್ಯೆಗಳನ್ನು ಪ್ರತಿ 3-3 ಬಾಕ್ಸ್‌ಗೂ ತುಂಬಿ. ಪ್ರತಿ ಉದ್ದ ಹಾಗೂ ಸಾಲಿನಲ್ಲೂ 1-9 ಅಂಕಿಗಳಿರಬೇಕು.

ಸುಡೊಕು 1835

7	4	8	3	9	2	1	5	6
2	6	9	5	7	1	8	4	3
3	1	5	4	8	6	7	2	9
5	7	4	8	6	9	3	1	2
8	9	1	2	3	4	6	7	5
6	3	2	1	5	7	4	9	8
4	8	7	6	2	5	9	3	1
9	2	6	7	1	3	5	8	4
1	5	3	9	4	8	2	6	7

ಪದಬಂಧ - 1918

ಎಡದಿಂದ ಬಲಕ್ಕೆ

1.ಎಲ್ಲರಿಂದ ಪಡೆದ ಸಾಲ-4
3.ಊರಲ್ಲಿ ಸಿಕ್ಕುವ ಕಟ್ಟಿಗೆ ಸೌದೆ-4
5.ಸಂಗೀತಕ್ಕೆ ಮೊದಲು ಅವಳು ಮಾಡಿದ ಸ್ವರದ ವಿಸ್ತರಣೆ-3
6.ನಿಗದಿತ ಸಮಯಕ್ಕೆ ಗುರಿಯ ಗಡಿ ಮುಟ್ಟಲು ಇದು ಬೇಕು-4
7.ಸಮರದಲ್ಲಿ ಕಂಡ ವೃಕ್ಷ-2
8.ಸತಿಯ ಜೊತೆಗೆ ಇನ್ನೊಬ್ಬ ಪತ್ನಿ-3
10.ಕುಡಿ ಚಿಗುರೊಡೆದಿದೆ -3
13.ಹಸುವಿನಿಂದ ಬಂದ ಹದ -3
15.ಸಮವಾಗಿಲ್ಲ, ವ್ಯತ್ಯಾಸವಾಗಿದೆ-3
17.ಏನು ಎಂದಾಗ ತಲೆಯ ಕೂದಲಿಗೆ ಹತ್ತುವ ಕ್ರಿಮಿ ನೆನಪಾಯಿತು-2
18.ಬಾನಿನಲ್ಲಿ ಸೂರ್ಯನ ಚಿತ್ರ-16ನೇ ಸಂವತ್ಸರ -4
19.ಚೆನ್ನಾಗಿ ಕಡೆಯಲ್ಪಟ್ಟದ್ದು-3
20.ನವ ಬಣ್ಣಗಳಲ್ಲಿ ಹೊಳೆಯುತ್ತಿರುವ ದೇವಾಲಯದ ಸಭಾಮಂಟಪ -4
21.ಜಗತ್ತಿಗೇ ಸಂಬಂಧ ಸಿದ್ದು-4

ಮೇಲಿನಿಂದ ಕೆಳಕ್ಕೆ

2.ಅವಳ ರಸಭರಿತ ಅಡುಗೆ -5
3.ದೇವರ ಹೆಸರಿನಲ್ಲಿ ಒಂದು ಹೊತ್ತು ಊಟ ಬಿಡುವುದು-4
4.ಈ ಇಳೆಯನ್ನು ವಶಪಡಿಸಿಕೊಳ್ಳಲು ಏನೆಲ್ಲಾ ಮಾಡುತ್ತಾರೆ. -4
5.ಪೊಲೀಸನೇಕೋ ಕನ್ನಡದಲ್ಲಿ ರಕ್ಷಣೆ ಮಾಡದಾಗ ಕಾಣುತ್ತಾನೆ -4
9.ವರ ಕೊಟ್ಟ ಹಂದಿ -3
11.ಆಲಸ್ಯ ಇದ್ದು ಆಗದ ಕಾರ್ಯ -3
12.ಉಚಿತ ಸಿಕ್ಕಿದ್ದು ಸರಿಯಲ್ಲ -3
14.ಇದು ಸಹ ಅನುಕಂಪವೇ -4
15.ಇಂದ್ರೀಯಗಳ ಮೂಲಕ ಬರುವ ಜ್ಞಾನ -4
16.ಸ್ವಂತ ಮಗನಲ್ಲ, ಸವತಿಯ ಮಗ-4

ಉತ್ತರ - 1917

ನಿತ್ಯ ಚಿಂತನ

ಮನುಷ್ಯನ ಜೀವನದಲ್ಲಿ ಸಹನೆ, ಪ್ರೀತಿ ಮತ್ತು ವ್ಯಕ್ತಿತ್ವ ಇವು ಮೂರು ಬಹಳ ಅಮೂಲ್ಯವಾದುದಾಗಿದೆ. ಇಲ್ಲಿ ಸಹನೆ ಅಂದರೆ ಒಬ್ಬರನ್ನು ದಂಡಿಸುವ ಅವಕಾಶ ಬೇಕಾದಷ್ಟು ಇದ್ದರೂ ದಂಡಿಸದೆ ಇರುವುದನ್ನು ಸಹನೆ ಎಂದೆನ್ನಬಹುದು. ಒಬ್ಬರನ್ನು ಬಿಟ್ಟು ಹೋಗುವುದಕ್ಕೆ ಬಹಳಷ್ಟು ಅವಕಾಶಗಳಿದ್ದರೂ, ಕಾರಣಗಳಿದ್ದರೂ ಜೊತೆಯಾಗಿರುತ್ತಾರಲ್ಲ ಅದನ್ನು ಪ್ರೀತಿ ಎನ್ನಬಹುದು. ಹಾಗೇ ತಪ್ಪು ಮಾಡುವುದಕ್ಕೆ ಬೇಗಾದಷ್ಟು ಅವಕಾಶ ಅಥವಾ ಮಾರ್ಗಗಳಿದ್ದರೂ ಯಾವ ತಪ್ಪನ್ನು ಮಾಡದೆ ಇರುತ್ತಾರಲ್ಲ ಅದನ್ನು ವ್ಯಕ್ತಿತ್ವ ಎಂದೆನ್ನಬಹುದು. ಆದ್ದರಿಂದ ಹಣ ಇದ್ದರೆ ಶತ್ರುವೂ ಕೂಡಾ ಮಿತ್ರನಾಗುವ ಅಥವಾ ಸ್ನೇಹಿತನಾಗುವ, ಕೊಟ್ಟ ಸಾಲವನ್ನು ಮರಳಿ ಕೇಳಿದರೆ ಆಪ್ತ ಸ್ನೇಹಿತನೂ ಕೂಡ ಬದ್ಧ ವೈರಿ ಅಥವಾ ಶತ್ರುವಾಗುವ, ನೋವು ನಮಗಾದರೆ ಮಾತ್ರ ನೋವು ಇತರರಿಗೆ ಆದರೆ ಅದು ಅವರ ಹಣೆಬರಹ ಎಂದು ವರ್ತಿಸುವ, ಅವಶ್ಯಕತೆ ಇದ್ದಾಗ ಜೇನು ತುಪ್ಪದ ತರ ಸಿಹಿಯಾಗಿ ಮಾತನಾಡುವ, ಅವಶ್ಯಕತೆ ಮುಗಿದ ಮೇಲೆ ಚೇಳಿನಂತೆ ಚುಚ್ಚಿ, ಚುಚ್ಚಿ ಮಾತನಾಡುವ ಜನಗಳ ಮಧ್ಯೆ ವಾಸಿಸುತ್ತಿರುವ ಇಂದಿನ ಈ ಕಾಲಘಟ್ಟದಲ್ಲೂ ನಾವು ಸಹನೆ, ಪ್ರೀತಿ, ವ್ಯಕ್ತಿತ್ವ ಕಾಯ್ದಿರಿಸಿ ಕೊಂಡು ಬದುಕಿನಲ್ಲಿ ಮುನ್ನಡೆಯಲು ಪ್ರಯತ್ನಿಸುವ ಅಗತ್ಯವಿದೆ. ಅಳಿಸಲಾಗದ ಚಿತ್ರ ಯಾವುದು ಅಂದರೆ ಅದು ಪ್ರಕೃತಿ, ಕದಿಯಲಾಗದ ವಸ್ತು ಯಾವುದು ಅಂದರೆ ಅದು ನಾವು ಕಲಿತಿರುವ ವಿದ್ಯೆ, ನಮ್ಮನ್ನು ಸೋಲಿಸಲಾಗದ ಶಕ್ತಿ ಯಾವುದು ಅಂದರೆ ಅದು ನಮ್ಮೊಳಗೆ ಮೈಗೂಡಿಕೊಂಡಿರವ ಸತ್ಯ, ಬಿಡಿಸಲಾಗದ ಬಂಧ ಯಾವುದು ಅಂದರೆ ಅದೇ ನಾವು ತೋರಿಸುವ ಪ್ರೇಮ ಅಥವಾ ಪ್ರೀತಿ, ಮರೆಯಲಾಗದ ನೆನಪು ಯಾವುದು ಅಂದರೆ ಅದು ಸ್ನೇಹ ಎಂಬುವುದನ್ನು ಅರಿತು ಬಾಳುವ ಅಗತ್ಯವಿದೆ. ಎಲ್ಲದಕ್ಕೂ ಒಂದಲ್ಲ ಒಂದು ದಿನ ಸಮಯ ಉತ್ತರ ಕೊಟ್ಟೆ ಕೊಡುತ್ತದೆ. ನಾವು ಸಹನೆಯನ್ನು ಕಳೆದು ಕೊಳ್ಳದೆ, ಪ್ರೀತಿಯನ್ನು ಮರೆಮಾಚದೆ, ವ್ಯಕ್ತಿತ್ವವನ್ನು ಬದಲಾಯಿಸದೆ ಜೀವನದ ಹಾದಿಯಲ್ಲಿ ಮುನ್ನಡೆಯಲು ಪ್ರಯತ್ನಿಸುವ ಅಗತ್ಯವಿದೆ.

- ಶ್ರೀಧರ್ ಉಚ್ಚಿಲ್ (99303 70553)

ಉದ್ಧವ್,ಆದಿತ್ಯ ಠಾಕ್ರೆ ತಮ್ಮದೇ ಶಾಸಕರು,ಸಂಸದರೊಂದಿಗೆ ಸಂಪರ್ಕದಲ್ಲಿಲ್ಲ; ಶಿವಸೇನೆ ಸಂಸದೆ ಜ್ಯೋತಿ ವಾಘ್ಮರೆ ಟೀಕೆ

ಪುಣೆ,ಜೂ.27 - ಶಿವಸೇನೆ (ಯುಬಿಟಿ) ನಾಯಕತ್ವದ ಮೇಲೆ ತೀಕ್ಷ್ಣ ಟೀಕಾದಾಳಿ ನಡೆಸಿದ ಶಿವಸೇನೆಯ ರಾಜ್ಯಸಭಾ ಸಂಸದೆ ಜ್ಯೋತಿ ವಾಘ್ಮರೆ ಅವರು,ಆ ಪಕ್ಷದೊಳಗಿನ ಬಂಡಾಯವು ಉದ್ಧವ್ ಠಾಕ್ರೆ ಮತ್ತು ಆದಿತ್ಯ ಠಾಕ್ರೆ ತಮ್ಮದೇ ಶಾಸಕರೊಂದಿಗೆ 'ಸಂಪರ್ಕದಿಂದ ದೂರ' ಇರುವುದರ ನೇರ ಪರಿಣಾಮವಾಗಿದೆ ಎಂದು ಹೇಳಿದ್ದಾರೆ.

'ಆಪರೇಷನ್ ಟೈಗರ್' ಬಗ್ಗೆ ಸುದ್ದಿಸಂಸ್ಥೆ ಜೊತೆ ಮಾತನಾಡಿದ ವಾಘ್ಮರೆ, ತಂದೆ-ಮಗ ಜೋಡಿ ಸಾರ್ವಜನಿಕರು ಮತ್ತು ಅವರ ಪಕ್ಷದ ಸದಸ್ಯರನ್ನು ನಿರ್ಲಕ್ಷಿಸಿ ತಮ್ಮ 'ದಂತ ಕೋಟೆಗಳಿಗೆ' ಸೀಮಿತವಾಗಿದೆ ಎಂದು ಆರೋಪಿಸಿದರು.

'ಏನಾಗುತ್ತದೆ ಅಥವಾ ಯಾರೊಂದಿಗೆ ಸಂಪರ್ಕದಲ್ಲಿದ್ದಾರೆಂದು ನಮಗೆ ನಿಖರವಾಗಿ ತಿಳಿದಿಲ್ಲ, ಆದರೆ ಉದ್ಧವ್ ಠಾಕ್ರೆ ಮತ್ತು ಆದಿತ್ಯ ಠಾಕ್ರೆ ತಮ್ಮದೇ ಶಾಸಕರು ಮತ್ತು ಸಂಸದರೊಂದಿಗೆ ಸಂಪರ್ಕದಲ್ಲಿಲ್ಲ ಎಂದು ನಮಗೆ ತಿಳಿದಿದೆ. ಅದಕ್ಕಾಗಿಯೇ ನೀವು ಅವರ ಪಕ್ಷದೊಳಗೆ ದಂಗೆಯನ್ನು ನೋಡುತ್ತಿದ್ದೀರಿ' ಎಂದು ವಾಘ್ಮರೆ ಹೇಳಿದರು.

ಠಾಕ್ರೆ ಜೋಡಿಯ ಭೇಟಿಗೆ ಮಹಾರಾಷ್ಟ್ರದ ಸಾಮಾನ್ಯ ಜನರಿಗೆ ಅವಕಾಶವಿರುವುದಿಲ್ಲ ಎಂದು ಸಂಸದೆ ಆರೋಪಿಸಿದರು. ಈ ಜನರು ಸಾರ್ವಜನಿಕರನ್ನು ಭೇಟಿಯಾಗುವುದಿಲ್ಲ... ಅವರು ತಮ್ಮದೇ ಆದ ದಂತದ ಕೋಟೆಗಳಲ್ಲಿ ವಾಸಿಸುತ್ತಾರೆ. ಅವರು ಬಡವರ ಬಗ್ಗೆ ಅಥವಾ ಮಹಾರಾಷ್ಟ್ರದ ಬಗ್ಗೆ ಕಾಳಜಿ ವಹಿಸುವುದಿಲ್ಲ. ಅವರು ತಮ್ಮ ವಂಶಪಾರಂಪರ್ಯ ರಾಜಕೀಯದ ಬಗ್ಗೆ ಮಾತ್ರ ಕಾಳಜಿ ವಹಿಸುತ್ತಾರೆ' ಎಂದು ಅವರು ಹೇಳಿದರು. ಗೊಂದಲದ ನಡುವೆ ವಾಘ್ಮರೆ ಕೇವಲ ಒಂದು ದಿನದ ಹಿಂದೆ ಠಾಕ್ರೆಸೇನಾ ಸಂಸದ ಸಂಜಯ್ ರಾವುತ್ ವಿರುದ್ಧ ರಾಷ್ಟ್ರೀಯ ಮಹಿಳಾ ಆಯೋಗವನ್ನು (ಎನ್‌ಸಿಡಬ್ಲ್ಯೂ) ಸಂಪರ್ಕಿಸಿ,ರಾವುತ್ ನಿರಂತರವಾಗಿ ನಿಂದನೀಯ ಭಾಷೆ, ಅಶ್ಲೀಲ ಅಶ್ಲೀಲತೆ ಮತ್ತು ಮಹಿಳಾ ಪ್ರತಿನಿಧಿಗಳನ್ನು ಸಾರ್ವಜನಿಕವಾಗಿ ಅವಮಾನಿಸಿದ್ದಾರೆ ಎಂದು ಆರೋಪಿಸಿದ್ದರು.

ಸಂಜಯ್ ರಾವುತ್ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸುವಂತೆ ಆಕೆ ಕೋರಿದ್ದರು.

ಗುರುವಾರ ದಿಲ್ಲಿಯಲ್ಲಿರುವ ಎನ್‌ಸಿಡಬ್ಲ್ಯೂ ಅಧ್ಯಕ್ಷರಿಗೆ ಇಮೇಲ್ ಮೂಲಕ ಕಳುಹಿಸಲಾದ ಅಧಿಕೃತ ದೂರಿನ ಎಕ್ಸ್ ಪೋಸ್ಟ್‌ನ್ನು ಹಂಚಿಕೊಂಡ ವಾಘ್ಮರೆ, ಕಳೆದ ನಾಲ್ಕು ವರ್ಷಗಳಿಂದ ರಾವುತ್ ಅವರ ಹೇಳಿಕೆಗಳು ಮತ್ತು ನಡವಳಿಕೆಯು ಮಹಿಳೆಯರನ್ನು ಸಾರ್ವಜನಿಕವಾಗಿ ಅವಮಾನಿಸಿದಂತೆ ಮತ್ತು ತಕ್ಷಣದ ಕಾನೂನು ಕ್ರಮ ಕೈಗೊಳ್ಳುವಂತೆ ಆರೋಪಿಸಿದ್ದಾರೆ.

ಸಂಜಯ್ ರಾವುತ್ ಅವರು ನಿರಂತರವಾಗಿ ನಿಂದನೀಯ ಭಾಷೆ, ಅಶ್ಲೀಲ ಅಶ್ಲೀಲತೆ ಮತ್ತು ಮಹಿಳಾ ಪ್ರತಿನಿಧಿಗಳನ್ನು ಸಾರ್ವಜನಿಕವಾಗಿ ಅವಮಾನಿಸುತ್ತಿದ್ದಾರೆ ಎಂದು ಆರೋಪಿಸಿ ಮಹಿಳಾ ಆಯೋಗಕ್ಕೆ ಅಧಿಕೃತ ದೂರು ನೀಡಿರುವುದಾಗಿ ಶಿವಸೇನಾ ರಾಜ್ಯಸಭಾ ಸಂಸದೆ ಹೇಳಿದರು.

ರಾವುತ್ ಅವರ ಆಪಾದಿತ ಹೇಳಿಕೆಗಳು ಮಹಾರಾಷ್ಟ್ರದ ರಾಜಕೀಯ ಸಂಸ್ಕೃತಿಯ ಮೇಲೆ ಬೀರುವ ಪರಿಣಾಮದ ಬಗ್ಗೆ ಆಕೆ ಕಳವಳ ವ್ಯಕ್ತಪಡಿಸಿದ್ದಾರೆ. ಮಹಾರಾಷ್ಟ್ರವು ಸುಸಂಸ್ಕೃತ ಮತ್ತು ಸೈದ್ಧಾಂತಿಕ ರಾಜಕೀಯದ ದೊಡ್ಡ ಸಂಪ್ರದಾಯವನ್ನು ಹೊಂದಿದೆ, ಆದರೆ ಸಂಸದ ಸಂಜಯ್ ರಾವುತ್ ಅವರ ಅತ್ಯಂತ ಕೆಳಮಟ್ಟದ ಹೇಳಿಕೆ ಗಳಿಂದಾಗಿ, ಈ ಸಂಪ್ರದಾಯವು ದೊಡ್ಡ ಹೊಡೆತವನ್ನು ಅನುಭವಿಸುತ್ತಿದೆ ಎಂದು ಅವರು ದೂರಿ ನಲ್ಲಿ ತಿಳಿಸಿದ್ದಾರೆ. ಈ ವಿಷಯವನ್ನು ಗಮನದಲ್ಲಿಟ್ಟು ಕೊಂಡು ರಾವುತ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಾಘ್ಮರೆ ರಾಷ್ಟ್ರೀಯ ಮಹಿಳಾ ಆಯೋಗವನ್ನು ಒತ್ತಾಯಿಸಿದರು.

'ಆಪರೇಷನ್ ಟೈಗರ್' ಬಳಿಕ ಈಗ 'ಆಪರೇಷನ್ ತುತ್ತೂರಿ?'; ಶರದ್ ಪವಾರ್ ಪಕ್ಷದ ಸಂಸದನಿಂದ ಫಡ್ನವೀಸ್ ಭೇಟಿ

ಮುಂಬಯಿ,ಜೂ.27 - ರಾಜ್ಯದಲ್ಲಿ 'ಆಪರೇಷನ್ ಟೈಗರ್' ಮೂಲಕ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ) ಯ 6 ಸಂಸದರು ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರ ಸಮ್ಮುಖದಲ್ಲಿ ಶಿವಸೇನೆ ಸೇರಿದ ಬಳಿಕ ಇದೀಗ 'ಆಪರೇಷನ್ ತುತ್ತೂರಿ' ಕುರಿತು ಚರ್ಚೆಗಳು ಆರಂಭವಾಗಿವೆ.

ಬೀಡ್‌ನ ಶರದ್ ಪವಾರ್‌ನ ನೇತೃತ್ವದ ಎನ್‌ಸಿಪಿ (ಎಸ್‌ಪಿ) ಸಂಸದ ಬಜರಂಗ್ ಸೋನಾವಣೆ ಅವರು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರನ್ನು ಭೇಟಿಯಾದ ಬಳಿಕ ಈ ಚರ್ಚೆ ತೀವ್ರಗೊಂಡಿದೆ. ಈಗ ಈ ಬಗ್ಗೆ ಎನ್‌ಸಿಪಿ (ಎಸ್‌ಪಿ) ನಾಯಕ ಹಾಗೂ ಶಾಸಕ ರೋಹಿತ್ ಪವಾರ್ ಅವರು ಪ್ರತಿಕ್ರಿಯಿಸಿ, ನಮ್ಮಿಂದ ಮತ್ತು ಸಮಾಜವಾದಿ ಪಕ್ಷದಿಂದ ಒಬ್ಬನೇ ಒಬ್ಬ ಸಂಸದರು ವಿಭಜನೆಯಾಗುವುದಿಲ್ಲ ಎಂದು ಹೇಳಿದ್ದಾರೆ. ಸಂಸದರನ್ನು ವಿಭಜಿಸಲು ಅವರನ್ನು ಗುರಿಯಾಗಿಸಲಾಗುತ್ತದೆ. ಆದರೆ ನಮ್ಮ ಎನ್‌ಸಿಪಿ (ಎಸ್‌ಪಿ) ಮತ್ತು ಸಮಾಜವಾದಿ ಪಕ್ಷದ ಸಂಸದರು ವಿಭಜನೆಯಾಗುವುದಿಲ್ಲ. ಕ್ಷೇತ್ರ ಪುನರ್ವಿಂಗಡಣೆಗೆ ಬಿಜೆಪಿಗೆ ಇನ್ನೂ 41 ಸಂಸದರು ಬೇಕಾಗಿದ್ದಾರೆ, ಆದರೆ ಅಂತದ್ದೇನೂ ಆಗುವುದಿಲ್ಲ. ಸಂಸದ ಬಜರಂಗ್ ಸೋನಾವಣೆ ಅವರು ಫಡ್ನವೀಸ್ ಅವರನ್ನು ಭೇಟಿ ಮಾಡಿರಬಹುದು.ತಮ್ಮ ಮಗನ ಮೇಲಿನ ಆರೋಪಗಳಿಂದಾಗಿ ಅವರು ರಾಜ್ಯದ ಗೃಹ ಸಚಿವ ಹುದ್ದೆ ಹೊಂದಿರುವ ಮುಖ್ಯಮಂತ್ರಿಯನ್ನು ಭೇಟಿಯಾಗಿರಬಹುದು. ಕೇಂದ್ರದಲ್ಲಿ ಗೃಹ ಸಚಿವ ಹುದ್ದೆ ಅಮಿತ್ ಶಾಹ ಅವರ ಬಳಿ ಇದೆ ಎಂದು ರೋಹಿತ್ ಪವಾರ್ ಹೇಳಿದರು.

ರೈತರ ಸಾಲ ಮನ್ನಾ ವಿಷಯದ ಬಗ್ಗೆ ಜಾಗೃತಿ ಮೂಡಿಸಲು ಪ್ರಸ್ತುತ ಬೀಡ್ ಜಿಲ್ಲೆಯ ಪ್ರವಾಸದಲ್ಲಿರುವ ಶಾಸಕ ರೋಹಿತ್ ಪವಾರ್ ಅವರು ಮಾಧ್ಯಮಗಳೊಂದಿಗೆ ಮಾತನಾಡಿ,ಆಪರೇಷನ್ ತುತ್ತೂರಿಯಂತಹ ಏನೂ ಕೂಡ ರಾಜ್ಯದಲ್ಲಿ ನಡೆಯುವುದಿಲ್ಲ ಎಂದು ತಿಳಿಸಿದರು. ಶರದ್ ಪವಾರ್ ಪಕ್ಷದಲ್ಲಿ ಒಟ್ಟು 9 ಸಂಸದರಿದ್ದು, ಅವರಲ್ಲಿ 8 ಮಂದಿ ಲೋಕಸಭಾ ಸದಸ್ಯರು ಮತ್ತು ಒಬ್ಬರು ರಾಜ್ಯಸಭಾ ಸದಸ್ಯರು. ಸುಪ್ರಿಯಾ ಸುಳೆ (ಬಾರಾಮತಿ), ಅಮೋಲ್ ಕೋಲ್ಹೆ (ಶಿರೂರು), ಧೈರ್ಯಶೀಲ್ ಮೋಹಿತೆ-ಪಾಟೀಲ್ (ಮಾಢಾ), ಅಮರ್‌ಕಾಳೆ (ವಾರ್ಧಾ), ಬಜರಂಗ್ ಸೋನಾವಣೆ (ಬೀಡ್), ನೀಲೇಶ್ ಲಂಕಾ (ಅಹಲ್ಯಾನಗರ), ಭಾಸ್ಕರ್‌ಭಾಗೆ (ದಿಂಡೋರಿ) ಮತ್ತು ಸುರೇಶ್ ಮ್ಹಾತ್ರೆ (ಭಿವಂಡಿ) ಅವರು ಈ ಪಕ್ಷದ ಲೋಕಸಭೆ ಸಂಸದರಾಗಿದ್ದಾರೆ.

ಅಂಧೇರಿ: ತೆರೆದ ಚರಂಡಿಗೆ ಬಿದ್ದು ವ್ಯಕ್ತಿ ಸಾವು

ಮುಂಬಯಿ, ಜೂ.27 - ಉಪನಗರ ಅಂಧೇರಿ ಪಶ್ಚಿಮ ಪ್ರದೇಶದಲ್ಲಿ ಶನಿವಾರ 24 ವರ್ಷದ ವ್ಯಕ್ತಿಯೊಬ್ಬರು ತೆರೆದ ಚರಂಡಿಗೆ ಬಿದ್ದು ಸಾವನ್ನಪ್ಪಿದ್ದಾಗಿ ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಜುಹೂವಿನ ಜೆವಿಪಿಡಿ ಸ್ಕೀಮ್ ಪ್ರದೇಶದ ವಿಪಿ ಮಾರ್ಗ್ ಬಳಿ ಮಧ್ಯಾಹ್ನದ ಸುಮಾರಿಗೆ ಈ ಘಟನೆ ಸಂಭವಿಸಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಅಗ್ನಿಶಾಮಕ ದಳದ ತಂಡ ಆ ವ್ಯಕ್ತಿಯನ್ನು ಚರಂಡಿಯಿಂದ ಹೊರತೆಗೆದಿದ್ದು, ನಿಹಾಲ್ ನಜೀಮ್ ಮಿರ್ಜಾ (24) ಎಂದು ಗುರುತಿಸಲಾದ ಬಲಿಪಶುವನ್ನು ಖಾಸಗಿ ಆಂಬ್ಯುಲೆನ್ಸ್‌ನಲ್ಲಿ ಪಾಲಿಕೆ ಸ್ವಾಮ್ಯದ ಕೂಪರ್ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ವೈದ್ಯರು ಆತ ಆಗಲೇ ಮೃತಪಟ್ಟಿರುವರಾಗಿ ಘೋಷಿಸಿದರು ಎಂದು ಅಧಿಕಾರಿ ತಿಳಿಸಿದ್ದಾರೆ.

ಅನಧಿಕೃತ ಟೆಸ್ಟ್ : ಮಿಂಚಿದ ಆಕಿಬ್ ನಬಿ; ಭಾರತ 'ಎ' ತಂಡಕ್ಕೆ 122 ರನ್‌ಗಳ ಮುನ್ನಡೆ



ಗಾಲೆ, ಜೂ.27 - ಗಾಲೆಯಲ್ಲಿ ನಡೆಯುತ್ತಿರುವ ಭಾರತ 'ಎ' ಹಾಗೂ ಶ್ರೀಲಂಕಾ 'ಎ' ತಂಡಗಳ ನಡುವಿನ ಮೊದಲ ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಭಾರತ 'ಎ' ತಂಡ ಮೊದಲ ಇನ್ನಿಂಗ್ಸ್‌ನಲ್ಲಿ 122 ರನ್‌ಗಳ ಮುನ್ನಡೆ ಪಡೆದುಕೊಂಡಿದೆ. ಮೊದಲ ಇನ್ನಿಂಗ್ಸ್‌ನಲ್ಲಿ ಭಾರತ ಎ ತಂಡ 6 ವಿಕೆಟ್‌ಗಳನ್ನು ಕಳೆದುಕೊಂಡು 452 ರನ್ ಕಲೆಹಾಕಿ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತ್ತು. ಈ ಗುರಿ ಬೆನ್ನಟ್ಟಿದ ಆತಿಥೇಯ ಶ್ರೀಲಂಕಾ ತಂಡ 330 ರನ್‌ಗಳಿಗೆ ಆಲೌಟ್ ಆಗಿದೆ. ಈ ಮೂಲಕ ಭಾರತಕ್ಕೆ ಮೊದಲ ಇನ್ನಿಂಗ್ಸ್ ಮುನ್ನಡೆ ಸಿಕ್ಕಿದೆ. ಇನ್ನು ಮೊದಲ ಇನ್ನಿಂಗ್ಸ್‌ನಲ್ಲಿ ಟೀಂ ಇಂಡಿಯಾ ಪರ ಎರಡು ಶತಕ ಹಾಗೂ 1 ಅರ್ಧಶತಕ ದಾಖಲಾದರೆ, ಇತ್ತ ಶ್ರೀಲಂಕಾ ಪರ ಮೂರು ಅರ್ಧಶತಕಗಳು ದಾಖಲಾದವು. ಆದರೆ ಇದರ ಹೊರತಾಗಿಯೂ ಆತಿಥೇಯ ತಂಡಕ್ಕೆ ಮುನ್ನಡೆ ಸಾಧಿಸಲು ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣ ಜಮ್ಮು ಕಾಶ್ಮೀರ ವೇಗಿ ಆಕಿಬ್ ನಬಿ.

452 ರನ್‌ಗಳಿಗೆ ಇನ್ನಿಂಗ್ಸ್ ಡಿಕ್ಲೇರ್ ; ಮೊದಲ ಇನ್ನಿಂಗ್ಸ್‌ನಲ್ಲಿ ಟೀಂ ಇಂಡಿಯಾ ಪರ ಆರಂಭಿಕ ಸಾಯಿ ಸುದರ್ಶನ್ (132) ಹಾಗೂ ನಾಯಕ ಧೃವ್ ಜುರೇಲ್ (141) ಶತಕದ ಇನ್ನಿಂಗ್ಸ್ ಆಡಿದರು. ಉಳಿದಂತೆ ಶೇಕ್ ರಶೀದ್ ಕೂಡ 63 ರನ್‌ಗಳ ಇನ್ನಿಂಗ್ಸ್ ಆಡಿದರು. ಈ ಮೂವರ ಅಮೋಘ ಇನ್ನಿಂಗ್ಸ್‌ನಿಂದಾಗಿ ಟೀಂ ಇಂಡಿಯಾ 452 ರನ್‌ಗಳಿಗೆ ಇನ್ನಿಂಗ್ಸ್ ಡಿಕ್ಲೇರ್‌ಮಾಡಿಕೊಂಡಿತು.

30 ರನ್‌ಗಳಿಗೆ ಐದು ವಿಕೆಟ್.. ಇದಾದ ಬಳಿಕ ಬ್ಯಾಟಿಂಗ್ ಆರಂಭಿಸಿದ ಶ್ರೀಲಂಕಾಗೆ ಉತ್ತಮ ಆರಂಭ ಸಿಗಲಿಲ್ಲ. ಪವಂತ ವೀರಸಿಂಘೆ (11), ನಿರೋಶನ್ ಡಿಕ್ವೆಲ್ಲಾ (10) ಬೇಗನೇ ಔಟಾದರು. ಆ ಬಳಿಕ ಬಂದ ನುವಾನಿಂದು ಫೆರ್ನಾಂಡೊ (84), ಅಶೆನ್ ಬಂಡಾರ (70) ಮತ್ತು ಸಹನ್ ಅರಚ್ಚಿಗೆ (72) ಅರ್ಧಶತಕದ ಇನ್ನಿಂಗ್ಸ್ ಆಡಿದರು. ಉಳಿದಂತೆ ಅಂಜಲ ಬಂಡಾರ (15), ರವಿಂದು ಫೆರ್ನಾಂಡೊ (22), ಕವಿಂದು ಪತಿರತ್ನೆ (3) ಮತ್ತು ಚಮಿಕಾ ಗುಣಶೇಖರ (15) ಹೇಳಿಕೊಳ್ಳುವಂತಹ ಪ್ರದರ್ಶನ ನೀಡಲಿಲ್ಲ. ಹೀಗಾಗಿ ಲಂಕಾ ಎ ತಂಡವು ತನ್ನ ಕೊನೆಯ ಐದು ವಿಕೆಟ್‌ಗಳನ್ನು 30 ರನ್‌ಗಳಿಗೆ ಕಳೆದುಕೊಂಡಿತು.

ಮಿಂಚಿದ ಆಕಿಬ್ ನಬಿ : ಇನ್ನು ಭಾರತ ಎ ಪರ ಬೌಲಿಂಗ್‌ನಲ್ಲಿ ಮಿಂಚಿದ ಆಕಿಬ್ ನಬಿ 19.4 ಓವರ್‌ಗಳಲ್ಲಿ 58 ರನ್‌ಗಳಿಗೆ 4 ವಿಕೆಟ್ ಪಡೆದರೆ, ಯಶ್ ಠಾಕೂರ್‌ಮತ್ತು ಹರ್ಷ್ ದುಬೆ ತಲಾ 2 ವಿಕೆಟ್ ಪಡೆದರು. ಅನ್ಶುಲ್ ಕಾಂಬೋಜ್ ಮತ್ತು ಸರನ್ಶ್ ಜೈನ್ ತಲಾ 1 ವಿಕೆಟ್ ಪಡೆದರು. ಆಕಿಬ್ ನಬಿ ಅಂಜಲಾ ಬಂಡಾರ, ರವಿಂದು ಫೆರ್ನಾಂಡೊ, ಚಾಮಿಕಾ ಗುಣಶೇಖರ ಮತ್ತು ದುಲಾಜ್ ಸಮುದಿತ ಅವರನ್ನು ಔಟ್ ಮಾಡಿದರು.

ಎರಡನೇ ಇನ್ನಿಂಗ್ಸ್ ಆರಂಭಿಸಿರುವ ಭಾರತ ಎ ತಂಡ ಮೂರನೇ ದಿನದಾಟ ಅಂತ್ಯಕ್ಕೆ ವಿಕೆಟ್ ನಷ್ಟವಿಲ್ಲದೆ 40 ರನ್ ಕಲೆ ಹಾಕಿದೆ. ಆಯುಷ್ ಪಾಂಡೆ ಮತ್ತು ದೇವ್ ದತ್ತ್ ಪಡಿಕ್ಕಲ್ ತಲಾ 20 ರನ್ ಗಳಿಸಿ ಅಜೇಯವಾಗಿ ಉಳಿದಿದ್ದಾರೆ.

ಫಿಫಾ ವಿಶ್ವಕಪ್ : ನಾಕೌಟ್ ಪ್ರವೇಶಿಸಿ ಇತಿಹಾಸ ನಿರ್ಮಿಸಿದ ಕೇಪ್ ವರ್ಡೆ



ಅಟ್ಲಾಂಟ(ಅಮೆರಿಕ), ಜೂ. 27 - ಫಿಫಾ ವಿಶ್ವಕಪ್ ನಲ್ಲಿ ಇದೇ ಚೊಚ್ಚಲ ಬಾರಿಗೆ ಆಡುತ್ತಿರುವ ಸಣ್ಣ ದೇಶವಾದ ಕೇಪ್ ವರ್ಡೆ ತನ್ನ ಅಸಾಧಾರಣ ಪ್ರದರ್ಶನದ ಮೂಲಕ ಐತಿಹಾಸಿಕ ಸಾಧನೆ ಮಾಡಿದೆ. ಶನಿವಾರ ನಡೆದ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಸೌದಿ ಅರೇಬಿಯಾ ವಿರುದ್ಧ ಯಾವುದೇ ಗೋಲುಗಳಿಲ್ಲದೇ ಡ್ರಾ ಸಾಧಿಸಿ ನಾಕೌಟ್‌ಗೆ ಲಗ್ಗೆಯಿಟ್ಟಿದೆ.

ಚೊಚ್ಚಲ ಪಂದ್ಯದಲ್ಲೇ ಮಾಜಿ ಚಾಂಪಿಯನ್ ಸ್ಪೇನ್‌ಗೆ ಶಾಕ್ ನೀಡುವ ಮೂಲಕ ಗೋಲು ರಹಿತ(0-0) ಡ್ರಾ ಸಾಧಿಸಿದಗಲೇ ತಂಡದ ಮೇಲೆ ಭಾರೀ ನಿರೀಕ್ಷೆಯೊಂದನ್ನು ಮಾಡಲಾಗಿತ್ತು. ಅದರಂತೆ ಇದೀಗ ನಾಕೌಟ್ ಹಂತಕ್ಕೇರುವ ಮೂಲಕ ತನ್ನ ವಿಶ್ವಕಪ್ ಕನಸನ್ನು ಮುಂದುವರಿಸಿದೆ. ಹೆಚ್ ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯುವ ಮೂಲಕ ಮುಂದಿನ ಹಂತಕ್ಕೇರಿತು. ಸ್ಪೇನ್ ಅಗ್ರಸ್ಥಾನದಲ್ಲಿದೆ. ಕೇವಲ 550,000 ಜನಸಂಖ್ಯೆಯನ್ನು ಹೊಂದಿರುವ ಕೇಪ್ ವರ್ಡೆ, ಫಿಫಾ ವಿಶ್ವಕಪ್‌ನ ನಾಕೌಟ್ ಹಂತಗಳನ್ನು ತಲುಪಿದ ಇತಿಹಾಸದಲ್ಲಿ ಅಧಿಕೃತವಾಗಿ ಅತ್ಯಂತ ಚಿಕ್ಕ ರಾಷ್ಟ್ರವಾಗಿದೆ. ವಿಶ್ವ ರ್‍ಯಾಂಕಿಂಗ್‌ನಲ್ಲಿ 64ನೇ ಸ್ಥಾನದಲ್ಲಿರುವ ಕೇಪ್ ವರ್ಡೆ ತಂಡದಿಂದ ಈ ರೀತಿ ಪ್ರದರ್ಶನ ಬಹುತೇಕರು ಊಹಿಸಿರಲಿಲ್ಲ. ಆದರೆ ಪಂದ್ಯದ ಆರಂಭದಿಂದಲೂ ಸೌಧಿಗೆ ಗೋಲು ಗಳಿಕೆಯ ಎಲ್ಲಾ ಹಾದಿಯನ್ನು ಕೇಪ್ ವರ್ಡೆ ಡಿಫೆಂಡರ್‌ಗಳು ಬಂದ್ ಮಾಡಿದರು.

ಕೇಪ್ ವರ್ಡೆ ಜುಲೈ 3 ರಂದು ಮಿಯಾಮಿಯಲ್ಲಿ ಹಾಲಿ ವಿಶ್ವ ಚಾಂಪಿಯನ್ ಅರ್ಜೆಂಟೀನಾ ವಿರುದ್ಧದ 32 ರ ಸುತ್ತಿನ ಪಂದ್ಯವನ್ನು ಆಡಲಿದೆ. "ನಾಳೆಯಿಂದ, ನಾವು ಮುಂದಿನ ಪಂದ್ಯದ ಮೇಲೆ ಕೇಂದ್ರೀಕರಿಸುತ್ತೇವೆ ಎಂದು ಡುವಾರ್ಟೆ ಹೇಳಿದರು.

ದಿನದ ಮತ್ತೊಂದು ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ 5-1 ಗೋಲುಗಳ ಭರ್ಜರಿ ಗೆಲುವು ಸಾಧಿಸಿದ ಬೆಲ್ಜಿಯಂ ತಂಡ ಫಿಫಾ ವಿಶ್ವಕಪ್‌ನ 32ನೇ ಸುತ್ತಿನಲ್ಲಿ ಸ್ಥಾನ ಕಾಯ್ದಿರಿಸಿದರೆ. ಗ್ರೂಪ್ ಜಿ ಯ ಅಂತಿಮ ಪಂದ್ಯದಲ್ಲಿ ಈಜಿಪ್ಟ್ ವಿರುದ್ಧ 1-1 ಡ್ರಾ ಸಾಧಿಸಿದ ನಂತರ ಇರಾನ್ ತಮ್ಮ ನಾಕೌಟ್ ಭವಿಷ್ಯಕ್ಕಾಗಿ ಕಠಿಣ ಕಾಯುವಿಕೆಯನ್ನು ಎದುರಿಸಬೇಕಾಯಿತು. ಲಿಯಾಂಡ್ರೊ ಟ್ರಾಸಾರ್ಡ್ ಎರಡು ಗೋಲುಗಳನ್ನು ಗಳಿಸಿದರು ಮತ್ತು ಕೆವಿನ್ ಡಿ ಬ್ರೂಯ್ನ್ ಮತ್ತೊಂದು ಅದ್ಭುತ ಪ್ರದರ್ಶನ ನೀಡಿದರು. ಬೆಲ್ಜಿಯಂ ಗೋಲು ವ್ಯತ್ಯಾಸದಲ್ಲಿ ಈಜಿಪ್ಟ್ ಅನ್ನು ಹಿಂದಿಕ್ಕಿ ಗ್ರೂಪ್ ಜಿ ನಲ್ಲಿ ಅಗ್ರಸ್ಥಾನ ಗಳಿಸಿತು. ಈ ಫಲಿತಾಂಶವು ಬೆಲ್ಜಿಯಂ ಮತ್ತು ಈಜಿಪ್ಟ್ ಎರಡನ್ನೂ ಅಂತಿಮ 32 ರೊಳಗೆ ಕಳುಹಿಸಿತು, ಆದರೆ ಇರಾನ್ ಈಗ ಪಂದ್ಯಾವಳಿಯ ಎಂಟು ಅತ್ಯುತ್ತಮ ಮೂರನೇ ಸ್ಥಾನದಲ್ಲಿರುವ ತಂಡಗಳಲ್ಲಿ ಒಂದಾಗಿ ಮುನ್ನಡೆಯುತ್ತದೆಯೇ ಎಂದು ಕಾಯಬೇಕು.

ಇರಾನ್ ಮಣಿಸಿ ಮೊದಲ ಬಾರಿಗೆ ನಾಕೌಟ್ ಪ್ರವೇಶಿಸಿದ ಈಜಿಪ್ಟ್: ಫಿಫಾ ವಿಶ್ವ ಕಪ್‌ನಲ್ಲಿ ಇಂದು ನಡೆದಿದ್ದ ಮತ್ತೊಂದು ಪಂದ್ಯದಲ್ಲಿ ಇರಾನ್ ಮತ್ತು ಈಜಿಪ್ಟ್ ತಂಡಗಳು ಮುಖಾಮುಖಿ ಆಗಿದ್ದವು. ಈ ರೋಚಕ ಪಂದ್ಯವು 1-1 ಡ್ರಾದಲ್ಲಿ ಕೊನೆಗೊಂಡಿತು ಇದರೊಂದಿಗೆ ಈಜಿಪ್ಟ್ ಫಿಫಾ ವಿಶ್ವಕಪ್‌ನಲ್ಲಿ ಮೊದಲ ಬಾರಿಗೆ ನಾಕೌಟ್ ಹಂತವನ್ನು ತಲುಪಿತು. ಆದಾಗ್ಯೂ, ಇರಾನ್‌ಗೆ ಮುಂದಿನ ಸುತ್ತಿಗೆ ನೇರವಾಗಿ ಮುನ್ನಡೆಯಲು ಸುವರ್ಣಾವಕಾಶವಿತ್ತು, ಆದರೆ ಅಂತಿಮ ನಿಮಿಷಗಳಲ್ಲಿ ವಿಎಆರ್ ನಿರ್ಧಾರ ಫಲಿತಾಂಶವನ್ನು ಬದಲಾಸಿತು. ಇದೀಗ ಇರಾನ್‌ನ 32ರ ಸುತ್ತಿಗೆ ಮುನ್ನಡೆಯುವ ಅವಕಾಶವನ್ನು ಹೊಂದಿದ್ದು ಮೊತ್ತೊಂದು ತಂಡದ ಫಲಿತಾಂಶವನ್ನು ಅವಲಂಬಿಸಬೇಕಾಗಿದೆ.

ಯಾವುದನ್ನೂ ಲಘುವಾಗಿ ಪರಿಗಣಿಸಬಾರದು, ಮೈದಾನಕ್ಕೆ ಇಳಿದಾಕ್ಷಣ ಗೆಲುವು ಸಾಧ್ಯವಿಲ್ಲ : ನಾಯಕ ಶ್ರೇಯಸ್ ಅಯ್ಯರ್

ಬೆಲ್‌ಫಾಸ್ಟ್, ಜೂ.27 - ಐರ್ಲೆಂಡ್ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ ಭಾರತ ತಂಡದ ಆಘಾತಕಾರಿ ಸೋಲಿನ ಬಳಿಕ ಸಹ ಆಟಗಾರರ ವಿರುದ್ಧ ಕ್ಯಾಪ್ಟನ್ ಶ್ರೇಯಸ್ ಅಯ್ಯರ್ ಪರೋಕ್ಷ ಆಕ್ರೋಶ ವ್ಯಕ್ತಪಡಿಸಿದ್ದು, ಯಾವುದನ್ನೂ ಲಘುವಾಗಿ ಪರಿಗಣಿಸಬಾರದು ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ.

ಐರ್ಲೆಂಡ್‌ನ ಬೆಲ್ಫಾಸ್ಟ್‌ನಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ ಭಾರತ ಆಘಾತಕಾರಿ ಸೋಲು ಕಂಡ ನಂತರ, ತಂಡವು ಯಾವುದನ್ನೂ ಲಘುವಾಗಿ ಪರಿಗಣಿಸಬಾರದು ಎಂದು ಭಾರತ ತಂಡದ ನಾಯಕ ಶ್ರೇಯಸ್ ಅಯ್ಯರ್ ತಮ್ಮ ಆಟಗಾರರಿಗೆ ಕರೆ ನೀಡಿದ್ದಾರೆ. ಈ ಗೆಲುವು ಭಾರತ ವಿರುದ್ಧ ಪುರುಷರ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಐರ್ಲೆಂಡ್‌ಗೆ ಲಭಿಸಿದ ಮೊದಲ ಐತಿಹಾಸಿಕ ಜಯವಾಗಿದೆ.

ಪುಟಿಯುವ ಸ್ವಭಾವದ ಪಿಚ್ ಹಾಗೂ ಚೌಕದ ದಿಕ್ಕಿನಲ್ಲಿ ದೊಡ್ಡ ಬೌಂಡರಿಗಳಿದ್ದ ಕಾರಣ ಭಾರತೀಯ ಬ್ಯಾಟರ್‌ಗಳಿಗೆ ಬೌಂಡರಿ ದಾಟಿಸುವುದು ಕಷ್ಟವಾಯಿತು. ಐರ್ಲೆಂಡ್ ಬೌಲರ್‌ಗಳು ತಮ್ಮ ಲೆಂಗ್ತ್‌ಗಳನ್ನು ಹಿಂದೆ ಹಾಕಿ ಪರಿಣಾಮಕಾರಿ ಬೌಲಿಂಗ್ ನಡೆಸಿದರು. ಇದರಿಂದ ಭಾರತೀಯ ಬ್ಯಾಟರ್‌ಗಳು ಅನಿವಾರ್ಯವಾಗಿ ದೊಡ್ಡ ಚೌಕದ ಬೌಂಡರಿಗಳತ್ತ ಹೊಡೆಯಬೇಕಾದ ಪರಿಸ್ಥಿತಿ ಎದುರಾಯಿತು. ಬಹುತೇಕ ಬಾರಿ ಇದು ಡೀಪ್‌ನಲ್ಲಿ ಕ್ಯಾಚ್‌ಗಳಾಗುವುದು ಮರುಕಳಿಸಿತು.

ಇನ್ನು ಈ ಪಂದ್ಯದ ಸೋಲಿನ ಬಳಿಕ ಮಾತನಾಡಿದ ಭಾರತ ತಂಡದ ನಾಯಕ ಶ್ರೇಯಸ್ ಅಯ್ಯರ್, ಯಾವುದನ್ನೂ ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಕೇವಲ ಮೈದಾನಕ್ಕಿಳಿದರೆ ಪಂದ್ಯಗಳನ್ನು ಗೆಲ್ಲಬಹುದು ಎಂದು ಭಾವಿಸಬಾರದು. ಅದಕ್ಕಾಗಿ ಕಠಿಣ ಪರಿಶ್ರಮ ಪಡಬೇಕು ಮತ್ತು ಆ ಕ್ಷಣದಲ್ಲಿ ಸಂಪೂರ್ಣ ಗಮನ ಹರಿಸಬೇಕು. ನಾನು ಮೊದಲೇ ಹೇಳಿದಂತೆ, ಪ್ರಸ್ತುತ ಕ್ಷಣದಲ್ಲೇ ಇರಬೇಕು. ಎದುರಾಳಿಯನ್ನು ಒತ್ತಡಕ್ಕೆ ಸಿಲುಕಿಸುವ ಅವಕಾಶ ಸಿಕ್ಕರೆ ಅದನ್ನು ಬಳಸಿಕೊಳ್ಳಬೇಕು. ಯಾವುದೇ ಕ್ಷಣ ಅಥವಾ ಪರಿಸ್ಥಿತಿಯನ್ನು ಎಂದಿಗೂ ಲಘುವಾಗಿ ಪರಿಗಣಿಸಬಾರದು ಎಂದು ಹೇಳಿದರು.

ನಾಯಕನಾದ ಮೊದಲ ಪಂದ್ಯದಲ್ಲೇ ಸೋಲು

ಇನ್ನು ಮೊದಲ ಬಾರಿಗೆ ಭಾರತ ಟಿ20 ತಂಡವನ್ನು ಮುನ್ನಡೆಸಿದ ಶ್ರೇಯಸ್ ಅಯ್ಯರ್ ಉತ್ತಮ ಆರಂಭ ಪಡೆದಿದ್ದರು. ಐರ್ಲೆಂಡ್ 51 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಆದರೆ ಗ್ಯಾರೆತ್ ಡೆಲಾನಿ ಮತ್ತು ಲಾರ್ಕನ್ ಟಕ್ಕರ್ ನಡುವಿನ 64 ರನ್‌ಗಳ ಜೊತೆಯಾಟ ಪಂದ್ಯದ ದಿಕ್ಕನ್ನೇ ಬದಲಿಸಿತು. ಭಾರತ ಮೂರು ಕ್ಯಾಚ್‌ಗಳನ್ನು ಕೈಚೆಲ್ಲಿದ್ದು, ಡೆಲಾನಿ ಮತ್ತು ಟಕ್ಕರ್ ಇಬ್ಬರೂ ಜೀವದಾನ ಪಡೆದರು. ಮಧ್ಯದ ಓವರ್‌ಗಳಲ್ಲಿ ಬೌಲರ್‌ಗಳು ಸರಿಯಾದ ಲೆಂಗ್ತ್ ಕಾಪಾಡಿಕೊಳ್ಳಲು ವಿಫಲವಾದ ಕಾರಣ ಐರ್ಲೆಂಡ್ ಬ್ಯಾಟರ್‌ಗಳು ನೇರ ಬೌಂಡರಿಗಳತ್ತ ಮುಕ್ತವಾಗಿ ಹೊಡೆದರು.

ಆರಂಭದಲ್ಲಿ ಬೌಲರ್‌ಗಳು ಅತ್ಯುತ್ತಮವಾಗಿ ಬೌಲಿಂಗ್ ಮಾಡಿದರು. ಚೆಂಡಿಗೆ ಚಲನೆ ದೊರೆಯಿತು ಮತ್ತು ಕೆಲವು ವಿಕೆಟ್‌ಗಳನ್ನೂ ಪಡೆದರು. ನಮಗೆ ಅದ್ಭುತ ಆರಂಭ ಸಿಕ್ಕಿತ್ತು. ಆದರೆ ಮಧ್ಯದಲ್ಲಿ ನಾವು ಕಾರ್ಯಗತಗೊಳಿಸುವಲ್ಲಿ ವಿಫಲವಾಯಿತು. ಸಣ್ಣ ಗಾತ್ರದ ನೇರ ಬೌಂಡರಿಗಳತ್ತ ಬ್ಯಾಟರ್‌ಗಳು ಹೊಡೆಯುವಂತಾಯಿತು. ಆದರೆ ಕೊನೆಯ ಹಂತದಲ್ಲಿ ಬೌಲರ್‌ಗಳು ಉತ್ತಮವಾಗಿ ಮರಳಿದರು. ಆರಂಭವನ್ನು ಗಮನಿಸಿದರೆ 140 ರನ್‌ಗಳು ಉತ್ತಮ ಮೊತ್ತವಾಗುತ್ತಿತ್ತು ಎಂದು ನಾನು ಭಾವಿಸುತ್ತೇನೆ ಎಂದು ಅಯ್ಯರ್ ಹೇಳಿದರು.



ಶ್ರೇಯಸ್ ಅಯ್ಯರ್

2027ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ರೋಹಿತ್ ಶರ್ಮಾ ಆಡಲ್ಲ : ಸಂಜಯ್ ಮಾಂಜ್ರೇಕರ್



ಹೊಸದಿಲ್ಲಿ, ಜೂ.27 - ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮತ್ತು ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಜುಲೈ 14 ರಂದು ಎಜ್‌ಬಾಸ್ಟನ್‌ನಲ್ಲಿ ಪ್ರಾರಂಭವಾಗುವ ಇಂಗ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಆಡಲು ಸಜ್ಜಾಗುತ್ತಿದ್ದಾರೆ. ಇತ್ತೀಚೆಗೆ ಮುಕ್ತಾಯಗೊಂಡ ಅಫ್ಘಾನಿಸ್ತಾನ ವಿರುದ್ಧದ ಏಕದಿನ ಸರಣಿಯಲ್ಲಿ ರೋಹಿತ್ ಅತ್ಯುತ್ತಮ ಫಾರ್ಮ್ ಪ್ರದರ್ಶಿಸಿದರು, ಮೂರು ಪಂದ್ಯಗಳಲ್ಲಿ 47.67ರ ಸರಾಸರಿಯಲ್ಲಿ 143 ರನ್ ಗಳಿಸಿದರು, ಇದರಲ್ಲಿ ಒಂದು ಅರ್ಧಶತಕ ಸೇರಿದೆ. 2027ರ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಗೆ ಇನ್ನೂ ಒಂದು ವರ್ಷಕ್ಕೂ ಹೆಚ್ಚು ಸಮಯ ಬಾಕಿ ಇದ್ದರೂ, ಈ ಹಿರಿಯ ಆರಂಭಿಕ ಆಟಗಾರನ ಭವಿಷ್ಯದ ಯೋಜನೆಗಳ ಭಾಗವಾಗುತ್ತಾರೋ ಇಲ್ಲವೋ ಎಂಬ ಬಗ್ಗೆ ಭಾರತೀಯ ಕ್ರಿಕೆಟ್ ವಲಯಗಳಲ್ಲಿ ಈಗಾಗಲೇ ಚರ್ಚೆ ಆರಂಭವಾಗಿದೆ.

ಇದರ ನಡುವೆ ಭಾರತದ ಮಾಜಿ ಕ್ರಿಕೆಟಿಗ ಸಂಜಯ್ ಮಾಂಜ್ರೇಕರ್, ರೋಹಿತ್ ಶರ್ಮಾ ಅವರ ಭವಿಷ್ಯದ ಬಗ್ಗೆ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಆಯ್ಕೆದಾರರು ಯಾವುದೇ ಆಟಗಾರನ ಸ್ಥಾನಮಾನಕ್ಕಿಂತ ಭಾರತೀಯ ಕ್ರಿಕೆಟ್‌ನ ಭವಿಷ್ಯ ಮತ್ತು ಯೋಗಕ್ಷೇಮಕ್ಕೆ ಆದ್ಯತೆ ನೀಡಬೇಕು ಎಂದು ಮಂಜ್ರೇಕರ್‌ನಂಬುತ್ತಾರೆ. 2027ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ರೋಹಿತ್ ಶರ್ಮಾ ಅವರ ಭಾಗವಹಿಸುವಿಕೆಯ ಬಗ್ಗೆ ಕೇಳಿದಾಗ, ಭಾರತದಲ್ಲಿ ಹಲವು ಅತ್ಯುತ್ತಮ ಯುವ ಪ್ರತಿಭೆಗಳು ಆಯ್ಕೆಗೆ ಲಭ್ಯರಿದ್ದು, ಅವರನ್ನು ಬೆಂಬಲಿಸಬೇಕು ಎಂದಿದ್ದಾರೆ.

ರೋಹಿತ್ ಶರ್ಮಾ ಅವರನ್ನು ಕೈಬಿಡುವ ಮಾತುಗಳ ಬಗ್ಗೆ ಸಂಜಯ್ ಮಾಂಜ್ರೇಕರ್‌ಬಹಿರಂಗವಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ನಾನು ಹೇಳಲಿರುವ ವಿಷಯವು ವಿವಾದವನ್ನು ಹುಟ್ಟುಹಾಕಬಹುದು, ಆದರೆ ನನಗೆ ಅದು ಮುಖ್ಯವಲ್ಲ. ನಾವು ಪ್ರಸ್ತುತ 2026ರ ಮಧ್ಯಭಾಗದಲ್ಲಿದ್ದೇವೆ ಮತ್ತು ವಿಶ್ವಕಪ್ 2027ರ ಕೊನೆಯಲ್ಲಿ ನಿಗದಿಯಾಗಿದೆ. ವಿರಾಟ್ ಕೊಹ್ಲಿ ಅವರ ಅಸಾಧಾರಣ ಫಿಟ್‌ನೆಸ್‌ಗೆ ಧನ್ಯವಾದ ಹಾಗೂ ತಮ್ಮ ಸ್ಥಾನವನ್ನು ಗಟ್ಟಿ ಮಾಡಿಕೊಂಡಿದ್ದಾರೆ. ಆದಾಗ್ಯೂ, ನಾವು ತಂಡವನ್ನು ಆಯ್ಕೆ ಮಾಡಿದಾಗಲೆಲ್ಲಾ ನಮ್ಮ ಆಲೋಚನೆ ವಿರಾಟ್ ಮತ್ತು ರೋಹಿತ್ ಸುತ್ತ ಮಾತ್ರ ಸುತ್ತುತ್ತದೆ. ಭಾರತೀಯ ಕ್ರಿಕೆಟ್‌ನ ಹಿತದೃಷ್ಟಿಯಿಂದ ಏನು ಎಂಬುದನ್ನು ನಾವು ಪರಿಗಣಿಸಬೇಕು.

50 ಓವರ್‌ಗಳ ಪಂದ್ಯದಲ್ಲಿ ಇನಿಂಗ್ಸ್ ಆರಂಭಿಸುವುದು ಆನಂದದಾಯಕ ಕೆಲಸ. ಇದು ಬಹುತೇಕ ಪುನಶ್ಚೇತನ ಕಾರ್ಯಕ್ರಮದಂತಿದೆ. ಈ ಅವಕಾಶವು ತಮ್ಮ ವೃತ್ತಿಜೀವನದ ಉತ್ತುಂಗದಲ್ಲಿರುವ ಮತ್ತು ಮುಂದಿನ 5 ರಿಂದ 10 ವರ್ಷಗಳ ಕಾಲ ದೇಶಕ್ಕೆ ಸೇವೆ ಸಲ್ಲಿಸಬಲ್ಲ ಆಟಗಾರನಿಗೆ ಹೋಗಬೇಕು ಎಂದು ನಾನು ನಂಬುತ್ತೇನೆ. ರೋಹಿತ್ ಮೇಲೆ ಮಾತ್ರ ಗಮನಹರಿಸುವುದು ಸರಿಯಲ್ಲ. ಈ ದೃಷ್ಟಿಕೋನದಿಂದ, ಮುಂಬರುವ ವಿಶ್ವಕಪ್ ತಂಡಕ್ಕೆ ರೋಹಿತ್ ಶರ್ಮಾ ನನ್ನ ಆಯ್ಕೆಯಾಗಿರುವುದಿಲ್ಲ ಎಂದು ಸಂಜಯ್ ಮಾಂಜ್ರೇಕರ್ ಹೇಳಿದ್ದಾರೆ.

ಮುಂಬರುವ ಇಂಗ್ಲೆಂಡ್ ಪ್ರವಾಸದಲ್ಲಿ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಇಬ್ಬರೂ ಏಕದಿನ ತಂಡಕ್ಕೆ ಮರಳಿದ್ದಾರೆ. ಆದಾಗ್ಯೂ, ಕೊಹ್ಲಿ ಸ್ನಾಯು ಸೆಳೆತದಿಂದ ಚೇತರಿಸಿಕೊಳ್ಳುವುದರಿಂದ ಅವರ ಭಾಗವಹಿಸುವಿಕೆ ಅವರ ಫಿಟ್‌ನೆಸ್ ವರದಿಯನ್ನು ಅವಲಂಬಿಸಿರುತ್ತದೆ. ಹೆಚ್ಚುವರಿಯಾಗಿ, ಜಸ್‌ಪ್ರೀತ್ ಬುಮ್ರಾ ವೇಗದ ದಾಳಿಯನ್ನು ಮುನ್ನಡೆಸಲಿದ್ದಾರೆ, ಅವರಿಗೆ ಅರ್ಷದೀಪ್ ಸಿಂಗ್, ಪ್ರಸಿಧ್ ಕೃಷ್ಣ, ಹರ್ಷಿತ್ ರಾಣಾ ಮತ್ತು ಗುರ್ನೂರ್ ಬ್ರಾರ್ ಬೆಂಬಲ ನೀಡುತ್ತಾರೆ.

ನಾವು ಪರಿಸ್ಥಿತಿಗೆ ಹೊಂದಿಕೊಳ್ಳಲು ವಿಫಲರಾಗಿದ್ದೇವೆ: ಸೋಲಿಗೆ ಅಭಿಷೇಕ್ ಶರ್ಮಾ ಸ್ಪಷ್ಟನೆ



ಬೆಲ್‌ಫಾಸ್ಟ್, ಜೂ.27 - ಶ್ರೇಯಸ್ ಅಯ್ಯರ್ ನೇತೃತ್ವದ ಟೀಮ್ ಇಂಡಿಯಾ ಐರ್ಲೆಂಡ್ ವಿರುದ್ಧ ತೀವ್ರ ಸೋಲು ಅನುಭವಿಸಿತು. ಬೆಲ್‌ಫಾಸ್ಟ್‌ನಲ್ಲಿ ನಡೆದ ಮೊದಲ ಟಿ20ನಲ್ಲಿ ಆತಿಥೇಯರು ಟೀಮ್ ಇಂಡಿಯಾವನ್ನು 34 ರನ್‌ಗಳಿಂದ ಸೋಲಿಸಿದರು. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತದ ವಿರುದ್ಧ ಐರ್ಲೆಂಡ್‌ನ ಮೊದಲ ಗೆಲುವು ಇದಾಗಿದೆ. ಭಾರತದ ಸೋಲಿಗೆ ಹಲವು ಕಾರಣಗಳಿವೆ. ಕೆಲವರು ಬ್ಯಾಟ್ಸ್‌ಮನ್‌ಗಳನ್ನು ದೂಷಿಸಿದರೆ, ಇತರರು ಬೌಲರ್‌ಗಳನ್ನು ದೂಷಿಸುತ್ತಾರೆ. ಆದಾಗ್ಯೂ, ಟೀಮ್ ಇಂಡಿಯಾ ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಪರಿಸ್ಥಿತಿಯನ್ನು ದೂಷಿಸಿದರು. ಭಾರತೀಯ ಆರಂಭಿಕ ಆಟಗಾರನ ಪ್ರಕಾರ, ಭಾರತ ತಂಡವು ಪರಿಸ್ಥಿತಿಗೆ ಹೊಂದಿಕೊಳ್ಳಲು ವಿಫಲವಾಯಿತು. ಇದು ಸೋಲಿಗೆ ಕಾರಣವಾಯಿತು.

ಮೊದಲು ಬ್ಯಾಟಿಂಗ್ ಮಾಡಿದ ಐರ್ಲೆಂಡ್ ಭಾರತಕ್ಕೆ 183 ರನ್‌ಗಳ ಗುರಿಯನ್ನು ನೀಡಿತು. ಈ ಸ್ಕೋರ್‌ಅನ್ನು ಬೆನ್ನಟ್ಟಿದ ಅಭಿಷೇಕ್ ಶರ್ಮಾ 19 ಎಸೆತಗಳಲ್ಲಿ ಭರ್ಜರಿ ಅರ್ಧ ಶತಕ ಬಾರಿಸಿದರು, ಆದರೆ ಇತರ ಬ್ಯಾಟ್ಸ್‌ಮನ್‌ಗಳಿಂದ ಬೆಂಬಲದ ಕೊರತೆ ಅವರ ಪ್ರಯತ್ನಗಳನ್ನು ವಿಫಲಗೊಳಿಸಿತು. ಭಾರತ ತಂಡವು 148 ರನ್‌ಗಳಿಗೆ ಆಲೌಟ್ ಆಯಿತು.

ನಾವು ಪರಿಸ್ಥಿತಿಗಳಿಗೆ ಎಷ್ಟು ಬೇಗನೆ ಹೊಂದಿಕೊಳ್ಳುತ್ತೇವೆ ಎಂಬುದು ಮುಖ್ಯ. ಒಂದು ತಂಡವಾಗಿ, ಅದು ನಿಜವಾಗಿಯೂ ಮುಖ್ಯ. ನೀವು ಸತತ ಪಂದ್ಯಗಳನ್ನು ಆಡುವಾಗ, ಒಂದು ಗುಂಪಾಗಿ, ನೀವು ಮುಂದುವರಿಯಬೇಕು ಮತ್ತು ಪರಿಸ್ಥಿತಿಗಳಿಗೆ ಒಗ್ಗಿಕೊಳ್ಳಬೇಕು. ನೀವು ಅಭ್ಯಾಸ ಅವಧಿಯನ್ನು ಪಡೆದಾಗಲೆಲ್ಲಾ ಅಥವಾ ಬಹುಶಃ ನೀವು ಅದಕ್ಕೆ ಒಗ್ಗಿಕೊಂಡಾಗಲೆಲ್ಲಾ, ಪ್ರಬಲ ತಂಡವಾಗಿ ಹೊರಹೊಮ್ಮುತ್ತೀರಿ, ಇಂದು ನಾವು ಅದನ್ನೇ ಮಾಡಲು ಪ್ರಯತ್ನಿಸುತ್ತಿದ್ದೆವು, ಆದರೆ ದುರದೃಷ್ಟವಶಾತ್, ಅದು ಸಾಧ್ಯವಾಗಲಿಲ್ಲ ಎಂದರು.

ಭಾರತ ಮತ್ತು ಐರ್ಲೆಂಡ್ ನಡುವಿನ ಎರಡನೇ ಟಿ20 ಜೂನ್ 28 ರಂದು ನಿಗದಿಯಾಗಿದೆ. ಸರಣಿಯನ್ನು ಉಳಿಸುವ ಉದ್ದೇಶದಿಂದ ಟೀಮ್ ಇಂಡಿಯಾ ಈ ಪಂದ್ಯವನ್ನು ಗೆಲ್ಲಬೇಕಿದೆ. ಭಾರತ ಮತ್ತು ಐರ್ಲೆಂಡ್ ನಡುವಿನ ಈ ಸರಣಿಯು ಕೇವಲ ಎರಡು ಟಿ20 ಪಂದ್ಯಗಳನ್ನು ಒಳಗೊಂಡಿದೆ. ಐರ್ಲೆಂಡ್ ವಿರುದ್ಧದ ಮೊದಲ ಟಿ20 ಅನ್ನು ಸೋತ ನಂತರ ಭಾರತ ಈಗ ಸರಣಿಯನ್ನು ಗೆಲ್ಲಲು ಸಾಧ್ಯವಾಗದಿದ್ದರೂ, ಭಾರತವು ಖಂಡಿತವಾಗಿಯೂ ಸರಣಿಯನ್ನು ಕಳೆದುಕೊಳ್ಳುವ ಅಪಾಯದಲ್ಲಿದೆ.

ಭಾರತ ಹಾಗೂ ಐರ್ಲೆಂಡ್ ತಂಡಗಳು 2007ರಲ್ಲಿ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮುಖಾಮುಖಿಯಾಗಿದ್ದವು. ಅಲ್ಲಿಂದ ಈ ಪಂದ್ಯದವರೆಗೆ ನಡೆದಿರುವ ಎಲ್ಲಾ ಪಂದ್ಯಗಳಲ್ಲೂ ಟೀಮ್ ಇಂಡಿಯಾ ಗೆಲುವು ಸಾಧಿಸಿತ್ತು. ಈ ಅವಧಿಯಲ್ಲಿ 3 ಏಕದಿನ 8 ಟಿ20 ಪಂದ್ಯಗಳನ್ನ ಗೆದ್ದಿದ್ದ ಭಾರತ ತಂಡ, ಬರೋಬ್ಬರಿ 20 ವರ್ಷಗಳ ನಂತರ ಮೊದಲ ಬಾರಿಗೆ ಸೋಲು ಕಂಡಿದೆ.

ತಮಿಳುನಾಡು: ಹಿರಿಯ ಚಿತ್ರ ನಿರ್ಮಾಪಕ, ನಟ ಕೆ.ಭಾಗ್ಯರಾಜ್ ನಿಧನ



ಚೆನ್ನೈ, ಜೂ. 27 - ಸೂಕ್ಷ್ಮ ಹಾಸ್ಯ ಮತ್ತು ಹಾಸ್ಯಮಯ ಸಂಭಾಷಣೆಗಳಿಗೆ ಹೆಸರುವಾಸಿಯಾಗಿದ್ದ, ಪ್ರೇಕ್ಷಕರೊಂದಿಗೆ ಉತ್ತಮ ಸಂಪರ್ಕ ಹೊಂದಿದ್ದ ಪ್ರಸಿದ್ಧ ತಮಿಳು ಚಲನಚಿತ್ರ ನಿರ್ಮಾಪಕ ಮತ್ತು ನಟ ಕೆ ಭಾಗ್ಯರಾಜ್ (73) ಶನಿವಾರ ಹೃದಯಾಘಾತದಿಂದ ನಿಧನರಾದರು ಎಂದು ಅವರು ದಾಖಲಾಗಿದ್ದ ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಹೆಚ್ಚಾಗಿ ಮಧ್ಯಮ ವರ್ಗದ ಜೀವನದಿಂದ ಬಂದ ಅವರ ಪಾತ್ರಗಳು, ಅವರ ಅತ್ಯುತ್ತಮ ಚಿತ್ರಕಥೆಯೊಂದಿಗೆ ಅವರ ಆನ್-ಸ್ಕ್ರೀನ್ ವ್ಯಕ್ತಿತ್ವವು ಒಂದು ಮೋಡಿಯಾಗಿತ್ತು. ಐದು ದಶಕಗಳಿಗೂ ಹೆಚ್ಚು ಕಾಲದ ಅವರ ವೃತ್ತಿಜೀವನದಲ್ಲಿ, ಭಾಗ್ಯರಾಜ್ ಹಲವಾರು ಹಿಟ್ ಚಿತ್ರಗಳನ್ನು ನೀಡಿದರು ಮತ್ತು ಅವರ ಪ್ರಸಿದ್ಧ ನಿರ್ದೇಶನ ಮತ್ತು ಸಾಹಸ ಕೃತಿಗಳಲ್ಲಿ ಕೆಲವು - ಅಂಥ 7 ನಾಟ್ಕಲ್, ಮುಂದನೈ ಮುಡಿಚು, ಚಿನ್ನ ವೀಡು ಮತ್ತು ಎಂಗ ಚಿನ್ನ ರಸ ಸೇರಿವೆ.

ಅವರು ತಮ್ಮ ಮಾಜಿ ನಟಿ ಪತ್ನಿ ಪೂರ್ಣಿಮಾ ಮತ್ತು ಅವರ ಮಕ್ಕಳಾದ ನಟ ಶಾಂತನು ಮತ್ತು ಶರಣ್ಯ ಅವರನ್ನು ಅಗಲಿದ್ದಾರೆ. ಅವರ ಚಲನಚಿತ್ರ ವೃತ್ತಿಜೀವನದ ಹೊರತಾಗಿ, ಭಾಗ್ಯರಾಜ್ ತಮಿಳು ವಾರಪತ್ರಿಕೆ ಭಾಗ್ಯದ ಸಂಪಾದಕರಾಗಿದ್ದರು ಮತ್ತು ಅವರು ಹಲವಾರು ಕಾದಂಬರಿಗಳನ್ನು ಬರೆದಿದ್ದಾರೆ.

"ಅವರು ಗೋವಾದಲ್ಲಿ ಖುಷ್ಬೂ ಅವರ ಮಗಳ ಮದುವೆಯಲ್ಲಿ ಭಾಗವಹಿಸಿದ್ದರು. ನಿನ್ನೆ ನಾವು ಹಿಂತಿರುಗಿದ್ದರೆ, ಅವರು ನಮಗಿಂತ ಸ್ವಲ್ಪ ಬೇಗನೆ ಹಿಂತಿರುಗಿದ್ದರು. ಅವರು ಇಡೀ ದಿನ ಹರ್ಷಚಿತ್ತದಿಂದ ಇದ್ದರು. ಇಂದು ಬೆಳಿಗ್ಗೆ, ವಾಕಿಂಗ್‌ನಿಂದ ಹಿಂತಿರುಗಿದ ನಂತರ ಅವರಿಗೆ ಎದೆನೋವು ಕಾಣಿಸಿಕೊಂಡಿತು ಮತ್ತು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಂತಿಮವಾಗಿ ಅವರ ಅಂತ್ಯ ಬಂದಿತು'' ಎಂದು ನಟಿ ಸುಹಾಸಿನಿ ಮಣಿರತ್ನಂ ವರದಿಗಾರರಿಗೆ ತಿಳಿಸಿದರು. ಅವರು ನಟ ಪಾರ್ಥಿಬನ್ ಮತ್ತು ಇತರ ಹಲವರೊಂದಿಗೆ ನುಂಗಂಬಕ್ಕಂನ ಅವರ ನಿವಾಸದಲ್ಲಿ ಹಿರಿಯ ನಿರ್ದೇಶಕರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು. ಡಿಎಂಕೆ ಅಧ್ಯಕ್ಷ ಮತ್ತು ಮಾಜಿ ಮುಖ್ಯಮಂತ್ರಿ ಎಂ ಕೆ ಸ್ಟಾಲಿನ್ ಕೂಡ ಅಂತಿಮ ನಮನ ಸಲ್ಲಿಸಿದರು. ಭಾಗ್ಯರಾಜ್ ಅವರನ್ನು ಎಲ್ಲದರಲ್ಲೂ ಯಶಸ್ವಿಯಾದ ಅದ್ಭುತ ನಿರ್ದೇಶಕ. ಭಾರತೀಯ ಚಿತ್ರರಂಗದಲ್ಲಿ ಚಿತ್ರಕಥೆಗಳ ಕಿರೀಟವಿಲ್ಲದ ರಾಜ, ಎಲ್ಲರನ್ನೂ ಆಕರ್ಷಿಸುವ ವಾಸ್ತವಿಕ ನಾಯಕ ಮತ್ತು ಸಂಕೀರ್ಣ ಸಂದರ್ಭಗಳನ್ನು ಸಣ್ಣ ಸಂಭಾಷಣೆಗಳಲ್ಲಿ ತಿಳಿಸುವ ಶಕ್ತಿಯನ್ನು ಹೊಂದಿದ್ದ ಬರಹಗಾರ ಎಂದು ಅವರು ಬಣ್ಣಿಸಿದರು.

''ಕೆಲವೇ ತಿಂಗಳುಗಳ ಹಿಂದೆ, ನಾನು ಭಾಗ್ಯರಾಜ್ ಅವರ ಚಲನಚಿತ್ರ ವೃತ್ತಿಜೀವನದ 50 ವರ್ಷಗಳನ್ನು ಪೂರ್ಣಗೊಳಿಸಿದ ಸಮಾರಂಭದಲ್ಲಿ ಭಾಗವಹಿಸಿದ್ದೆ ಮತ್ತು ಮುಖ್ಯಮಂತ್ರಿಯಾಗಿ ಮಾತ್ರವಲ್ಲದೆ ಅವರ ಅಭಿಮಾನಿಯಾಗಿಯೂ ಸಮಾರಂಭದಲ್ಲಿ ಮಾತನಾಡಿದ್ದೆ. ಆ ನೆನಪುಗಳು ಇನ್ನೂ ತಾಜಾವಾಗಿವೆ' ಎಂದು ಸ್ಟಾಲಿನ್ 'ಎಕ್ಸ್' ನಲ್ಲಿ ಹೇಳಿದರು ಮತ್ತು ಅವರ ಸಾವನ್ನು 'ದೊಡ್ಡ ನಷ್ಟ' ಎಂದು ಬಣ್ಣಿಸಿದರು.

''ಅವರ ಕೃತಿಗಳ ಮೂಲಕ, ಭಾಗ್ಯರಾಜ್ ತಮಿಳುನಾಡು ಜನರ ಅವಿಭಾಜ್ಯ ಅಂಗವಾಗಿ ಶಾಶ್ವತವಾಗಿ ಬದುಕುತ್ತಾರೆ'' ಎಂದು ಸ್ಟಾಲಿನ್ ಹೇಳಿದರು. ಚಲನಚಿತ್ರ ನಿರ್ಮಾಪಕರ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಿದ ನಾಯಕರಲ್ಲಿ ಸ್ಟಾಲಿನ್ ಮತ್ತು ಟಿಎಂಸಿ (ಮೂಪನಾರ್) ಸಂಸ್ಥಾಪಕ ಜಿ ಕೆ ವಾಸನ್ ಸೇರಿದ್ದಾರೆ. ನಟಿ-ರಾಜಕಾರಣಿ ಗೌತಮಿ, ಅವರ ಅಕಾಲಿಕ ನಿಧನವು ಸೃಜನಶೀಲ ಜಗತ್ತಿನಲ್ಲಿ ಒಂದು ದೊಡ್ಡ ಶೂನ್ಯವನ್ನು ಉಂಟುಮಾಡಿದೆ ಎಂದು ಹೇಳಿದರು.

''ಒಬ್ಬ ಐಕಾನ್ ನಷ್ಟಕ್ಕೆ ನಾವೆಲ್ಲರೂ ಶೋಕಿಸುತ್ತೇವೆ. ಪ್ರತಿ ಪೀಳಿಗೆಗೂ ಪ್ರಸ್ತುತವಾಗಿರುವ ನವೋದಯ ಪುರುಷ, ಅವರು ಮುಂಬರುವ ಯುಗಗಳಿಗೆ ಶಾಶ್ವತ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ'' ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

''ತಮಿಳು ಚಲನಚಿತ್ರ ನಿರ್ದೇಶಕ ಮತ್ತು ಬರಹಗಾರ ಕೆ ಭಾಗ್ಯರಾಜ್ ಅವರ ನಿಧನವು ಸಿನಿಮಾ ಜಗತ್ತಿಗೆ ದೊಡ್ಡ ನಷ್ಟವಾಗಿದೆ. ಅವರ ವಿಶಿಷ್ಟ ಕಥೆ ಹೇಳುವಿಕೆ, ಸೃಜನಶೀಲ ಪ್ರತಿಭೆ ಮತ್ತು ತಮಿಳು ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದ್ದು ಪ್ರೇಕ್ಷಕರ ಹೃದಯದಲ್ಲಿ ಅವರಿಗೆ ವಿಶೇಷ ಸ್ಥಾನವನ್ನು ಗಳಿಸಿಕೊಟ್ಟಿದೆ'' ಎಂದು ತಮಿಳುನಾಡು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಹೇಳಿದರು.

ಅವರ ಕುಟುಂಬ, ಸ್ನೇಹಿತರು ಮತ್ತು ಅಸಂಖ್ಯಾತ ಅಭಿಮಾನಿಗಳಿಗೆ ನನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ನಿಧನವು ತಮಿಳು ಚಿತ್ರರಂಗದಲ್ಲಿ, ವಿಶೇಷವಾಗಿ ಅವರ ಅಸಾಧಾರಣ ಕಥೆ ಹೇಳುವ ಮತ್ತು ಚಿತ್ರಕಥೆ ಬರೆಯುವ ಸಾಮರ್ಥ್ಯದ ಯುಗದ ಅಂತ್ಯವನ್ನು ಸೂಚಿಸುತ್ತದೆ ಎಂದು ಹೇಳಿದರು.

ತಮಿಳುನಾಡಿನ ಈರೋಡ್ ಜಿಲ್ಲೆಯಲ್ಲಿ ಕೃಷ್ಣಸ್ವಾಮಿ ಭಾಗ್ಯರಾಜ್ ಆಗಿ ಜನಿಸಿದ ಅವರು, ಪ್ರಸಿದ್ಧ ಚಲನಚಿತ್ರ ನಿರ್ಮಾಪಕ ಭಾರತಿರಾಜ (ಇತ್ತೀಚೆಗೆ ನಿಧನರಾದರು) ಅವರ ಸಹಾಯಕರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು ಮತ್ತು ನಂತರ ಸುವರಿಲ್ಲಾದ ಚಿತ್ತಿರಂಗಲ್, ಡಾರ್ಲಿಂಗ್ ಡಾರ್ಲಿಂಗ್ ಡಾರ್ಲಿಂಗ್ ಮತ್ತು ಇದು ನಮ್ಮ ಆಲು ಮುಂತಾದ ಚಿತ್ರಗಳ ಮೂಲಕ ಯಶಸ್ವಿ ನಿರ್ದೇಶಕರಾಗಿ ಹೊರಹೊಮ್ಮಿದ್ದರು. ಸುಮಾರು 25 ಚಿತ್ರಗಳನ್ನು ನಿರ್ದೇಶಿಸುವುದರ ಜೊತೆಗೆ ಅವರು 75 ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಭಾಗ್ಯರಾಜ್ ಅವರ ನಿಧನಕ್ಕೆ ಆಘಾತಕಾರಿ ದುಃಖ ವ್ಯಕ್ತಪಡಿಸಿದ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ ಪಳನಿಸ್ವಾಮಿ, ಅವರನ್ನು ಬಹುಮುಖ ಪ್ರತಿಭೆಯ ಚಲನಚಿತ್ರ ನಿರ್ದೇಶಕ, ಚಿತ್ರಕಥೆ ಬರಹಗಾರ, ನಟ ಮತ್ತು ಸಂಗೀತ ಸಂಯೋಜಕ ಎಂದು ಬಣ್ಣಿಸಿದರು.

''ಭಾಗ್ಯರಾಜ್ ಅವರು ಎಐಎಡಿಎಂಕೆ ಸಂಸ್ಥಾಪಕ ಮತ್ತು ಮಾಜಿ ಮುಖ್ಯಮಂತ್ರಿ ಎಂ ಜಿ ರಾಮಚಂದ್ರನ್ ಅವರ ದೊಡ್ಡ ಅಭಿಮಾನಿಯಾಗಿದ್ದರು. ಅವರು ದಿವಂಗತ ನಾಯಕನ ಅಪೂರ್ಣ ಚಿತ್ರ 'ಅನ್ನಾ ನೀ ಎನ್ ದೈವಂ' (1977 ರಲ್ಲಿ) ದೃಶ್ಯಗಳನ್ನು ಅಳವಡಿಸಿಕೊಂಡು ಅದನ್ನು ಆಧರಿಸಿ ಹೊಸ ಚಿತ್ರಕಥೆಯನ್ನು ನಿರ್ಮಿಸಿದರು, ಇದು 'ಅವಸಾರ ಪೊಲೀಸ್ 100' (1990 ರಲ್ಲಿ) ಎಂಬ ಯಶಸ್ವಿ ಚಿತ್ರವಾಯಿತು'' ಎಂದು ಪಳನಿಸ್ವಾಮಿ 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

''ಭಾರತೀಯ ಚಲನಚಿತ್ರೋದ್ಯಮದ ಅಪ್ರತಿಮ ಚಿತ್ರಕಥೆಗಾರನ ನಿಧನವು ತುಂಬಲಾರದ ನಷ್ಟವಾಗಿದೆ. ಅವರ ಕುಟುಂಬ, ಚಲನಚಿತ್ರೋದ್ಯಮ ಮತ್ತು ದುಃಖಿತರಾಗಿರುವ ಅವರ ಅಭಿಮಾನಿಗಳಿಗೆ ನಾನು ನನ್ನ ಆಳವಾದ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಅವರ ಅಗಲಿದ ಆತ್ಮವು ಭಗವಂತನ ನೆರಳಿನಲ್ಲಿ ವಿಶ್ರಾಂತಿ ಪಡೆಯಲಿ ಎಂದು ನಾನು ಸರ್ವಶಕ್ತ ದೇವರನ್ನು ಪ್ರಾರ್ಥಿಸುತ್ತೇನೆ'' ಎಂದು ಪಳನಿಸ್ವಾಮಿ ಹೇಳಿದರು. ಹೃದಯಾಘಾತದಿಂದ ನಿಧನರಾದ ಹಿರಿಯ ನಿರ್ದೇಶಕರ ಪಾರ್ಥಿವ ಶರೀರವನ್ನು ನಗರದ ಆಸ್ಪತ್ರೆಯಿಂದ ತರಲಾಗಿದ್ದು, ಸಾರ್ವಜನಿಕರು, ಅಭಿಮಾನಿಗಳು, ಚಲನಚಿತ್ರ ವ್ಯಕ್ತಿಗಳು ಮತ್ತು ರಾಜಕೀಯ ಪಕ್ಷದ ಮುಖಂಡರು ಅಂತಿಮ ನಮನ ಸಲ್ಲಿಸಲು ನುಂಗಂಬಾಕ್ಕಂನ ಅವರ ನಿವಾಸದಲ್ಲಿ ಇರಿಸಲಾಗಿದೆ.

ಭಾಗ್ಯರಾಜ್ ನಿಧನಕ್ಕೆ ಸಿಎಂ ವಿಜಯ್ ಸಂತಾಪ, ಪೂರ್ಣ ಸರ್ಕಾರಿ ಗೌರವ ಘೋಷಣೆ

ಹಿರಿಯ ಚಲನಚಿತ್ರ ನಿರ್ಮಾಪಕ ಕೆ ಭಾಗ್ಯರಾಜ್ ಅವರ ನಿಧನಕ್ಕೆ ತಮಿಳುನಾಡು ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ಸಂತಾಪ ಸೂಚಿಸಿದ್ದು, ಅವರ ಅಂತ್ಯಕ್ರಿಯೆಗೆ ಪೂರ್ಣ ಸರ್ಕಾರಿ ಗೌರವಗಳನ್ನು ಘೋಷಿಸಿದರು.

ಭಾಗ್ಯರಾಜ್ ಅವರ ನಿಧನಕ್ಕೆ ತೀವ್ರ ಆಘಾತ ಮತ್ತು ತೀವ್ರ ದುಃಖ ವ್ಯಕ್ತಪಡಿಸಿದ ಮುಖ್ಯಮಂತ್ರಿ, ನಿರ್ದೇಶಕ-ನಟರು ಶ್ರೇಷ್ಠ ನಿರ್ದೇಶಕ, ನಟ, ಚಿತ್ರಕಥೆಗಾರ, ಸಂಭಾಷಣೆಕಾರ ಮತ್ತು ಸಂಗೀತ ಸಂಯೋಜಕರಾಗಿ ತಮ್ಮ ಬಹುಮುಖ ಪ್ರತಿಭೆಯೊಂದಿಗೆ ತಮಿಳು ಚಲನಚಿತ್ರೋದ್ಯಮದಲ್ಲಿ ಅಳಿಸಲಾಗದ ಛಾಪನ್ನು ಮೂಡಿಸಿದ್ದಾರೆ ಎಂದು ಹೇಳಿದರು.

''ಅವರ ಪ್ರತಿಯೊಂದು ಕೃತಿಗಳು ಮಾನವೀಯತೆ ಮತ್ತು ಸಾಮಾಜಿಕ ಮೌಲ್ಯಗಳನ್ನು ಮಾತನಾಡುವ ಮರೆಯಲಾಗದ ನೆನಪುಗಳಾಗಿ ಉಳಿಯುತ್ತವೆ. ಅವರ ನಿಧನವು ತಮಿಳು ಚಲನಚಿತ್ರೋದ್ಯಮಕ್ಕೆ ಸರಿಪಡಿಸಲಾಗದ ನಷ್ಟವಾಗಿದೆ'' ಎಂದು ವಿಜಯ್ ಹೇಳಿದರು.

'ಆಲ್ಫಾ' ಜೊತೆ ಘರ್ಷಿಸಲಿರುವ ಹುಮಾ ಖುರೇಷಿ: 'ಬೇಬಿ ಡು ಡೈ ಡು' ಟ್ರೇಲರ್:ಆಕೆಗೆ ಕಿವಿ ಕೇಳುವುದಿಲ್ಲ, ಮಾತನಾಡುವುದಿಲ್ಲ - ಆಕೆಗೆ ಕೊಲ್ಲಲು ಮಾತ್ರ ಸಾಧ್ಯ!



'ಬೇಬಿ ಡು ಡೈ ಡು' ಒಂದು ಕ್ರೈಮ್ ಥ್ರಿಲ್ಲರ್ ಆಗಿದ್ದು,ವೀಕ್ಷಕರನ್ನು ಆಳವಾದ ರಹಸ್ಯಗಳು,ದ್ರೋಹ ಮತ್ತು ಸೇಡುಗಳಿಂದ ತುಂಬಿರುವ ಕತ್ತಲೆಯಾದ, ಸಸ್ಪೆನ್ಸ್ ತುಂಬಿದ ಜಗತ್ತಿಗೆ ಕರೆದೊಯ್ಯುತ್ತದೆ. ನಚಿಕೇತ್ ಸಮಂತ್ ನಿರ್ದೇಶಿಸಿದ ಈ ಚಿತ್ರವನ್ನು ಹುಮಾ ಖುರೇಷಿ ಮತ್ತು ಅವರ ಸಹೋದರ ಸಕೀಬ್ ಸಲೀಮ್ ನಿರ್ಮಿಸಿದ್ದಾರೆ.ಇದು ಸಹೋದರರ ಹೊಸ ಬ್ಯಾನರ್ 'ಸಲೀಮ್ ಸಿಬ್ಲಿಂಗ್ಸ್' ನ ಚೊಚ್ಚಲ ನಿರ್ಮಾಣ ಉದ್ಯಮವನ್ನು ಗುರುತಿಸುತ್ತದೆ.

'ಹಿಟ್‌ಮ್ಯಾನ್' ಬಗ್ಗೆ ಕೇಳಿರಬಹುದು ಅಥವಾ, ಸರಳವಾಗಿ ಹೇಳುವುದಾದರೆ,ಬಾಡಿಗೆ ಹಂತಕ. ಸಿನಿಮಾ ಮತ್ತು ಸಾಹಿತ್ಯದಿಂದ ವೀಡಿಯೊ ಗೇಮ್‌ಗಳವರೆಗೆ ಎಲ್ಲಾ ಮಾಧ್ಯಮಗಳಲ್ಲಿ ಹಿಟ್‌ಮೆನ್ ಅಪಾರ ಜನಪ್ರಿಯತೆಯನ್ನು ಗಳಿಸಿದ್ದಾರೆ. ಆದರೆ ನೀವು ಎಂದಾದರೂ 'ಹಿಟ್‌ವುಮನ್' ಬಗ್ಗೆ ಕೇಳಿದ್ದೀರಾ? ಹೌದು,ಹುಮಾ ಖುರೇಷಿ ದೇಶದ ಮೊದಲ ಮಹಿಳಾ ಬಾಡಿಗೆ ಹಂತಕಿಯಾಗಿ ದೊಡ್ಡ ಪರದೆಯ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಅವರ'ಬೇಬಿ ಡು ಡೈ ಡು'ಚಿತ್ರದ ಟ್ರೇಲರ್ ಜೂನ್ 22 ಸೋಮವಾರ ಬಿಡುಗಡೆಯಾಯಿತು. 2-ನಿಮಿಷ-27-ಸೆಕೆಂಡ್ ರನ್‌ಟೈಮ್‌ನ ಟ್ರೇಲರ್ ರೋಮಾಂಚನಗಳಿಂದ ತುಂಬಿದೆ.ಅತ್ಯಂತ ಕುತೂಹಲಕಾರಿ ಅಂಶವೆಂದರೆ 'ಬೇಬಿ'ಗೆ ಕೇಳಲು ಅಥವಾ ಮಾತನಾಡಲು ಸಾಧ್ಯವಿಲ್ಲ;ಅವಳು ಕೇವಲ ಒಂದು ವ್ಯವಹಾರವನ್ನು ತಿಳಿದಿದ್ದಾಳೆ-ಹಣ ತೆಗೆದು ಕೊಳ್ಳುವುದು ಮತ್ತು ಗುರಿಗಳನ್ನು ತೆಗೆದು (ಹತ್ಯೆ) ಹಾಕುವುದು. ಕುತೂಹಲಕಾರಿಯಾಗಿ, ಈ ಚಿತ್ರವು ಆಲಿಯಾ ಭಟ್ ಮತ್ತು ಶರ್ವರಿ ನಟಿಸಿರುವ 'ಆಲ್ಫಾ' ಜೊತೆ ಗಲ್ಲಾಪೆಟ್ಟಿಗೆಯಲ್ಲಿ ಘರ್ಷಿಸಲು ಸಿದ್ಧವಾಗಿದೆ.

'ಬೇಬಿ ಡು ಡೈ ಡು' ಚಿತ್ರದ ಟ್ರೇಲರ್ ಹುಮಾ ಖುರೇಷಿಯ ಪಾತ್ರ 'ಬೇಬಿ'ಯನ್ನು ನಮಗೆ ಪರಿಚಯಿಸುತ್ತದೆ. ಅವಳು ಕಿವುಡ ಮತ್ತು ಮೂಕಿ - ಕೇಳಲು ಅಥವಾ ಮಾತನಾಡಲು ಸಾಧ್ಯವಾಗುವುದಿಲ್ಲ - ಆದರೆ ಅವಳ ಮೌನವು ಅಪಾಯಕಾರಿ ಭೂತಕಾಲವನ್ನು ಮರೆಮಾಡುತ್ತದೆ. ಇದರ ನಂತರ, ಟ್ರೈಲರ್ ಕೊಲೆಗಳ ಸರಣಿಯು ತೆರೆದುಕೊಳ್ಳುತ್ತಿರುವ ಭೂಗತ ಜಗತ್ತಿನ ಒಂದು ನೋಟವನ್ನು ನೀಡುತ್ತದೆ.ಬೇಬಿಯನ್ನು ಅನುಮಾನದಿಂದ ನೋಡುವುದು ಕಷ್ಟ;ಅವಳ ಮುಗ್ಧ ನೋಟ ಮತ್ತು ಅಂಗವೈಕಲ್ಯವು ಅವಳ ನಿಜವಾದ ಸ್ವಭಾವವನ್ನು ಸಂಪೂರ್ಣವಾಗಿ ಮರೆಮಾಡುತ್ತದೆ.

ಟ್ರೇಲರ್‌ಹುಮಾ ಪಾತ್ರವನ್ನು ಸ್ಥಾಪಿಸಿದ ನಂತರ, ಅಪರಾಧ ಜಗತ್ತಿನಲ್ಲಿ ಬೇಬಿಯ ಪ್ರಾಬಲ್ಯವನ್ನು ನಾವು ನೋಡುತ್ತೇವೆ.ಅವಳು ತಪ್ಪಿಲ್ಲ; ಅವಳ ಗುರಿ ಎಂದಿಗೂ ತಪ್ಪಿಸಿಕೊಳ್ಳುವುದಿಲ್ಲ.ಬೇಬಿ ಮಾತನಾಡಲು ಬಾರದ ಕಾರಣ,ಹುಮಾ ಖುರೇಷಿಗೆ ಯಾವುದೇ ಸಂಭಾಷಣೆಗಳಿಲ್ಲ.ಆದರೂ, ಪಾತ್ರಕ್ಕೆ ಅಗತ್ಯವಾದ ಭಯದ ಭಾವನೆಯನ್ನು ಹುಟ್ಟುಹಾಕಲು ಅವರು ತಮ್ಮ ಅಭಿವ್ಯಕ್ತಿಗಳನ್ನು ಬಳಸುವಲ್ಲಿ ಯಾವುದೇ ಅವಕಾಶವನ್ನು ಬಿಡುವುದಿಲ್ಲ.ಟ್ರೇಲರ್ ಒಂದು ನಿಗೂಢ ಉದ್ದೇಶ ಮತ್ತು ಸಸ್ಪೆನ್ಸ್ ಪದರಗಳ ಬಗ್ಗೆ ಸುಳಿವು ನೀಡುತ್ತದೆ, ಪರದೆಯ ಮೇಲೆ ತೆರೆದುಕೊಳ್ಳುವ ಕಥೆಯು ಸಂಪೂರ್ಣ ಸತ್ಯವಲ್ಲದಿರಬಹುದು ಎಂದು ಸೂಚಿಸುತ್ತದೆ.

'ಆಲ್ಫಾ' ಜೊತೆ ಬಾಕ್ಸ್ ಆಫೀಸ್ ಘರ್ಷಣೆ

ಟ್ರೇಲರ್ ಬಿಡುಗಡೆಯ ಜೊತೆಗೆ, 'ಬೇಬಿ ಡು ಡೈ ಡು' ಬಿಡುಗಡೆ ದಿನಾಂಕವನ್ನು ಘೋಷಿಸಲಾಗಿದೆ. ಈ ಚಿತ್ರವು ಜುಲೈ 3, 2026ರಂದು ಥಿಯೇಟರ್‌ಗಳಲ್ಲಿ ಬಿಡುಗಡೆಯಾಗಲಿದೆ.ಆಲಿಯಾ ಭಟ್ ಮತ್ತು ಶಾರ್ವರಿ ನಟಿಸಿರುವ 'ಆಲ್ಫಾ' ಒಂದು ಗೂಢಚಾರ ಆಕ್ಷನ್ ಚಿತ್ರ ಅದೇ ದಿನ ಬಿಡುಗಡೆಯಾಗಲಿದೆ.ಎರಡೂ ಚಿತ್ರಗಳು ಮಹಿಳಾ ನಾಯಕಿಯರನ್ನು ಒಳಗೊಂಡಿರುವುದು ಒಂದು ಆಕರ್ಷಕ ಕಾಕತಾಳೀಯವಾಗಿದೆ.ಹುಮಾ ಖುರೇಷಿ ಜೊತೆಗೆ,ಚಿತ್ರದಲ್ಲಿ ಸಿಕಂದರ್ ಖೇರ್,ಚಂಕಿ ಪಾಂಡೆ,ರಚಿತ್ ಸಿಂಗ್,ವಿದ್ಯಾ ಮಾಲ್ವಾಡೆ,ಮರುಧಾ ಶೇಖಾವತ್,ಅರುಣ್ ಕುಶ್ವಾಹ ಮತ್ತು ಹಿಮಾಂಶು ಮಲಿಕ್ ಪ್ರಮುಖ ಪಾತ್ರ ಗಳಲ್ಲಿದ್ದಾರೆ.'ನನಗೆ ಹೆಚ್ಚು ಇಷ್ಟವಾದದ್ದು ಚಿತ್ರದಲ್ಲಿ ಯಾರೂ ಅವರು ಕಾಣುವಷ್ಟು ಇಲ್ಲ ಎಂಬುದು.ಪ್ರತಿಯೊಂದು ದೃಶ್ಯಕ್ಕೂ ಒಂದು ಆಧಾರವಾಗಿರುವ ಪದರವಿದೆ.ಕಥೆ ತೆರೆದುಕೊಳ್ಳುತ್ತಿದ್ದಂತೆ, ಪ್ರೇಕ್ಷಕರು ಚುಕ್ಕೆಗಳನ್ನು ಸಂಪರ್ಕಿಸುವುದನ್ನು ಆನಂದಿಸುತ್ತಾರೆ ಎಂದು ನಾನು ಭಾವಿಸುತ್ತೇನೆ' ಎಂದು ಸಿಕಂದರ್‌ಖೇರ್ ಹೇಳುತ್ತಾರೆ. ಏತನ್ಮಧ್ಯೆ, ಕಥೆಯು ಪ್ರತಿ ತಿರುವಿನಲ್ಲಿ ಮತ್ತು ಹಾದುಹೋಗುವ ಪ್ರತಿ ಕ್ಷಣದಲ್ಲೂ ಪ್ರೇಕ್ಷಕರನ್ನು ಅಚ್ಚರಿಗೊಳಿಸುತ್ತಲೇ ಇರುತ್ತದೆ ಎಂದು ಚಂಕಿ ಪಾಂಡೆ ಹೇಳುತ್ತಾರೆ.

'ರೂಹ್' ಮೂಲಕ 5 ವರ್ಷಗಳ ನಂತರ ಹಾರರ್ ಚಿತ್ರಕ್ಕೆ ಮರಳಲಿದ್ದಾರೆ ಇಮ್ರಾನ್ ಹಶ್ಮಿ



ರೂಹ್,ಇಮ್ರಾನ್ ಹಶ್ಮಿ ಅವರನ್ನು ಅವರ ಹೃದಯಕ್ಕೆ ಹತ್ತಿರವಾದ ಮತ್ತು ಅವರನ್ನು ಯಾವಾಗಲೂ ಪ್ರೀತಿಸುವ ಸಿನಿಮಾ ಪ್ರೇಕ್ಷಕರೊಂದಿಗೆ ಆಳವಾಗಿ ಸಂಪರ್ಕ ಹೊಂದಿದ ಜಗತ್ತಿಗೆ ತರುತ್ತದೆ.ಈ ಚಿತ್ರವನ್ನು ಲುಪಾಚುಪಿ ಮತ್ತು ಚೋರಿ ಚಿತ್ರಗಳಿಗೆ ಹೆಸರುವಾಸಿಯಾದ ಮಯಾಂಕ್ ಶರ್ಮಾ ಮತ್ತು ವಿಶಾಲ್ ಕಪೂರ್ ಬರೆದಿದ್ದಾರೆ ಮತ್ತು ವಿಕ್ಡ್ ಫಿಲ್ಮ್ಸ್ ಪ್ರೊಡಕ್ಷನ್‌ನ ವಿಕ್ರಮ್ ಖಾಖರ್ ಮತ್ತು ಸನ್ನಿ ಖನ್ನಾ ನಿರ್ಮಿಸಿದ್ದಾರೆ.

ಒಂದು ಪೀಳಿಗೆಗೆ ಹಾರರ್‌ಚಿತ್ರವನ್ನು ಮರು ವ್ಯಾಖ್ಯಾನಿಸಿದ ಮತ್ತು ಭಾರತೀಯ ಸಿನಿಮಾದಲ್ಲಿ ಈ ಪ್ರಕಾರದ ಅತ್ಯಂತ ಗುರುತಿಸಬಹುದಾದ ಮುಖಗಳಲ್ಲಿ ಒಬ್ಬರಾದ ನಂತರ,ಇಮ್ರಾನ್ ಹಶ್ಮಿ 'ರೂಹ್' ಚಿತ್ರದ ಮೂಲಕ ನಾಟಕೀಯ ಅನುಭವಕ್ಕಾಗಿ ವಿನ್ಯಾಸಗೊಳಿಸಲಾದ ಉನ್ನತ-ಪರಿಕಲ್ಪನೆಯ ಸಂಗೀತ-ಹಾರರ್‌ಚಿತ್ರವಾಗಿ ಹೊರಹೊಮ್ಮಲಿದೆ. ಈ ಚಿತ್ರವು 2027 ರಲ್ಲಿ ಹಿಂದಿ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಬಿಡುಗಡೆಯಾಗಲಿದೆ.

ಪ್ರೈಮ್ ವಿಡಿಯೋದ ಬ್ರೀತ್ ಫ್ರಾಂಚೈಸ್‌ನ ಸೃಷ್ಟಿಕರ್ತ-ನಿರ್ದೇಶಕ ಮಾಯಾಂಕ್ ಶರ್ಮಾ ನಿರ್ದೇಶನದ 'ರೂಹ್' ಹೊಸ ಯುಗದ ಹಾರರ್, ಸಂಗೀತ ಮತ್ತು ಭಾವನೆಗಳ ವಿಶಿಷ್ಟ ಮಿಶ್ರಣವನ್ನು ಒಟ್ಟುಗೂಡಿಸುತ್ತದೆ,ಇದನ್ನು ಬೆಚ್ಚಿಬೀಳಿಸುವ ಸಿನಿಮೀಯ ಅನುಭವವಾಗಿ ಕಲ್ಪಿಸಲಾಗಿದೆ.ಮಾನಸಿಕ ಆಳ, ವಾತಾವರಣ ಮತ್ತು ಪಾತ್ರ ಆಧಾರಿತ ಕಥೆ ಹೇಳುವಿಕೆಯಲ್ಲಿ ಹಿಡಿತಕ್ಕೆ ಹೆಸರುವಾಸಿಯಾದ ಮಯಾಂಕ್,ದೊಡ್ಡ ಪರದೆಗಾಗಿ ನಿರ್ಮಿಸಲಾದ ಈ ಚಿತ್ರಕ್ಕೆ ತಮ್ಮ ತಲ್ಲೀನಗೊಳಿಸುವ ದೃಷ್ಟಿಕೋನವನ್ನು ತರುತ್ತಾರೆ.

ಚಿತ್ರದ ಬಗ್ಗೆ ಮಾತನಾಡುತ್ತಾ, ಇಮ್ರಾನ್ ಹಶ್ಮಿ, 'ರೂಹ್ ಚಿತ್ರವು ನನ್ನೊಂದಿಗೆ ತಕ್ಷಣ ಸಂಪರ್ಕ ಹೊಂದಿದ ಚಿತ್ರ. ಏಕೆಂದರೆ ಅದು ಹೊಸ ಯುಗದ ಹಾರರ್, ಭಾವನೆ ಮತ್ತು ಸಂಗೀತವನ್ನು ಅತ್ಯಂತ ಶಕ್ತಿಯುತ ರೀತಿಯಲ್ಲಿ ಒಟ್ಟುಗೂಡಿಸುತ್ತದೆ. ಇದು ಪ್ರೇಕ್ಷಕರು ಯಾವಾಗಲೂ ನನ್ನೊಂದಿಗೆ ಸಂಬಂಧ ಹೊಂದಿರುವ ಸ್ಥಳವಾಗಿದೆ ಮತ್ತು ಮಯಾಂಕ್ ಸೃಷ್ಟಿಸುತ್ತಿರುವ ಪ್ರಪಂಚವು ತೀವ್ರ, ಭಾವನಾತ್ಮಕ ಮತ್ತು ಸಿನಿಮೀಯವಾಗಿದೆ.ರೂಹ್ ಬಗ್ಗೆ ನನಗೆ ಹೆಚ್ಚು ಉತ್ಸಾಹ ತಂದದ್ದು ಅದೇ, ಮತ್ತು ಪ್ರೇಕ್ಷಕರು ಅದನ್ನು ದೊಡ್ಡ ಪರದೆಯಲ್ಲಿ ಅನುಭವಿಸುವುದನ್ನು ನಾನು ನಿಜವಾಗಿಯೂ ಎದುರು ನೋಡುತ್ತಿದ್ದೇನೆ.

'ಹಾರರ್‌ಪ್ರಕಾರವನ್ನು ಯಾವಾಗಲೂ ಪ್ರೀತಿಸುವ ವ್ಯಕ್ತಿಯಾಗಿ...ರೂಹ್ ಭಯವನ್ನು ಮೀರಿದ ಚಿತ್ರವನ್ನು ರಚಿಸಲು ನಾನು ಮಾಡಿದ ಪ್ರಯತ್ನ. ಇದು ಭಾವನಾತ್ಮಕವಾಗಿ ಪದರ ಪದರಗಳಾಗಿ ಮತ್ತು ಆತಂಕಕಾರಿ ವಾತಾವರಣದಲ್ಲಿ ಮುಳುಗಿದ್ದು ಮತ್ತು ಸಮಕಾಲೀನ ಸಿನಿಮೀಯ ಚಿಕಿತ್ಸೆಯೊಂದಿಗೆ ಪ್ರಸ್ತುತಪಡಿಸಲಾಗಿದೆ...ಈ ಆಳವಾದ ಪದರ ಪದರ ಪಾತ್ರಕ್ಕಾಗಿ ಇಮ್ರಾನ್ ಅವರೊಂದಿಗೆ ಸಹಕರಿಸಲು ನಾನು ರೋಮಾಂಚನಗೊಂಡಿದ್ದೇನೆ. ನನ್ನ ಇಡೀ ತಂಡ ಮತ್ತು ನಾನು ಪ್ರೇಕ್ಷಕರಿಗೆ ನಿಜವಾಗಿಯೂ ವಿಶಿಷ್ಟ ಮತ್ತು ಮರೆಯಲಾಗದ ಭಯಾನಕ ಅನುಭವವನ್ನು ತರಲು ಆಶಿಸುತ್ತೇವೆ' ಎನ್ನುತ್ತಾರೆ.

ರೂಹ್‌ನೊಂದಿಗೆ,ಸಾಮಾನ್ಯ ಭಯಾನಕ ಚಿತ್ರದ ಸಂಪ್ರದಾಯಗಳನ್ನು ಮೀರಿದ ಕಾಡುವ, ತಲ್ಲೀನಗೊಳಿಸುವ ಮತ್ತು ಭಾವನಾತ್ಮಕವಾಗಿ ಉತ್ಸುಕವಾಗಿರುವ ಸಿನಿಮೀಯ ಪ್ರಯಾಣವನ್ನು ರಚಿಸುವುದು ಇದರ ಉದ್ದೇಶವಾಗಿದೆ.

ಚಿತ್ರದ ವಾಣಿಜ್ಯ ಬಲಕ್ಕೆ ಸೇರಿಸುವುದು ಅದರ ಸಂಗೀತ. ನಿಜವಾದ ಇಮ್ರಾನ್ ಹಶ್ಮಿ ಶೈಲಿಯಲ್ಲಿ, ರೂಹ್ ಪ್ರಬಲವಾದ ಧ್ವನಿಪಥವನ್ನು ಹೊಂದಲಿದ್ದಾರೆ, ಅದರ ರಾಗದ ಮೊದಲ ನೋಟವು ಪ್ರೇಕ್ಷಕರು ಯಾವಾಗಲೂ ಅವರ ಚಲನಚಿತ್ರಗಳೊಂದಿಗೆ ಸಂಯೋಜಿಸಿರುವ ಮಧುರ,ಹಂಬಲ ಮತ್ತು ಭಾವನಾತ್ಮಕ ಸ್ಮರಣೆಯನ್ನು ಈಗಾಗಲೇ ಸೂಚಿಸುತ್ತದೆ.ಹಾರರ್ ಮತ್ತು ಸ್ಮರಣೀಯ ಸಂಗೀತದ ಸಂಯೋಜನೆಯು ಚಿತ್ರಕ್ಕೆ ಸಿನಿಮಾ, ಡಿಜಿಟಲ್, ಸಂಗೀತ, ಯುವಕರು ಮತ್ತು ವಿಶಾಲ ಪ್ರೇಕ್ಷಕರಲ್ಲಿ ಬಲವಾದ ಅಂಚನ್ನು ನೀಡುತ್ತದೆ.

ಈ ಯೋಜನೆಯನ್ನು ಜಾಗತಿಕ ಮಹತ್ವಾಕಾಂಕ್ಷೆಗಳೊಂದಿಗೆ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಉದ್ಯಮದ ಒಳಗಿನವರು ಸೂಚಿಸುತ್ತಾರೆ, ಇದು ಚಲನಚಿತ್ರದ ದೃಶ್ಯ ಪ್ರಮಾಣ ಮತ್ತು ಒಟ್ಟಾರೆ ಸಿನಿಮಾ ಅನುಭವವನ್ನು ಹೆಚ್ಚಿಸುವ ಅಂತರರಾಷ್ಟ್ರೀಯ ಸೃಜನಶೀಲ ಮತ್ತು ತಾಂತ್ರಿಕ ಸಹಯೋಗಗಳಿಂದ ಬೆಂಬಲಿತವಾಗಿದೆ.

ಸಾಂಪ್ರದಾಯಿಕ ಹಾರರ್ ಚಿತ್ರಕ್ಕಿಂತ ಹೆಚ್ಚಾಗಿ,ರೂಹ್ ಭಯ,ಭಾವನೆ,ಸಂಗೀತ ಮತ್ತು ಅಲೌಕಿಕ ಶಕ್ತಿಯನ್ನು ಭಾರತ ಮತ್ತು ಅದರಾಚೆಗಿನ ಪ್ರೇಕ್ಷಕರಿಗಾಗಿ ವಿನ್ಯಾಸಗೊಳಿಸಲಾದ ನಾಟಕೀಯ ಜಗತ್ತಿನಲ್ಲಿ ಬೆರೆಸುತ್ತದೆ. ಪ್ರಮುಖ ವಾಣಿಜ್ಯ ಚಾಲಕನಾಗಿ ಮಾಯಾಂಕ್ ಶರ್ಮಾ ಅವರ ತಲ್ಲೀನಗೊಳಿಸುವ ದೃಷ್ಟಿ ಮತ್ತು ಸಂಗೀತದೊಂದಿಗೆ, ರೂಹ್ ಗಮನಿಸಬೇಕಾದ ಅತ್ಯಂತ ರೋಮಾಂಚಕಾರಿ ಹಾರರ್‌ಗುಣಲಕ್ಷಣಗಳಲ್ಲಿ ಒಂದಾಗಿ ರೂಪುಗೊಳ್ಳುತ್ತಿದೆ.

ಸಲ್ಮಾನ್ ಖಾನ್‌ಗೆ ಹಿನ್ನಡೆ: 'ಕಾಲಾ ಹಿರಣ್' ಚಿತ್ರದ ತುರ್ತು ನಿಷೇಧಕ್ಕೆ ದೆಹಲಿ ಹೈಕೋರ್ಟ್ ನಿರಾಕರಣೆ



ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ದೆಹಲಿ ಹೈಕೋರ್ಟ್‌ನಲ್ಲಿ ಸದ್ಯಕ್ಕೆ ಹಿನ್ನಡೆ ಆಗಿದೆ. ಅವರ ಜೀವನಾಧಾರಿತ ಎನ್ನಲಾದ 'ಕಾಲಾ ಹಿರಣ್:ದಿ ಬ್ಯಾಟಲ್ ಫಾರ್‌ಲೆಗಸಿ' ಚಿತ್ರದ ಬಿಡುಗಡೆಗೆ ತಡೆಯಾಜ್ಞೆ ನೀಡಬೇಕೆಂಬ ಮನವಿಯ ವಿಚಾರಣೆಯನ್ನು ನ್ಯಾಯಾಲಯವು ಮುಂದೂಡಿದೆ. ಇದರಿಂದಾಗಿ ಸಲ್ಮಾನ್ ಖಾನ್ ಅವರು ಕೋರ್ಟ್ ತೀರ್ಪಿಗಾಗಿ ಜುಲೈ 1ರವರೆಗೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಲೈವ್ ಲಾ ಇಂಡಿಯಾ ವರದಿಯ ಪ್ರಕಾರ, ಜಸ್ಟಿಸ್ ಮಧು ಜೈನ್ ಅವರ ನೇತೃತ್ವದ ಪೀಠವು, ಸಲ್ಮಾನ್ ಖಾನ್ ಅವರ ಕಾನೂನು ತಂಡಕ್ಕೆ ಮೊಕದ್ದಮೆಯ ಸಂಪೂರ್ಣ ದಾಖಲೆಗಳನ್ನು ಚಿತ್ರನಿರ್ಮಾಪಕರಿಗೆ ಸಲ್ಲಿಸುವಂತೆ ಆದೇಶಿಸಿದೆ. ತದನಂತರ ವಿವರವಾದ ವಾದ-ಪ್ರತಿವಾದ ಆಲಿಸಲು ಪ್ರಕರಣವನ್ನು ಜುಲೈ 1ಕ್ಕೆ ಮುಂದೂಡಿದೆ.

1998ರ ಕೃಷ್ಣಮೃಗ ಬೇಟೆ ಪ್ರಕರಣ ಮತ್ತು ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಜೊತೆಗಿನ ವಿವಾದಗಳನ್ನು ಆಧರಿಸಿ 'ಕಾಲಾ ಹಿರಣ್' ಸಿನಿಮಾ ಮಾಡಲಾಗುತ್ತಿದೆ ಎಂದು ಆರೋಪಿಸಿ ಸಲ್ಮಾನ್ ಖಾನ್ ಕೋರ್ಟ್ ಮೆಟ್ಟಿಲೇರಿದ್ದಾರೆ. ಆದರೆ ಇದು ಸಲ್ಮಾನ್ ಖಾನ್ ಅವರ ಕಹಾನಿ ಅಲ್ಲ ಎಂದು ಚಿತ್ರದ ನಿರ್ಮಾಪಕರು ವಾದಿಸುತ್ತಿದ್ದಾರೆ. ಹಾಗಿದ್ದರೂ ಟೀಸರ್‌ನಲ್ಲಿ ಸಲ್ಮಾನ್ ಖಾನ್ ಅವರಿಗೆ ಸಾಮ್ಯತೆ ಕಾಣಿಸಿದೆ.

ಸಲ್ಮಾನ್ ಖಾನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಸಂದೀಪ್ ಸೇಥಿ,ನನ್ನ ಕಕ್ಷಿದಾರರ ಜೀವನದ ಆಧಾರದ ಮೇಲೆ ಸಿನಿಮಾ ಮಾಡುತ್ತಿದ್ದಾರೆ.ಇದಕ್ಕೆ ಅವರಿಗೆ ಯಾವುದೇ ಹಕ್ಕಿಲ್ಲ, ನಾವು ಯಾವುದೇ ಅನುಮತಿ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು. ಸಿನಿಮಾದಲ್ಲಿ ಸಲ್ಮಾನ್ ಖಾನ್ ಹೆಸರನ್ನು ನೇರವಾಗಿ ಬಳಸದಿದ್ದರೂ, ಕಥೆ ಮತ್ತು ಪಾತ್ರಗಳು ಅವರ ನಿಜ ಜೀವನಕ್ಕೆ ತೀರಾ ಹತ್ತಿರವಾಗಿವೆ ಎಂದು ದೂರಲಾಗಿದೆ.

ಚಿತ್ರದ ಟೀಸರ್‌ನಲ್ಲಿ ನಾಯಕ ನಟನು ಸಲ್ಮಾನ್ ಖಾನ್ ಅವರಂತೆ ಕಾಣುವುದಲ್ಲದೆ, ಅವರ ಸಿಗ್ನೇಚರ್ ಆದ ಬ್ಲೂ ಬ್ರೇಸ್ಲೆಟ್ ಧರಿಸಿರುವುದು ಇದಕ್ಕೆ ಸಾಕ್ಷಿ ಎಂದು ವಕೀಲರು ವಾದಿಸಿದರು.ಅಲ್ಲದೆ, ಶಸ್ತ್ರಾಸ್ತ್ರ ಕಾಯ್ದೆ ಪ್ರಕರಣದಲ್ಲಿ ಸಲ್ಮಾನ್ ಖಾನ್ ಖುಲಾಸೆಯಾಗಿದ್ದರೂ,ಟೀಸರ್‌ನಲ್ಲಿ ನಾಯಕ ಗನ್ ಹಿಡಿದಿರುವುದನ್ನು ತೋರಿಸಿ ತಪ್ಪು ಮಾಹಿತಿ ನೀಡಲಾಗುತ್ತಿದೆ ಎಂದು ಅವರು ದೂರಿದ್ದಾರೆ.

ಚಿತ್ರದ ಬಿಡುಗಡೆಗೆ ತಕ್ಷಣವೇ ತಡೆ ನೀಡಬಾರದು ಎಂದು ಚಿತ್ರನಿರ್ಮಾಪಕರ ವಕೀಲರು ಕೋರಿದರು. ಸಲ್ಮಾನ್ ಖಾನ್ ತಂಡದಿಂದ ತಮಗೆ ಕೇವಲ ಅರ್ಧದಷ್ಟು ಕಾನೂನು ದಾಖಲೆಗಳು ಮಾತ್ರ ಸಿಕ್ಕಿವೆ ಎಂದು ಅವರು ನ್ಯಾಯಾಲಯಕ್ಕೆ ತಿಳಿಸಿದರು. ಇದರೊಂದಿಗೆ, ಈ ಸಿನಿಮಾದ ವಿವಾದದಿಂದ ಚಿತ್ರತಂಡಕ್ಕೆ ಜೀವ ಬೆದರಿಕೆ ಕರೆಗಳು ಬರುತ್ತಿದ್ದು, ಈಗಾಗಲೇ ಈ ಬಗ್ಗೆ ಪೊಲೀಸರಿಗೆ ದೂರು ನೀಡಿರುವುದಾಗಿ ವಕೀಲರು ಕೋರ್ಟ್ ಗಮನಕ್ಕೆ ತಂದರು.

'ಸಮಂತಾ ತಾಯಿ ಆಗುತ್ತಿರುವುದು ನಿಜ';ಕೊನೆಗೂ ಸಿಕ್ತು ಗುಡ್ ನ್ಯೂಸ್






ಸಮಂತಾ 'ಮಾ ಇಂಟಿ ಬಂಗಾರಂ' ಸಿನಿಮಾದ ಯಶಸ್ಸಿನ ಅಲೆಯಲ್ಲಿ ತೇಲುತ್ತಿದ್ದಾರೆ.ಈ ಚಿತ್ರ ಮೂರೇ ದಿನಕ್ಕೆ 40+ ಕೋಟಿ ರೂಪಾಯಿ ಗಳಿಕೆ ಮಾಡಿ ಬೀಗಿದೆ.ಈ ಸಿನಿಮಾ ಗೆದ್ದ ಖುಷಿಯಲ್ಲಿ ಸಮಂತಾ ಮಾತನಾಡುವಾಗ ಎಲ್ಲರ ಗಮನ ಅವರ ಹೊಟ್ಟೆಯ ಮೇಲೆ ನೆಟ್ಟಿತ್ತು.ಅವರು ತಾಯಿ ಆಗುತ್ತಿದ್ದಾರೆ ಎಂದು ಎಲ್ಲರೂ ಭಾವಿಸಿದ್ದರು. ಈಗ ಈ ಊಹೆ ಸರಿಯಾಗಿದೆ.ಸಮಂತಾ ತಾಯಿ ಆಗುತ್ತಿರುವ ವಿಷಯವನ್ನು ಅವರ ಆಪ್ತರೇ ಖಚಿತಪಡಿಸಿದ್ದಾರೆ.ನಾಗ ಚೈತನ್ಯ ಜೊತೆಗಿನ ವಿಚ್ಛೇದನದ ಬಳಿಕ ರಾಜ್ ನಿಧಿಮೋರು ಅವರನ್ನು ಸಮಂತಾ ವಿವಾಹ ಆದರು. ಕಳೆದ ವರ್ಷ ಡಿಸೆಂಬರ್1ರಂದು ಈ ವಿವಾಹ ನೆರವೇರಿತು.ಆಪ್ತರು ಹಾಗೂ ಕುಟುಂಬದವರು ಮಾತ್ರ ಈ ಮದುವೆಯಲ್ಲಿ ಭಾಗಿ ಆದರು.ಈಗ ಸಮಂತಾ ಅವರು ತಾಯಿ ಆಗುತ್ತಿದ್ದಾರೆ.ಸಮಂತಾ ಆಪ್ತ ಗೆಳತಿ ಹಾಗೂ ಮಾ ಇಂಟಿ ಬಂಗಾರಂ ನಿರ್ದೇಶಕ ನಂದಿನಿ ರೆಡ್ಡಿ ಅವರೇ ಈ ವಿಷಯ ಖಚಿತಪಡಿಸಿದ್ದಾರೆ.

'ಸಿನೇಮಾ ಎಕ್ಸ್‌ಪ್ರೆಸ್'ಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ನಂದಿನಿ,'ಅವಳ ಪ್ರೆಗ್ನೆನ್ಸಿ ಸರಿಯಾದ ಹಾಗೂ ಸುಂದರ ಸಮಯದಲ್ಲಿ ಬಂದಿದೆ. ನಮ್ಮ ಸಿನಿಮಾ ಮಾ ಇಂಟಿ ಬಂಗಾರಂ ಯಶಸ್ಸು ಕಂಡಿದೆ' ಎಂದು ಅವರು ಹೇಳಿದ್ದಾರೆ.ಈ ಮೂಲಕ ಸಮಂತಾ ತಾಯಿ ಆಗುತ್ತಿರುವ ವಿಷಯ ಬಹುತೇಕ ಅಧಿಕೃತವಾದಂತೆ ಆಗಿದೆ.'ಮಾ ಇಂಟಿ ಬಂಗಾರಂ' ಸಿನಿಮಾ ತಂಡ ಇತ್ತೀಚೆಗೆ ಸಕ್ಸಸ್ ಮೀಟ್ ಆಯೋ ಜನೆ ಮಾಡಿತ್ತು.ಇದರಲ್ಲಿ ಅವರು ಸ್ವಲ್ಪ ಟೈಟ್ ಶರ್ಟ್ ಧರಿಸಿದ್ದರಿಂದ ಹೊಟ್ಟೆ ದೊಡ್ಡದಾಗಿ ಕಾಣುತ್ತಾ ಇತ್ತು.ಆಗಿನಿಂದ ಸಮಂತಾ ಪ್ರೆಗ್ನೆನ್ಸಿ ವಿಷಯ ಹರಿದಾಡಿತ್ತು.ಸಮಂತಾ ಕಡೆಯಿಂದ ಈ ಬಗ್ಗೆ ಅಧಿಕೃತ ಮಾಹಿತಿ ಸಿಗಲಿ ಎಂದು ಫ್ಯಾನ್ಸ್ ಬಯಸುತ್ತಿದ್ದಾರೆ.'ಮಾ ಇಂಟಿ ಬಂಗಾರಂ ಸಿನಿಮಾದಲ್ಲಿ ಕನ್ನಡದ ದಿಗಂತ್ ಕೂಡ ನಟಿಸಿದ್ದಾರೆ.ಈ ಚಿತ್ರಕ್ಕೆ ಕೆಲವರು ಪಾಸಿಟಿವ್ ಪ್ರತಿಕ್ರಿಯೆ ಹೊರಹಾಕಿದರೆ ಇನ್ನೂ ಕೆಲವರು ಮಿಶ್ರ ಪ್ರತಿಕ್ರಿಯೆ ಕೊಟ್ಟಿದ್ದಾರೆ.

ತೇರಾ ಯಾರ್ ಹೂ ಮೈ ಜುಲೈ 24 ಕ್ಕೆ ಮುಂಚಿತ ಬಿಡುಗಡೆ ;ಶೀರ್ಷಿಕೆ ಗೀತೆಯ ಟೀಸರ್ ಬಿಡುಗಡೆ!



ತೇರಾ ಯಾರ್‌ಹೂ ಮೈ ನಿರ್ಮಾಪಕರು ಮುಂಬರುವ ಪ್ರಣಯ ನಾಟಕದ ಹೊಸ ಬಿಡುಗಡೆ ದಿನಾಂಕವನ್ನು ಘೋಷಿಸಿದ್ದಾರೆ ಮತ್ತು ಅದರ ಶೀರ್ಷಿಕೆ ಗೀತೆಯ ಟೀಸರ್‌ಅನ್ನು ಸಹ ಅನಾವರಣಗೊಳಿಸಿದ್ದಾರೆ. ಚೊಚ್ಚಲ ನಟ ಅಮನ್ ಇಂದ್ರ ಕುಮಾರ್ ಅವರೊಂದಿಗೆ ಆಕಾಂಕ್ಷಾ ಶರ್ಮಾ ನಟಿಸಿರುವ ಈ ಚಿತ್ರವು ಈಗ ಜುಲೈ 24, 2026 ರಂದು ಚಿತ್ರ ಮಂದಿರಗಳಿಗೆ ಆಗಮಿಸಲಿದೆ, ಇದು ಹಿಂದೆ ಘೋಷಿಸಲಾದ ಬಿಡುಗಡೆ ದಿನಾಂಕಕ್ಕಿಂತ ಒಂದು ವಾರ ಮುಂಚಿತವಾಗಿ.

ಇತ್ತೀಚಿನ ಘೋಷಣೆಯೊಂದಿಗೆ ಚಿತ್ರದ ಶೀರ್ಷಿಕೆ ಗೀತೆಯ ಒಂದು ನೋಟವಿದ್ದು, ಇದು ಕಥೆಯ ತಿರುಳನ್ನು ರೂಪಿಸುವ ಸ್ನೇಹ, ಪ್ರೀತಿ ಮತ್ತು ಸಂಬಂಧಗಳ ಭಾವನಾತ್ಮಕ ಪ್ರಪಂಚದತ್ತ ಪ್ರೇಕ್ಷಕರಿಗೆ ಒಂದು ಇಣುಕು ನೋಟ ನೀಡುತ್ತದೆ.

3ನೇ ಬಾರಿಗೆ ಬಿಡುಗಡೆ ದಿನಾಂಕ ಪರಿಷ್ಕರಣೆ

ತೇರಾ ಯಾರ್‌ಹೂ ಮೈ ಚಿತ್ರವು ಕಳೆದ ಕೆಲವು ತಿಂಗಳುಗಳಿಂದ ತನ್ನ ಬಿಡುಗಡೆ ವೇಳಾಪಟ್ಟಿಯಲ್ಲಿ ಹಲವಾರು ಬದಲಾವಣೆಗಳನ್ನು ಕಂಡಿದೆ. ಈ ಚಿತ್ರವು ಆರಂಭದಲ್ಲಿ ಮೇ 22, 2026 ರಂದು ಬಿಡುಗಡೆಯಾಗಬೇಕಿತ್ತು. ನಂತರ ಅದನ್ನು ಜುಲೈ 31, 2026 ಕ್ಕೆ ಮುಂದೂಡಲಾಯಿತು. ಇತ್ತೀಚಿನ ನವೀಕರಣದೊಂದಿಗೆ, ತಯಾರಕರು ಬಿಡುಗಡೆಯನ್ನು ಒಂದು ವಾರ ಮುಂದಕ್ಕೆ ಹಾಕಿದ್ದಾರೆ, ಜುಲೈ 24 ಅನ್ನು ಅದರ ಅಂತಿಮ ಥಿಯೇಟ್ರಿಕಲ್ ಬಿಡುಗಡೆ ದಿನಾಂಕವಾಗಿ ನಿಗದಿಪಡಿಸಿದ್ದಾರೆ.

ಪರಿಷ್ಕೃತ ವೇಳಾಪಟ್ಟಿಯಿಂದಾಗಿ ಜುಲೈ 30 ರಂದು ಭಾರತದಲ್ಲಿ ಬಿಡುಗಡೆಯಾಗಲಿರುವ ಹಾಲಿವುಡ್‌ನ ಸ್ಪೈಡರ್‌ಮ್ಯಾನ್: ಬ್ರಾಂಡ್ ನ್ಯೂ ಡೇ ಚಿತ್ರದೊಂದಿಗೆ ನೇರ ಘರ್ಷಣೆಯನ್ನು ತಪ್ಪಿಸಲು ಚಿತ್ರಕ್ಕೆ ಅವಕಾಶ ಸಿಕ್ಕಿದೆ.ಆದಾಗ್ಯೂ,ತೇರಾ ಯಾರ್ ಹೂ ಮೈ ಈಗ ಶ್ರೇಯಸ್ ತಲ್ಪಡೆ ಮತ್ತು ಕಾಜಲ್ ಅಗರ್ವಾಲ್ ನಟಿಸಿರುವ ದಿ ಇಂಡಿಯಾ ಸ್ಟೋರಿಯಿಂದ ಸ್ಪರ್ಧೆಯನ್ನು ಎದುರಿಸಲಿದೆ, ಇದು ಜುಲೈ 24ರಂದು ಚಿತ್ರ ಮಂದಿರಗಳಲ್ಲಿ ಬಿಡು ಗಡೆಯಾಗಲಿದೆ.

ಅಮನ್ ಇಂದ್ರ ಕುಮಾರ್ ನಟನೆಗೆ ಪಾದಾರ್ಪಣೆ

ಈ ಚಿತ್ರವು ಚಲನ ಚಿತ್ರ ನಿರ್ಮಾಪಕ ಇಂದ್ರ ಕುಮಾರ್ ಅವರ ಪುತ್ರ ಅಮನ್ ಇಂದ್ರ ಕುಮಾರ್ ಅವರ ನಟನೆ ಯನ್ನು ಸೂಚಿಸುತ್ತದೆ. ಅವರು ಆಕಾಂಕ್ಷಾ ಶರ್ಮಾ ಅವರೊಂದಿಗೆ ನಟಿಸಿದ್ದಾರೆ, ಆದರೆ ಹಿರಿಯ ನಟ ಪರೇಶ್ ರಾವಲ್ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಮಿಲಾಪ್ ಮಿಲನ್ ಜವೇರಿ ನಿರ್ದೇಶಿಸಿದ ಈ ಯೋಜನೆಯು ಒಡನಾಟ, ಭಾವನೆಗಳು ಮತ್ತು ವೈಯಕ್ತಿಕ ಬಂಧಗಳ ವಿಷಯಗಳನ್ನು ಅನ್ವೇಷಿಸುವ ಸಂಬಂಧ-ಚಾಲಿತ ಮನರಂಜನಾ ಚಿತ್ರವಾಗಿ ಸ್ಥಾನ ಪಡೆದಿದೆ.

ಶೀರ್ಷಿಕೆ ಗೀತೆಯ ಟೀಸರ್‌ಈ ಅಂಶಗಳ ಬಗ್ಗೆ ಸುಳಿವು ನೀಡುತ್ತದೆ,ಇದು ಚಿತ್ರದ ಯೌವ್ವನದ ಮತ್ತು ಭಾವನಾತ್ಮಕ ಸ್ವರವನ್ನು ಪ್ರತಿಬಿಂಬಿಸುವ ಕ್ಷಣಗಳನ್ನು ಒಳಗೊಂಡಿದೆ.ಟೀಸರ್ ಪ್ರಮುಖ ಕಥಾವಸ್ತುವಿನ ವಿವರಗಳನ್ನು ಮುಚ್ಚಿಡುತ್ತದೆ, ಇದು ಪ್ರಮುಖ ಪಾತ್ರಗಳ ನಡುವಿನ ಕೇಂದ್ರೀಯ ಚಲನಶೀಲತೆಯನ್ನು ಸ್ಥಾಪಿಸುತ್ತದೆ ಮತ್ತು ಪೂರ್ಣ ಹಾಡಿನ ಬಿಡುಗಡೆಗೆ ವೇದಿಕೆಯನ್ನು ಹೊಂದಿಸುತ್ತದೆ.

ತೇರಾ ಯಾರ್‌ಹೂ ಮೈ ಚಿತ್ರವನ್ನು ಅಜಯ್ ಮುರ್ದಿಯಾ ಅವರು ಮುಂಬೈ ಫಿಲ್ಮ್ಸ್, ಬಿಐಕೆ ಪ್ರೊಡಕ್ಷನ್ಸ್ ಮತ್ತು ಎಂಟರ್10 ಟೆಲಿವಿಷನ್ ಸಹಯೋಗದೊಂದಿಗೆ ಪ್ರಸ್ತುತಪಡಿಸಿದ್ದಾರೆ. ಈ ಚಿತ್ರವನ್ನು ಅಜಯ್ ಮುರ್ದಿಯಾ, ಬೀನಾ ಇಂದ್ರ ಕುಮಾರ್‌ಮತ್ತು ಮನೀಶ್ ಸಿಂಘಾಲ್ ನಿರ್ಮಿಸಿದ್ದಾರೆ, ಸುಭಾಷ್ ಕೇಲ್ ಸಹ-ನಿರ್ಮಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.ಈ ಯೋಜನೆಯು ಕ್ಯಾಮೆರಾ ಟೇಕ್ ಫಿಲ್ಮ್ಸ್ ನಿರ್ಮಾಣವಾಗಿದ್ದು, ಆಕ್ಷನ್ ಮತ್ತು ವಾಣಿಜ್ಯ ಮನರಂಜನಾ ಕ್ಷೇತ್ರದಾದ್ಯಂತ ಚಲನಚಿತ್ರಗಳಿಗೆ ಹೆಸರುವಾಸಿಯಾದ ಮಿಲಾಪ್ ಮಿಲನ್ ಜವೇರಿ ಅವರ ಮತ್ತೊಂದು ನಿರ್ದೇಶನದ ಸಾಹಸವನ್ನು ಗುರುತಿಸುತ್ತದೆ.ಈ ಚಿತ್ರದ ಆಗಮನವು ಅಮನ್ ಇಂದ್ರ ಕುಮಾರ್‌ಅವರಿಗೆ ಒಂದು ಪ್ರಮುಖ ಆರಂಭವಾಗಿ ಕಾರ್ಯನಿರ್ವಹಿಸುತ್ತದೆ, ಏಕೆಂದರೆ ಅವರು ಪ್ರಸಿದ್ಧ ಚಲನಚಿತ್ರ ನಿರ್ಮಾಣ ಪರಂಪರೆಯನ್ನು ಮುಂದುವರೆಸುತ್ತಾ ಪರದೆಯ ಮೇಲೆ ತಮ್ಮದೇ ಆದ ಗುರುತನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ.

ಕಾಲಾ ಹಿರಣ್ ನಿರ್ಮಾಪಕನಿಗೆ ಜೀವ ಬೆದರಿಕೆ



ಖ್ಯಾತ ಹಿಂದಿ ಚಲನಚಿತ್ರ ನಿರ್ಮಾಪಕ ಅಮಿತ್ ಜಾನಿ ಅವರ ಚಲನಚಿತ್ರ ಕಾಲಾ ಹಿರಣ್: ದಿ ಬ್ಯಾಟಲ್ ಫಾರ್ ಲೆಗಸಿ,2026 ರ ಅತ್ಯಂತ ವಿವಾದಾತ್ಮಕ ಚಿತ್ರವಾಗಿ ಹೊರಹೊಮ್ಮಿದ್ದು, ಪ್ರತಿದಿನ ಹೊಸ ವಿವಾದಗಳು ಹೊರಹೊಮ್ಮುತ್ತಿವೆ.ಇದಲ್ಲದೆ, ಈ ವಿವಾದಗಳು ಚಿತ್ರದ ಬಿಡುಗಡೆಯ ಮೇಲೆ ಪರಿಣಾಮ ಬೀರುತ್ತಿವೆ; ಕೆಲವರು ದೊಡ್ಡ ಪರದೆಯ ಮೇಲೆ ಬರಲು ಕಾತರದಿಂದ ಕಾಯುತ್ತಿದ್ದರೆ, ಇತರರು ಅದನ್ನು ತೀವ್ರವಾಗಿ ವಿರೋಧಿಸುತ್ತಾರೆ ಮತ್ತು ಅದರ ಬಿಡುಗಡೆಯನ್ನು ನಿಷೇಧಿಸಬೇಕೆಂದು ಒತ್ತಾಯಿಸುತ್ತಿದ್ದಾರೆ ಇದರ ನಡುವೆ,ಅಮಿತ್ ಜಾನಿ ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಿದ್ದಾರೆ.ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಆಡಿಯೋ ಕ್ಲಿಪ್ ಅನ್ನು ಹಂಚಿಕೊಂಡಿದ್ದಾರೆ, ಅದರಲ್ಲಿ ಒಬ್ಬ ವ್ಯಕ್ತಿ ತನಗೆ ಕೊಲೆ ಬೆದರಿಕೆ ಹಾಕುತ್ತಿರುವುದು ಕೇಳಿಬರುತ್ತಿದೆ. ಆ ವ್ಯಕ್ತಿ ತನ್ನನ್ನು ಸಲ್ಮಾನ್ ಖಾನ್ ಅವರ ಅಭಿಮಾನಿ ಎಂದೂ ಗುರುತಿಸಿಕೊಳ್ಳುತ್ತಾನೆ.ಈ ಕ್ಲಿಪ್ ಸಾಮಾಜಿಕ ಮಾಧ್ಯಮದಲ್ಲಿ ವೇಗವಾಗಿ ವೈರಲ್ ಆಗುತ್ತಿದೆ. ಆಡಿಯೋದಲ್ಲಿ, ಮಿಥುನ್ ಎಂದು ತನ್ನನ್ನು ತಾನು ಗುರುತಿಸಿಕೊಳ್ಳುವ ವ್ಯಕ್ತಿ,ಚಿತ್ರವನ್ನು ನಿಲ್ಲಿಸಲು ನಿರ್ಮಾಪಕರಿಗೆ ಎಚ್ಚರಿಕೆ ನೀಡುತ್ತಾನೆ, ಮುಂಬೈಗೆ ಬಂದು ಹಾಗೆ ಮಾಡದಿದ್ದರೆ ತನ್ನನ್ನು ಕೊಲ್ಲುವುದಾಗಿ ಬೆದರಿಕೆ ಹಾಕುತ್ತಾನೆ.ಅಮಿತ್ ಜಾನಿ ಈ ಆಡಿಯೋವನ್ನು ದೀರ್ಘ ಶೀರ್ಷಿಕೆಯೊಂದಿಗೆ ಹಂಚಿಕೊಂಡಿದ್ದಾರೆ.

ಫರ್ಹಾನ್ ಅಖ್ತರ್‌ಗಾಗಿ ಸಲ್ಮಾನ್ ಖಾನ್‌ಗೆ ರಾಕೇಶ್ ಓಂಪ್ರಕಾಶ್ ಮೆಹ್ರಾ ಪಿರಿಯಡ್ ಸಿನಿಮಾ ನಿರ್ದೇಶನ

ಸಲ್ಮಾನ್ ಖಾನ್ ಮೊದಲ ಬಾರಿಗೆ ಎಕ್ಸೆಲ್ ಎಂಟರ್ಟೈನ್ಮೆಂಟ್ ಜೊತೆ ದೊಡ್ಡ ಬಜೆಟ್ ಪಿರಿಯಡ್ ಕಥೆಯಲ್ಲಿ ಸಹಯೋಗ ಮಾಡುತ್ತಿದ್ದಾರೆ ಎಂಬ ವರದಿಗಳು ಇತ್ತೀಚೆಗೆ ಬಂದಿದ್ದವು. ಅತ್ಯಂತ ವಿಶ್ವಾಸಾರ್ಹ ಮೂಲಗಳ ಪ್ರಕಾರ,ಸಲ್ಮಾನ್ ಖಾನ್ ಎಕ್ಸೆಲ್ ಎಂಟರ್ಟೈನ್ಮೆಂಟ್ ಜೊತೆ ಒಂದು ಪಿರಿಯಡ್ ಸಿನಿಮಾಕ್ಕಾಗಿ ಮಾತುಕತೆ ನಡೆಸುತ್ತಿದ್ದಾರೆ, ಇದನ್ನು ರಾಷ್ಟ್ರೀಯ ಪ್ರಶಸ್ತಿ ವಿಜೇತ ನಿರ್ದೇಶಕ ರಾಕೇಶ್ ಓಂಪ್ರಕಾಶ್ ಮೆಹ್ರಾ ನಿರ್ದೇಶಿಸಲಿದ್ದಾರೆ.

ಮಾಧ್ಯಮವೊಂದರ ಜೊತೆ ಹಂಚಿಕೊಂಡ



ಮೂಲವೊಂದು,'ಸಲ್ಮಾನ್ ಖಾನ್ ದೊಡ್ಡ ಯೋಜನೆಗಳಿಗೆ ಸಹಿ ಹಾಕಲು ನೋಡುತ್ತಿದ್ದಾರೆ ಮತ್ತು ರಾಕೇಶ್ ಓಂಪ್ರಕಾಶ್ ಮೆಹ್ರಾ ಚಿತ್ರವು ಅವರ ಅಗಾಧವಾದ ಪ್ರಭಾವಲಯಕ್ಕೆ ನ್ಯಾಯ ಒದಗಿಸುತ್ತದೆ ಎಂದು ನಂಬುತ್ತಾರೆ.ಅವರು ಸ್ಕ್ರಿಪ್ಟ್ ಅನ್ನು ಕೇಳಿದ್ದಾರೆ ಮತ್ತು ಅವರ ಪಾತ್ರದ ಗುಣಲಕ್ಷಣಗಳಿಂದ ಆಕರ್ಷಿತರಾದರು.ಅವರು ಭಾರತೀಯ ಇತಿಹಾಸದ ಅತ್ಯಂತ ಜನಪ್ರಿಯ ಪಾತ್ರಗಳಲ್ಲಿ ಒಂದನ್ನು ನಿರ್ವಹಿಸಲಿದ್ದಾರೆ ಮತ್ತು ಅವರ ದೇಹದ ರಚನೆಯ ಸಂಪೂರ್ಣ ಬದಲಾವಣೆಗೆ ಒಳಗಾಗುತ್ತಾರೆ.'ಸಲ್ಮಾನ್ ಇನ್ನೂ ಸಹಿ ಹಾಕಿಲ್ಲ ಎಂದು ಮೂಲಗಳು ನಮಗೆ ತಿಳಿಸುತ್ತವೆ ಮತ್ತು ಎಕ್ಸೆಲ್ ಎಂಟರ್ಟೈನ್ಮೆಂಟ್ ನೊಂದಿಗೆ ಬಹು ರಂಗಗಳಲ್ಲಿ ಚರ್ಚೆಗಳು ನಡೆಯುತ್ತಿವೆ, ವಿಶೇಷವಾಗಿ ಶೂಟಿಂಗ್ ದಿನಗಳು ಮತ್ತು ಸಂಭಾವನೆ. ಎಲ್ಲವೂ ಸರಿಯಾಗಿ ನಡೆದರೆ, ಸಲ್ಮಾನ್ 2027ರ ಬೇಸಿಗೆಯ ವೇಳೆಗೆ ಚಿತ್ರದ ಚಿತ್ರೀಕರಣವನ್ನು ಪ್ರಾರಂಭಿ ಸುತ್ತಾರೆ,ನಂತರ ರಾಜ್ ಮತ್ತು ಡಿಕೆ ನಿರ್ದೇಶನದ ಸೂಪರ್‌ಹೀರೋ ಹಾಸ್ಯದ ಬಗ್ಗೆ ಮುಕ್ತಾಯಗೊಳಿಸುತ್ತಾರೆ ಎಂದು ಮೂಲಗಳು ಮಾಧ್ಯಮಕ್ಕೆ ತಿಳಿಸಿವೆ.ಈ ವರ್ಷದ ಅಂತ್ಯದ ವೇಳೆಗೆ ಈ ಯೋಜನೆಯ ಕುರಿತು ಹೆಚ್ಚಿನ ಸ್ಪಷ್ಟತೆ ಹೊರಬರಲಿದೆ,ಏಕೆಂದರೆ ಸಲ್ಮಾನ್‌ಗೆ ಮಾಹಿತಿಯುಕ್ತ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಯ ಬೇಕಾಗುತ್ತದೆ,ಆದರೆ ಪ್ರಸ್ತುತ,ಅವರು ಭಾರತೀಯ ಇತಿಹಾಸದ ಯೋಧನ ಪಾತ್ರದ ಈ ಸವಾಲಿನ ಪ್ರಯಾಣವನ್ನು ಪ್ರಾರಂಭಿಸಲು ಉತ್ಸುಕರಾಗಿದ್ದಾರೆ.

ಮತ್ತೊಂದು ಮೂಲದ ಪ್ರಕಾರ ಈ ಸಿನಿಮಾ ಕರ್ಣನ ಕುರಿತಾದ ಕತೆಯನ್ನು ಹೊಂದಿದ್ದು, ಸಿನಿಮಾದಲ್ಲಿ ಸಲ್ಮಾನ್ ಖಾನ್ ಅವರದ್ದೇ ಪ್ರಮುಖ ಪಾತ್ರ ಆಗಲಿದೆ.ಇದು ಅದೇ ಚಿತ್ರವೇ , ಬೇರೆ ಯೊಜನೆಯೇ ಎಂಬುದು ಸ್ಪಷ್ಟವಾಗಿಲ್ಲ.

ಅಸಲಿಗೆ ಕೆಲ ವರ್ಷಗಳ ಮುಂಚೆ ಇದೇ ಕತೆಯನ್ನು ರಾಕೇಶ್ ಓಂಪ್ರಕಾಶ್ ಅವರು ತಮಿಳಿನ ಸ್ಟಾರ್ ನಟ ಸೂರ್ಯಗೆ ಹೇಳಿದ್ದರಂತೆ. ಈ ಸಿನಿಮಾ ಮೂಲಕ ಸೂರ್ಯ ಬಾಲಿವುಡ್‌ಗೆ ಪದಾರ್ಪಣೆ ಮಾಡಲಿದ್ದಾರೆ ಎಂಬ ಸುದ್ದಿಗಳು ಸಹ ಹರಿದಾಡಿತ್ತು. ಆದರೆ ಇದೀಗ ರಾಕೇಶ್ ಅವರು ಸಲ್ಮಾನ್ ಖಾನ್ ಅವರನ್ನು ನಾಯಕನನ್ನಾಗಿ ಹಾಕಿಕೊಂಡು ಸಿನಿಮಾ ಮಾಡುತ್ತಿದ್ದಾರೆ. ಕರ್ಣನ ಪಾತ್ರ, ಸಲ್ಮಾನ್ ಖಾನ್ ಅವರಿಗೆ ಸೂಟ್ ಆಗುತ್ತದೆಯೇ ಇಲ್ಲವೇ ಎಂಬ ಬಗ್ಗೆ, ಖುದ್ದು ಸಲ್ಮಾನ್ ಖಾನ್ ಅಭಿಮಾನಿಗಳಿಗೇ ಈ ಬಗ್ಗೆ ಗೊಂದಲ ಇದೆ.

'ಟಾಕ್ಸಿಕ್' ಚಿತ್ರವನ್ನು ತುಳಿಯಲು ಬಾಲಿವುಡ್‌ನಲ್ಲಿ ನಡೀತಿದೆ ಸೀಕ್ರೆಟ್ ಪ್ಲ್ಯಾನ್?

ರಾಕಿಂಗ್ ಸ್ಟಾರ್ ಯಶ್ ಅಭಿನಯದ 'ಟಾಕ್ಸಿಕ್' ಸಿನಿಮಾ ಆಗಸ್ಟ್ 26ಕ್ಕೆ ರಿಲೀಸ್ ಆಗಲಿದೆ ಎಂದು ಅನೌನ್ಸ್ ಆದ ಬೆನ್ನಲ್ಲೇ ಚಿತ್ರರಂಗದಲ್ಲಿ ಸಂಚಲನ ಸೃಷ್ಟಿಯಾಗಿದೆ.ಆದರೆ, ಇದರ ಬೆನ್ನಲ್ಲೇ 'ಟಾಕ್ಸಿಕ್' ಸಿನಿಮಾದ ಹೈಪ್ ಕಮ್ಮಿ ಮಾಡಲು ಹಾಗೂ ಚಿತ್ರವನ್ನು ತುಳಿಯಲು ಸೋಶಿಯಲ್ ಮೀಡಿಯಾದಲ್ಲಿ ದೊಡ್ಡದೊಂದು ತಂತ್ರ ಶುರುವಾಗಿದೆ ಎಂಬ ಗಂಭೀರ ಆರೋಪ ಕೇಳಿ ಬರುತ್ತಿದೆ.ಇದಕ್ಕೆ ಸಾಕ್ಷಿ ರೂಪದಲ್ಲಿ ಒಂದಷ್ಟು ಟ್ವೀಟ್‌ಗಳು ಸಿಕ್ಕಿವೆ.

ಟಾಕ್ಸಿಕ್ ಸಿನಿಮಾ ಧುರಂಧರ್2 ಎದುರು ಮಾರ್ಚ್ 19ರಂದು ರಿಲೀಸ್ ಆಗಬೇಕಿತ್ತು. ಆದರೆ, ಅದು ಸಾಧ್ಯವಾಗಿಲ್ಲ.ಆಗಲೂ ಧುರಂಧರ್ 2 ಎದುರು ಬಂದರೆ ಟಾಕ್ಸಿಕ್ ಸಿನಿಮಾ ಹಳ್ಳ ಹಿಡಿಯುತ್ತದೆ ಎಂದೆಲ್ಲ ಬಾಲಿವುಡ್‌ನಲ್ಲಿ ಮಾತನಾಡಿಕೊಳ್ಳಲಾಯಿತು.ಆದರೆ,ಕಾರಣಾಂತರಗಳಿಂದ ಟಾಕ್ಸಿಕ್ ರಿಲೀಸ್ ಮುಂದಕ್ಕೆ ಹೋಯಿತು.ಈಗ ಈಥಾ ತಂಡದವರು ಇದೇ ರೀತಿಯಲ್ಲಿ ತಂತ್ರ ಮಾಡುತ್ತಿದ್ದಾರೆಯೇ ಎನ್ನುವ ಪ್ರಶ್ನೆ ಮೂಡಿದೆ.

ಸದ್ಯದ ಅಪ್‌ಡೇಟ್ ಪ್ರಕಾರ,ಈಥಾ ಚಿತ್ರತಂಡ ಈಗಾಗಲೇ ಪ್ಯಾನಿಕ್ ಬಟನ್ ಒತ್ತಿದ್ದು, ಡ್ಯಾಮೇಜ್ ಕಂಟ್ರೋಲ್ ಮಾಡಲು ಮುಂದಾಗಿದೆ ಎನ್ನಲಾಗುತ್ತಿದೆ.ಇದಕ್ಕೆ ಪೂರಕವೆಂಬಂತೆ ಎಕ್ಸ್ ತಾಣದಲ್ಲಿ ಈಥಾ ವರ್ಸಸ್ ಟಾಕ್ಸಿಕ್ ಎಂಬ ಟ್ರೆಂಡ್ ಸೃಷ್ಟಿಸಿ,ಯಶ್ ಚಿತ್ರವನ್ನು ಕೆಳಕ್ಕೆ ತಳ್ಳುವ ಪ್ರಯತ್ನ ನಡೆಯುತ್ತಿದೆ.

ಒಂದೇ ರೀತಿಯ ಟ್ವೀಟ್:ಬಯಲಾಯ್ತು ಪಿಆರ್ ಸ್ಟಂಟ್?

ಟ್ವಿಟರ್‌ನಲ್ಲಿ ಹರಿದಾಡುತ್ತಿರುವ ಪ್ರತಿಯೊಂದು ಟ್ವೀಟ್‌ನ ಮುಖ್ಯ ಉದ್ದೇಶ ಟಾಕ್ಸಿಕ್ ಸಿನಿಮಾವನ್ನು ಡೀಗ್ರೇಡ್ ಮಾಡುವುದೇ ಆಗಿದೆ. ಈಥಾ ಚಿತ್ರದ ಜೊತೆ ಯಶ್ ಸಿನಿಮಾವನ್ನು ಹೋಲಿಕೆ ಮಾಡುವುದು ಹಾಗೂ ರಿಲೀಸ್ ಡೇಟ್ ವಿಷಯವಾಗಿ ಟಾರ್ಗೆಟ್ ಮಾಡಲಾಗುತ್ತಿದೆ.ಆದರೆ,ಇಲ್ಲಿ ಹಾಸ್ಯದ ವಿಷಯ ಏನೆಂದರೆ ಈ ಪಿಆರ್ ಸ್ಟಂಟ್ ಮಾಡುತ್ತಿರುವವರು ಕನಿಷ್ಠ ಪಕ್ಷ ಟ್ವೀಟ್‌ಗಳ ಭಾಷೆ ಅಥವಾ ಸಾಲುಗಳನ್ನು ಬದಲಾಯಿಸುವ ಗೋಜಿಗೆ ಹೋಗಿಲ್ಲ.ಪ್ರತಿಯೊಬ್ಬರೂ ಒಂದೇ ರೀತಿಯ ಸಾಲುಗಳನ್ನು ಕಾಪಿ-ಪೇಸ್ಟ್ ಮಾಡಿ ಟ್ವೀಟ್ ಮಾಡುತ್ತಿರುವುದು ನೆಟ್ಟಿಗರ ಕಣ್ಣಿಗೆ ಬಿದ್ದಿದ್ದು, ಈ ಬಾಲಿಶ ಪಿಆರ್‌ತಂತ್ರ ನಗೆಪಾಟಲಿಗೀಡಾಗಿದೆ.





ಸಿನಿಮಾ ವಿಶ್ಲೇಷಕರ ಪ್ರಕಾರ,ಈಥಾ ಸಿನಿಮಾ ಹೇಗಿದ್ದರೂ ಕೊನೆಗೆ ತನ್ನ ಬಿಡುಗಡೆ ದಿನಾಂಕವನ್ನು ಮುಂದೂಡುವುದು ಬಹುತೇಕ ಪಕ್ಕಾ ಆಗಿದೆ. ಹೀಗಿರುವಾಗ ಸೋಶಿಯಲ್ ಮೀಡಿಯಾದಲ್ಲಿ ಇಲ್ಲದ ಪರ್ಸೆಪ್ಷನ್ ಕ್ರಿಯೇಟ್ ಮಾಡಲು ಮತ್ತು ಟಾಕ್ಸಿಕ್ ಇಮೇಜ್‌ಗೆ ಧಕ್ಕೆ ತರಲು ಇಂತಹ ತಂತ್ರಗಳನ್ನು ಮಾಡುತ್ತಿರುವುದು ಸದ್ಯ ಗಾಂಧಿನಗರ ಹಾಗೂ ಸೋಶಿಯಲ್ ಮೀಡಿಯಾದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಭವಾನಿ ಫೌಂಡೇಶನ್‌ನಿಂದ ಅಂಬರ್‌ನಾಥ್ ಎಸ್. ನಿಜಲಿಂಗಪ್ಪ ಕನ್ನಡ ಶಾಲೆಯಲ್ಲಿ ನೂತನ ಶೌಚಾಲಯ ಉದ್ಘಾಟನೆ : ಉಚಿತ ಶಾಲಾ ಪರಿಕರಗಳ ವಿತರಣೆ

ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಶಿಕ್ಷಣ ಒದಗಿಸುವುದು ನಮ್ಮ ಫೌಂಡೇಶನ್ ಮುಖ್ಯ ಗುರಿ - ಚೆಲ್ಲಡ್ಕ ಕುಸುಮೋದರ ಶೆಟ್ಟಿ

















ಅಂಬರ್‌ನಾಥ್, ಜೂ. 27- ಶಿಕ್ಷಣದಿಂದಲೇ ಮಕ್ಕಳ ಬದುಕು ಉಜ್ವಲವಾಗುತ್ತದೆ. ಶಾಲೆಯಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿದಾಗ ಉತ್ತಮ ಸಂಸ್ಕಾರಯುಕ್ತ ಬದುಕು ಕಟ್ಟಿಕೊಳ್ಳಲು ಸಾಧ್ಯವಿದೆ. ಆದ್ದರಿಂದ ನಾವೆಲ್ಲರೂ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಬದ್ಧರಾಗಬೇಕು. ಶಿಕ್ಷಣದಿಂದ ವಂಚಿತರಾಗುವ ಬಡ ಮಕ್ಕಳಿಗೆ ಶಿಕ್ಷಣವನ್ನು ಒದಗಿಸಲು ನಾವೆಲ್ಲ ಮುಂದಾಗಬೇಕು. ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ನಾವೆಲ್ಲ ಬದ್ಧರಾಗಬೇಕು. ಆದರೆ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ಒಗ್ಗಟಿನ ಜೊತೆಗೆ ಬಡ ಮಕ್ಕಳಿಗೆ ಶಿಕ್ಷಣ ನೀಡುವುದನ್ನೇ ಗುರಿಯಾಗಿಸಿ ಕೊಂಡಾಗ ಮಾತ್ರ ಶಿಕ್ಷಣ ಸಂಸ್ಥೆಗಳು ಅಭಿವೃದ್ಧಿ ಹೊಂದಲು ಸಾಧ್ಯ. ಭವಾನಿ ಫೌಂಡೇಶನ್ ಕಳೆದ ನಾಲ್ಕೈದು ವರ್ಷಗಳಿಂದ ಶಾಲೆಯ ಅಭಿವೃದ್ಧಿಗೆ ತುಂಬಾ ಶ್ರಮಿಸುತ್ತಿದೆ. ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವುದು ನಮ್ಮ ಫೌಂಡೇಶನ ಮುಖ್ಯ ಗುರಿಯಾಗಿದೆ ಎಂದು ಶಿಕ್ಷಣ ಪ್ರೇಮಿ, ಭವಾನಿ ಫೌಂಡೇಶನ್ ಮುಂಬಯಿ ಸಂಸ್ಥಾಪಕಾಧ್ಯಕ್ಷ ದಡ್ಡಂಗಡಿ ಚೆಲ್ಲಡ್ಕ ಕುಸುಮೋದರ ಡಿ. ಶೆಟ್ಟಿ ನುಡಿದರು.

ಅವರು ಜೂನ್ 24ರ ಬುಧವಾರದಂದು ಅಂಬರ್‌ನಾಥ್ ಪಶ್ಚಿಮದ ಎಸ್. ನಿಜಲಿಂಗಪ್ಪ ಕನ್ನಡ ಶಾಲೆಯ ಆವರಣದಲ್ಲಿ ಭವಾನಿ ಫೌಂಡೇಶನ್ ವತಿಯಿಂದ ನಿರ್ಮಿಸಲಾಗಿರುವ ಸುಸಜ್ಜಿತ ಶೌಚಾಲಯದ ಉದ್ಘಾಟನೆ ಮತ್ತು ಶಾಲಾ ಪರಿಕರಗಳ ವಿತರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ಕರ್ನಾಟಕ ವೈಭವ ಸಂಸ್ಥೆ ಸಂಚಾಲಿತ ಈ ಶಾಲೆಗೆ ಪುನಶ್ಚೇತನ ನೀಡುವಲ್ಲಿ ಭವಾನಿ ಫೌಂಡೇಶನ್‌ನ ಪ್ರತಿಯೊಬ್ಬ ಸದಸ್ಯರ ಸಹಕಾರ ಅನನ್ಯವಾಗಿದೆ. ದೂರದಲ್ಲಿ ನೆಲೆಸಿದರೂ ಇಲ್ಲಿಗೆ ಬಂದು ಶಾಲೆಯ ಅಭಿವೃದ್ಧಿಗೆ ಶ್ರಮಿಸುತ್ತಿರುವ ನಾವು ಯಾವುದೇ ರೀತಿಯ ಪ್ರತಿಫಲಾಪೇಕ್ಷೆ ಇಲ್ಲದೆ ನಿಸ್ವಾರ್ಥ, ನಿಶ್ಕಲ್ಮಶವಾಗಿ ಸೇವೆ ಸಲ್ಲಿಸುತ್ತಿದ್ದೇವೆ. ಇಂದಿನ ಶಾಲೆಯ ಮಕ್ಕಳು ಮೂಲಭೂತ ಸೌಕರ್ಯಗಳ ಕೊರತೆಯಿಂದ ಅನುಭವಿಸಿದ ನೋವಿನ ಮನದಾಳದ ಮಾತುಗಳನ್ನು ಕೇಳಿ ಹೃದಯ ತುಂಬಿ ಬಂದಿದೆ. ಭವಿಷ್ಯದಲ್ಲಿ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ನಮ್ಮ ಸಂಸ್ಥೆ ಸದಾ ಬದ್ಧವಾಗಿದೆ. ಆದ್ದರಿಂದ ಸಂಸ್ಥೆಯ ಆಡಳಿತ ಮಂಡಳಿ ಈ ಶಾಲೆಯನ್ನು ಜ್ಞಾನ ದಾಸೋಹದ ಬೃಹತ್ ಸಂಸ್ಥೆಯಾಗಿ ಬೆಳಕಾಗಿಸುವಲ್ಲಿ ನಮ್ಮೊಂದಿಗೆ ಸಹಕರಿಸಬೇಕು. ನಾನು ದೇವರನ್ನು ನಂಬುತ್ತೇನೆ ಹಾಗೂ ಮಕ್ಕಳ ರೂಪದಲ್ಲಿ ನಾನು ದೇವರನ್ನು ಕಾಣುತ್ತೇನೆ ಎಂದು ಹೇಳಿ ಕುಸುಮೋದರ ಶೆಟ್ಟಿ ಮಕ್ಕಳಿಗೆ ಶುಭವನ್ನು ಹಾರೈಸಿದರು.

> ಮಕ್ಕಳು ಕಳೆದ ಹಲವಾರು ವರ್ಷಗಳಿಂದ ಶೌಚಾಲಯ ಇಲ್ಲದೆ ಬಹಳಷ್ಟು ಕಷ್ಟ ಪಡುತ್ತಿದ್ದರು. ಭವಾನಿ ಫೌಂಡೇಶನ್ ಇದನ್ನು ಮನಗಂಡು ಸುಸಜ್ಜಿತ ಶೌಚಾಲಯವನ್ನು ನಿರ್ಮಿಸಿಕೊಟ್ಟಿದೆ. ಶಾಲೆಯ ಸರ್ವ ಅಭಿವೃದ್ಧಿ ಪರ ಕಾರ್ಯಗಳಿಗೆ ನಮ್ಮೆಲ್ಲರ ಸಹಕಾರ ಸದಾ ಇದೆ. ಮಕ್ಕಳಿಗೆ ಶಿಕ್ಷಣವನ್ನು ನೀಡಿದಾಗ ಮಾತ್ರ ಭವಿಷ್ಯದಲ್ಲಿ ಅವರ ಕುಟುಂಬ ಬೆಳಗಲು ಸಾಧ್ಯ ಈ ನಿಟ್ಟಿನಲ್ಲಿ ನಾವೆಲ್ಲರೂ ಒಂದಾಗಿ ಶಾಲೆಯ ಅಭಿವೃದ್ಧಿಗೆ ಶ್ರಮಿಸೋಣ. **- ಜೀಕ್ಷಿತ್ ಕೆ. ಶೆಟ್ಟಿ (ನಿರ್ದೇಶಕ : ಭವಾನಿ ಗ್ರೂಪ್)**
>
> ಶಿಕ್ಷಣ ಎಂಬುದು ಎಂದಿಗೂ ಅಳಿಯದ ಸಂಪತ್ತು. ಆದ್ದರಿಂದ ಮಕ್ಕಳು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಕುಸುಮೋದರ ಶೆಟ್ಟಿ ಸಾರಥ್ಯದ ಭವಾನಿ ಫೌಂಡೇಶನ್ ಈ ಶಾಲೆಯ ಪಾಲಿಗೆ ಕಲ್ಪವೃಕ್ಷವಾಗಿದೆ. ಫೌಂಡೇಶನ್ ಮತ್ತು ಶಾಲಾಡಳಿತ ಮಂಡಳಿಯ ಸಹಕಾರದಿಂದ ಮುಂಬರುವ ದಿನಗಳಲ್ಲಿ ಈ ಶಾಲೆಯು ಉನ್ನತ ಮಟ್ಟದ ಶಿಕ್ಷಣ ಸಂಸ್ಥೆಯಾಗಿ ಬೆಳಗಬೇಕು. ಇಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಕನ್ನಡ ಮಾಧ್ಯಮದ ಮಕ್ಕಳನ್ನು ಹಾಗೂ ಮಕ್ಕಳಿಗೆ ಸಹಕರಿಸುತ್ತಿರುವ ಕುಸುಮೋದರ ಶೆಟ್ಟಿ ಅವರ ಶಿಕ್ಷಣ ಪ್ರೇಮವನ್ನು ಕಂಡು ಮನತುಂಬಿ ಬಂತು. **- ಪ್ರಭಾಕರ್ ಆರ್. ಶೆಟ್ಟಿ ಇನ್ನ (ಉಪ ಕಾರ್ಯಾಧ್ಯಕ್ಷ : ಬಂಟರ ಸಂಘ ಮುಂಬಯಿಯ ಡೊಂಬಿವಲಿ ಪ್ರಾದೇಶಿಕ ಸಮಿತಿ)**
>
> ಆರು ದಶಕಗಳ ಹಿಂದೆ ಪ್ರಾರಂಭವಾದ ಕರ್ನಾಟಕ ವೈಭವ ಸಂಸ್ಥೆಯ ಅಧ್ಯಕ್ಷನಾಗಿ ಸುಮಾರು ಎರಡು ದಶಕಗಳ ಕಾಲ ಆಶ್ರಮಿಸಿದ್ದೇನೆ. 5 ವರ್ಷಗಳ ಹಿಂದೆ ಈ ಶಾಲೆಯನ್ನು ದತ್ತು ಸ್ವೀಕರಿಸಿದ ಕುಸುಮೋದರ ಡಿ. ಶೆಟ್ಟಿ ಸಾರಥ್ಯದ ಭವಾನಿ ಫೌಂಡೇಶನ್ ಶಾಲೆಯಲ್ಲಿ ಅಮೂಲಾಗ್ರ ಬದಲಾವಣೆ ತಂದಿರುವುದು ಅಭಿನಂದನೆಯವಾಗಿದೆ. ಈ ಶಾಲೆಯಲ್ಲಿ ಶಿಕ್ಷಣ ಪಡೆಯುವ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ನನ್ನ ಸಹಕಾರ ನಿರಂತರವಾಗಲಿದೆ. ಇಂದಿನ ಆಡಳಿತ ಮಂಡಳಿ ಸಂಸ್ಥೆ ಮತ್ತು ಶಾಲೆಯ ಹಿತ ದೃಷ್ಟಿಯಿಂದ ಕಾರ್ಯ ನಿರ್ವಹಿಸಬೇಕು. **- ಆರ್. ಬಿ. ಹೆಬ್ಬಳ್ಳಿ (ಮಾಜಿ ಅಧ್ಯಕ್ಷ : ಕರ್ನಾಟಕ ವೈಭವ ಸಂಸ್ಥೆ ಅಂಬರ್‌ನಾಥ್)**

ಭವಾನಿ ಫೌಂಡೇಶನ್‌ನ ಗೌರವ ಪ್ರಧಾನ ಕಾರ್ಯದರ್ಶಿ ಶಿಖಾ ಅಭಿಷೇಕ್ ಶೆಟ್ಟಿ ಮಾತನಾಡಿ, ಈ ಶಿಕ್ಷಣ ಸಂಸ್ಥೆಗೆ ಆಗಮಿಸಲು ತುಂಬಾ ಸಂತೋಷವಾಗುತ್ತದೆ. ನಮ್ಮ ತಂದೆಯವರ ಸೇವಾ ಗುಣಗಳನ್ನು ಮೈಗೂಡಿಸಿಕೊಂಡು ಸಮಾಜ ಪರ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದೇನೆ ಎಂದು ಹೇಳಲು ಹೆಮ್ಮೆಯಾಗುತ್ತಿದೆ. ಈ ಶಾಲೆಗೆ ಬಂದಾಗ ಮಕ್ಕಳ ನಿಸ್ವಾರ್ಥ ಪ್ರೀತಿ, ಗೌರವ, ಅಭಿಮಾನವನ್ನು ಕಂಡಾಗ ಮನ ತುಂಬಿ ಬರುತ್ತದೆ. ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ಕೆ ನಮ್ಮ ಸಹಕಾರ ಸದಾ ಇದೆ ಎಂದರು.

ಭವಾನಿ ಫೌಂಡೇಶನ್ ಟ್ರಸ್ಟ್ ಉಪಾಧ್ಯಕ್ಷ ಧರ್ಮಪಾಲ ಯು. ದೇವಾಡಿಗ ಮಾತನಾಡಿ, ಕುಸುಮೋದರ ಶೆಟ್ಟಿಯವರ ಶಿಕ್ಷಣ ಕ್ಷೇತ್ರದ ಸಾಧನೆಯನ್ನು ಕಾಣಬೇಕಾದರೆ ಈ ಶಾಲೆಗೆ ಬರಬೇಕು. ಆರ್ಥಿಕವಾಗಿ ಹಿಂದುಳಿದ ಮಕ್ಕಳ ಆಶಾಕಿರಣವಾಗಿ ಭವಾನಿ ಫೌಂಡೇಶನ್ ಶ್ರಮಿಸುತ್ತಿರುವುದನ್ನು ಕಂಡಾಗ ತುಂಬಾ ಸಂತೋಷವಾಗುತ್ತದೆ. ಇಂತಹ ಸಮಾಜ ಪರ ಕೆಲಸಗಳಿಗೆ ಎಲ್ಲರ ಸಹಕಾರದ ಅಗತ್ಯವಿದೆ. ಶಾಲಾ ಆಡಳಿತ ಸಮಿತಿಯ ಸಹಕಾರದಿಂದ ಈ ಶಿಕ್ಷಣ ಸಂಸ್ಥೆಯು ಮತ್ತಷ್ಟು ಅಭಿವೃದ್ಧಿಯನ್ನು ಕಾಣುವಂತಾಗಲಿ ಎಂದರು.

ಭವಾನಿ ಫೌಂಡೇಶನ್ ಗೌರವ ಕೋಶಾಧಿಕಾರಿ ನವೀನ್ ಶೆಟ್ಟಿ ಮಾತನಾಡಿ, ಶಾಲೆಯ ಮಕ್ಕಳು ಶೌಚಾಲಯ ಇಲ್ಲದೆ 14 ವರ್ಷ ಅನುಭವಿಸಿದ ವನವಾಸ ಇಂದು ಕೊನೆಗೊಂಡಿದೆ ಎಂಬ ಭಾವನೆ ನನ್ನದು. ಮಕ್ಕಳ ಉಜ್ವಲ ಭವಿಷ್ಯದ ದೃಷ್ಟಿಯಲ್ಲಿ ಟ್ರಸ್ಟಿನ ಅನೇಕ ಯೋಚನೆಗಳು ಯೋಜನೆಗಳಾಗಿ ರೂಪಾಂತರಗೊಂಡು ಯಶಸ್ವಿಯಾಗಬೇಕಾಗಿದ್ದು ತಮ್ಮೆಲ್ಲರ ಪ್ರೋತ್ಸಾಹ ಸದಾ ನಮ್ಮೊಂದಿಗಿರಲಿ. ನಾವೆಲ್ಲರೂ ಒಂದಾಗಿ ಒಗ್ಗಟ್ಟಿನಿಂದ ಸಂಸ್ಥೆಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯೋಣ ಎಂದರು.

ಭವಾನಿ ಫೌಂಡೇಶನ್‌ನ ಸದಸ್ಯ ಕರ್ನೂರು ಮೋಹನ್ ರೈ ಮಾತನಾಡಿ, ಕುಸುಮೋದರ ಡಿ. ಶೆಟ್ಟಿ ಅವರ ಸಾರಥ್ಯದ ಭವಾನಿ ಫೌಂಡೇಶನ್ ಟ್ರಸ್ಟ್ ಶಿಕ್ಷಣ ಒಂದು ಸೇವೆಯನ್ನಾಗಿಸಿಕೊಂಡು ಕಾರ್ಯ ನಿರ್ವಹಿಸುತ್ತಿದೆ. ಬದುಕಿನ ಹೆಚ್ಚು ದಿನಗಳನ್ನು ಕಷ್ಟದಲ್ಲಿ ಕಳೆದ ಕುಸುಮೋದರ ಶೆಟ್ಟಿಯವರಿಗೆ ಬಡತನ ಹಾಗೂ ಶಿಕ್ಷಣದ ಮಹತ್ವ ಚೆನ್ನಾಗಿ ಗೊತ್ತಿದೆ. ಶಾಲಾಡಳಿತ ಸಮಿತಿ ಉತ್ತಮ ರೀತಿಯಲ್ಲಿ ಸ್ಪಂದಿಸಿದ್ದಲ್ಲಿ ಈ ಶಿಕ್ಷಣ ಸಂಸ್ಥೆಯು ಇನ್ನಷ್ಟು ಅಭಿವೃದ್ಧಿಯನ್ನು ಹೊಂದಲಿದೆ ಎಂದರು.

ಈ ಸಂದರ್ಭದಲ್ಲಿ ಅತಿಥಿ ಗಣ್ಯರುಗಳನ್ನು ಸಂಸ್ಥೆಯ ವತಿಯಿಂದ ಗೌರವಿಸಲಾಯಿತು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ವೈಭವ ಸಂಸ್ಥೆಯ ಅಧ್ಯಕ್ಷ ತಿಲಕ್ ಭಲವಾದಿ ಮಾತನಾಡಿ, ಶಾಲೆಯ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ನಾವೆಲ್ಲರೂ ಸಹಕರಿಸುವುದಾಗಿ ಭರವಸೆ ನೀಡಿ ಭವಾನಿ ಫೌಂಡೇಶನ್ ಶಾಲೆಯ ಅಭಿವೃದ್ಧಿಗೆ ಮಾಡುತ್ತಿರುವ ಸೇವೆಗೆ ಕೃತಜ್ಞತೆಯನ್ನು ಸಲ್ಲಿಸಿದರು.

ಶಾಲೆಯ ಅನೇಕ ಮಕ್ಕಳು ಶಾಲೆಯಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲದೆ ಅನುಭವಿಸಿದ ನೋವನ್ನು ವ್ಯಕ್ತಪಡಿಸಿ ಭವಾನಿ ಫೌಂಡೇಶನ್ ನಿರ್ಮಿಸಿದ ಸುಸಜ್ಜಿತ ಶೌಚಾಲಯಕ್ಕೆ ಕೃತಜ್ಞತೆಯನ್ನು ಸಲ್ಲಿಸಿದರು. ಮಕ್ಕಳ ಪ್ರಾರ್ಥನೆಯೊಂದಿಗೆ ಗಣ್ಯರು ದೀಪ ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶಾಲೆಯ ಮುಖ್ಯಾಧ್ಯಾಪಕಿ ಅನಿತಾ ರಾಜೊಳ್ಳಿ ಸ್ವಾಗತಿಸಿ ಪ್ರಾಥಮಿಕವಾಗಿ ಮಾತನಾಡಿದರು. ಗಣ್ಯರು ಮಕ್ಕಳಿಗೆ ಶಾಲಾ ಪರಿಕರಗಳನ್ನು ವಿತರಿಸಿದರು. ಮಕ್ಕಳಿಂದ ಸ್ವಾಗತ ನೃತ್ಯ ನಡೆಯಿತು. ಡೊಂಬಿವಲಿ ಪಶ್ಚಿಮ ವಿಭಾಗ ಸಾರ್ವಜನಿಕ ನವರಾತ್ರಿ ಉತ್ಸವ ಮಂಡಳಿಯ ಅಧ್ಯಕ್ಷ ಗೋಪಾಲ್ ಶೆಟ್ಟಿ, ಕರ್ನಾಟಕ ವೈಭವ ಸಂಸ್ಥೆಯ ಕಾರ್ಯದರ್ಶಿ ಬಸವಂತ ಪೂಜಾರಿ ಇತರ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕಾರಿ ಸಮಿತಿಯ ಸದಸ್ಯರು ಶಾಲೆಯ ಶಿಕ್ಷಕ ವೃಂದ, ಶಿಕ್ಷಕೇತರ ಸಿಬ್ಬಂದಿ ಹಾಗೂ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಶಿಕ್ಷಕ ಬಿ. ಎನ್. ಬಿರಾಜದಾರ ಕಾರ್ಯಕ್ರಮ ನಿರೂಪಿಸಿದರು. ಮಲ್ಲಿನಾಥ ಮಣೋರ ಹೊಂದಿಸಿದರು.

ಬಂಟರ ಸಂಘ ಮುಂಬಯಿ : ಮೀರಾ-ಭಾಯಂದರ್ ಪ್ರಾದೇಶಿಕ ಸಮಿತಿಯಿಂದ ಇಂದು ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿ ವತಿಯಿಂದ ಶೈಕ್ಷಣಿಕ ಧನ ಸಹಾಯ ವಿತರಣೆ ಮತ್ತು ದತ್ತು ಸ್ವೀಕಾರ



ಪ್ರವೀಣ್ ಭೋಜ ಶೆಟ್ಟಿ, ನರೇಂದ್ರ ಮೆಹ್ತಾ, ವಿಶ್ವನಾಥ ಶೆಟ್ಟಿ, ಅರವಿಂದ ಎ. ಶೆಟ್ಟಿ, ಡಾ. ದಿವಾಕರ ಶೆಟ್ಟಿ, ರವೀಂದ್ರ ಶೆಟ್ಟಿ, ಡಾ। ಭಾಸ್ಕರ್ ಶೆಟ್ಟಿ, ಡಾ. ಅರುಣೋದಯ ರೈ



ಡಾ. ಎನ್. ಎ. ಹೆಗ್ಡೆ, ಹಸ್ಮುಖ್ ಗೆಲೋಟ್, ಉದಯ ಎಂ. ಶೆಟ್ಟಿ, ಭಾಸ್ಕರ್ ಶೆಟ್ಟಿ, ಸಂಪತ್ ಶೆಟ್ಟಿ, ವಸಂತಿ ಎಸ್. ಶೆಟ್ಟಿ, ವೃಷಭ್ ಶೆಟ್ಟಿ, ಮಧುಕರ್ ಶೆಟ್ಟಿ, ರಾಜೇಶ್ ಶೆಟ್ಟಿ

ಮೀರಾರೋಡ್, ಜೂ. 27- ಬಂಟರ ಸಂಘ ಮುಂಬಯಿ, ಸಮಾಜ ಸೇವೆಯಲ್ಲಿ ಒಂದು ಶತಮಾನವನ್ನು ಸಮೀಪಿಸುತ್ತಾ, ವಿದ್ಯೆಯಿಂದ ನಮ್ಮವರು ವಂಚಿತರಾಗಬಾರದೆ ಎಂಬ ಉದ್ದೇಶದಿಂದ ಎರಡು ರಾತ್ರಿ ಶಾಲೆಗಳನ್ನು ಪ್ರಾರಂಭಿಸಿ, ಇಂದು ಮೂರು ಶಿಕ್ಷಣ ಸಂಸ್ಥೆಗಳನ್ನು ಪೊವ್ವಾ, ಕುರ್ಲಾ ಹಾಗೂ ಉಪನಗರ ಬೊರಿವಲಿಯಲ್ಲಿ ಹೊಂದಿದೆ.

ಬಂಟರ ಸಂಘ ಮುಂಬಯಿಯ ಸಮಾಜ ಕಲ್ಯಾಣ ಸಮಿತಿ ಆಶ್ರಯದಲ್ಲಿ ದಿ. ವಾಸು ಕೆ. ಶೆಟ್ಟಿ ಸ್ಮರಣಾರ್ಥ ಚರಿಷ್ಮಾ ಬಿಲ್ಡರ್ಸ್ ಲಿಮಿಟೆಡ್ ಕಾರ್ಯಾಧ್ಯಕ್ಷ ಮತ್ತು ಆಡಳಿತ ನಿರ್ದೇಶಕ, ಮಹಾದಾನಿ ಸುಧೀರ್ ವಿ. ಶೆಟ್ಟಿ ಪ್ರಾಯೋಜಕತ್ವದಲ್ಲಿ ವಾರ್ಷಿಕ ಸಮಾಜ ಕಲ್ಯಾಣ ಮೆಗಾ ಆರ್ಥಿಕ ಸಹಾಯ ವಿತರಣಾ ಕಾರ್ಯಕ್ರಮದ ಭವ್ಯ ಸಮಾರಂಭವು ಜೂನ್ 6ರ ಶನಿವಾರದಂದು ಬೆಳಿಗ್ಗೆ ಕುರ್ಲಾ ಪೂರ್ವ ಬಂಟರ ಭವನದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಗೃಹದಲ್ಲಿ, ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ಮತ್ತು ಪದಾಧಿಕಾರಿಗಳ ಮಾರ್ಗದರ್ಶನದಲ್ಲಿ, ಸಂಘದ ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಡಾ. ದಿವಾಕರ ಶೆಟ್ಟಿ ಇಂದ್ರಾಳಿ ಮತ್ತು ಪದಾಧಿಕಾರಿಗಳ ನೇತೃತ್ವದಲ್ಲಿ ಸುಮಾರು ಎರಡೂವರೆ ಕೋಟಿ ರೂಪಾಯಿಗೂ ಮಿಕ್ಕಿ ಧನ ಸಹಾಯವನ್ನು ವಿತರಿಸುವ ಮೂಲಕ ಅದ್ದೂರಿ ಚಾಲನೆಯನ್ನು ನೀಡಿತು.

ಜೂ. 28ರ ಆದಿತ್ಯವಾರ ಅಪರಾಹ್ನ 2:00 ಗಂಟೆಗೆ ಸರಿಯಾಗಿ ಬಂಟರ ಸಂಘ ಮುಂಬಯಿಯ ಮೀರಾ-ಭಾಯಂದರ್ ಪ್ರಾದೇಶಿಕ ಸಮಿತಿಯ ಆಶ್ರಯದಲ್ಲಿ ಶೈಕ್ಷಣಿಕ ಧನ ಸಹಾಯ ಮತ್ತು ದತ್ತು ಸ್ವೀಕಾರ ಕಾರ್ಯಕ್ರಮವನ್ನು ಸ್ವಾಮಿ ನಾರಾಯಣ ಮಂದಿರ ಹಾಲ್, ಸೆಕ್ಟರ್-10, ಶಾಂತಿ ನಗರ, ಮೀರಾರೋಡ್ ಪೂರ್ವ ಇಲ್ಲಿ ಬಂಟರ ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಲಿದೆ.

ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಗುತ್ತಿನಾರ್ ರವೀಂದ್ರ ಶೆಟ್ಟಿ ಕೊಟ್ರಪಾಡಿಗುತ್ತು ಮುಂದಾಳತ್ವದಲ್ಲಿ, ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಡಾ. ದಿವಾಕರ ಶೆಟ್ಟಿ ಇಂದ್ರಾಳಿ ಮಾರ್ಗದರ್ಶನದಲ್ಲಿ ಹಾಗೂ ಪ್ರಾದೇಶಿಕ ಸಮಿತಿಯ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಸಂಪತ್ ಶೆಟ್ಟಿ ಪಂಜದಗುತ್ತು ನೇತೃತ್ವದಲ್ಲಿ ನಡೆಯಲಿರುವ ಸಭಾ ಕಾರ್ಯಕ್ರಮದಲ್ಲಿ ಗೌರವ ಅತಿಥಿಗಳಾಗಿ, ಸಚಿವ ನರೇಂದ್ರ ಮೆಹ್ತಾ, ಹಸ್ಮುಖ್ ಗೆಲೋಟ್ ಸ್ಥಾಯಿ ಸಮಿತಿ ಸಭಾಪತಿ ಎಂ.ಬಿ.ಎಂ.ಸಿ, ಜಾಗತಿಕ ಬಂಟರ ಸಂಘದ ಉಪಾಧ್ಯಕ್ಷ ಕರ್ನಿರೆ ವಿಶ್ವನಾಥ ಶೆಟ್ಟಿ, ಅಲಿಯನ್ಸ್ ಇನ್ಫ್ರಾಸ್ಟ್ರಕ್ಚರ್ ಆ್ಯಂಡ್ ರಿಲೊಟರ್ಸ್ ಪ್ರೈವೇಟ್ ಲಿ.ನ ಸಿ.ಎಮ್.ಡಿ ಅರವಿಂದ ಎ. ಶೆಟ್ಟಿ , ಸಾಯಿಬಾಬಾ ಹಾಸ್ಪಿಟಲ್ ಭಾಯಂದರ್ ಆಡಳಿತ ನಿರ್ದೇಶಕ ಡಾ. ಎನ್. ಎ. ಶೆಟ್ಟಿ, ಮೀರಾರೋಡ್ ದೀಪಕ್ ಆರ್ಥೋಪೆಡಿಕ್ ಹಾಸ್ಪಿಟಲ್‌ನ ಆಡಳಿತ ನಿರ್ದೇಶಕ ಡಾ। ಭಾಸ್ಕರ್ ಶೆಟ್ಟಿ, ರೈ ಸುಮತಿ ಎಜ್ಯುಕೇಶನ್ ಟ್ರಸ್ಟ್‌ನ ಆಡಳಿತ ನಿರ್ದೇಶಕ ಡಾ. ಅರುಣೋದಯ ರೈ, ಬಂಟ್ಸ್ ಫೋರಮ್ ಮೀರಾ-ಭಾಯಂದರ್‌ನ ಅಧ್ಯಕ್ಷ ಉದಯ ಎಂ. ಶೆಟ್ಟಿ ಮಲ್ಲಾರ್‌ಬೀಡು ಆಗಮಿಸಲಿರುವರು.

ಇದೇ ಸಂದರ್ಭದಲ್ಲಿ ಬಂಟರ ಸಂಘದ ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಸಮಿತಿಯಲ್ಲಿ ಕಾರ್ಯಾಧ್ಯಕ್ಷ ಇಂದ್ರಾಳಿ ದಿವಾಕರ್ ಶೆಟ್ಟಿ, ತಿರುಪತಿ ಕ್ಯಾಟರರ್ಸ್ ಮಾಲಕ ರಾಜೇಶ್ ಶೆಟ್ಟಿಯವರನ್ನು ಮತ್ತು ಭೂಮಿ ಹಾಸ್ಪಿಟಾಲಿಟಿ ಪ್ರೈ. ಲಿ. ಆಡಳಿತ ನಿರ್ದೇಶಕ ಮಧುಕರ್ ಶೆಟ್ಟಿಯವರುಗಳನ್ನು ಸನ್ಮಾನಿಸಲಾಗುವುದು ಮತ್ತು ಸಮಾಜ ಸೇವೆಯಲ್ಲಿ ಗುರುತಿಸಿಕೊಂಡಂತಹ ಹಿರಿಯ ನಾಗರಿಕರಾದ ಯಶೋಧಾ ಲಕ್ಷ್ಮಣ ಶೆಡ್ತಿ ಹಾಗೂ ವಿಜಯಾ ಶೆಡ್ತಿಯವರಿಗೆ ಗೌರವ ಪುರಸ್ಕಾರವನ್ನು ನೀಡಿ ಅಭಿನಂದಿಸಲಾಗುವುದು.

ಈ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಮಹೇಶ್ ಎಸ್. ಶೆಟ್ಟಿ, ಗೌ. ಪ್ರ. ಕಾರ್ಯದರ್ಶಿ ಡಾ. ಆರ್. ಕೆ. ಶೆಟ್ಟಿ, ಗೌ. ಪ್ರ. ಕೋಶಾಧಿಕಾರಿ ಸಿಎ ರಮೇಶ್ ಬಿ. ಶೆಟ್ಟಿ, ಜೊತೆ ಕಾರ್ಯದರ್ಶಿ ಗಿರೀಶ್ ಆರ್. ಶೆಟ್ಟಿ ತೆಳ್ಳಾರ್, ಜತೆ ಕೋಶಾಧಿಕಾರಿ ಶಶಿಧರ್ ಕೆ. ಶೆಟ್ಟಿ ಇನ್ನಂಜೆ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಚಿತ್ರಾ ಆರ್. ಶೆಟ್ಟಿ, ಯುವ ವಿಭಾಗದ ಕಾರ್ಯಾಧ್ಯಕ್ಷ ಸವಿನ್ ಜೆ. ಶೆಟ್ಟಿ, ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಸಮಿತಿಯ ಉಪ ಕಾರ್ಯಾಧ್ಯಕ್ಷ ಸುಬ್ಬಯ್ಯ ಎ. ಶೆಟ್ಟಿ, ಕಾರ್ಯದರ್ಶಿ ಸಿ. ಎಸ್. ಉತ್ತಮ ಶೆಟ್ಟಿ, ಕೋಶಾಧಿಕಾರಿ ಜಯಪ್ರಕಾಶ್ ಶೆಟ್ಟಿ, ಪಶ್ಚಿಮ ವಲಯದ ಸಮನ್ವಯಕ ಖಾಂದೇಶ್ ಭಾಸ್ಕರ್ ಶೆಟ್ಟಿ ಉಪಸ್ಥಿತರಿರುವರು.

> 
>
> ಮೀರಾ - ಭಾಯಂದರ್ ಪ್ರಾದೇಶಿಕ ಸಮಿತಿಯು ಸ್ಥಾಪನೆಯಾದ ಸಮಯದಿಂದಲೂ ಸಮಿತಿಯಲ್ಲಿ ವಿಶೇಷ ಕಾಳಜಿ ವಹಿಸಿ, ಸ್ಥಳೀಯ ಬಂಟ ಬಾಂಧವರ ಉನ್ನತಿಗಾಗಿ ಶ್ರಮ ಹಾಗೂ ಆರ್ಥಿಕವಾಗಿ ಸ್ಥಳೀಯ ಸಮಿತಿಯ ಬೆನ್ನೆಲುಬಾಗಿ ನಿಂತವರೇ ಗಿರೀಶ್ ಶೆಟ್ಟಿ ತೆಳ್ಳಾರ್‌ರವರು. ಸಮಿತಿಯ ಯುವ ವಿಭಾಗದ ಕಾರ್ಯಾಧ್ಯಕ್ಷರಾಗಿ, ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಕಾರ್ಯಾವಧಿಯಲ್ಲಿ 10ನೇ ವರ್ಷದ ಸಂಭ್ರಮದಲ್ಲಿ ಮೀರಾರೋಡಿನಲ್ಲಿ ಇದೇ ಪ್ರಥಮ ಎಂಬಂತೆ ಸುಮಾರು 6,000 ಕ್ಕೂ ಹೆಚ್ಚಿನ ಸಮಾಜ ಬಾಂಧವರನ್ನು ಒಗ್ಗೂಡಿಸಿ ಅದ್ದೂರಿಯ ಕಾರ್ಯಕ್ರಮವನ್ನು ಏರ್ಪಡಿಸಿದ ಸಂದರ್ಭವು ಮೀರಾರೋಡಿನ ಸಮಾಜ ಬಾಂಧವರಲ್ಲಿ ಇಂದಿಗೂ ಅವಿಸ್ಮರಣೀಯವಾಗಿದೆ. ಸದ್ಯದ ಕಾರ್ಯಾಧ್ಯಕ್ಷರಾದ ಗುತ್ತಿನಾರ್ ರವೀಂದ್ರ ಶೆಟ್ಟಿ ಕೊಟ್ರಪಾಡಿಯವರ ನೇತೃತ್ವದಲ್ಲಿ ನಡೆದ ಪ್ರತೀ ಕಾರ್ಯಕ್ರಮಗಳಲ್ಲಿ ಸ್ಥಳೀಯರನ್ನು ಒಗ್ಗೂಡಿಸುವುದು ಮಾತ್ರವಲ್ಲದೆ ವಿಶೇಷ ರೀತಿಯ ಆರ್ಥಿಕ ಧನ ಸಹಾಯವನ್ನಿತ್ತು ನಡೆದ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಗೊಳಿಸುವಲ್ಲಿ ಗಿರೀಶ್ ಶೆಟ್ಟಿ ತೆಳ್ಳಾರ್‌ರವರ ಸಮಾಜ ಬಾಂಧವರಿಗಾಗಿ ಮಾಡಿದ ಸಮರ್ಥನೀಯ ಸೇವೆಯನ್ನು ಎಂದೂ ಮರೆಯಲಾಗದು.

ಈ ಬೃಹತ್ ಸಮಾಜ ಸೇವಾ ಕಾರ್ಯಕ್ರಮದ ಯಶಸ್ಸಿಗೆ ಪ್ರಾದೇಶಿಕ ಸಮಿತಿಯ ಸಂಚಾಲಕ ಶಿವಪ್ರಸಾದ್ ಆರ್. ಶೆಟ್ಟಿ ಮಾಣಿಗುತ್ತು, ಉಪ ಕಾರ್ಯಾಧ್ಯಕ್ಷ ಅರವಿಂದ ಎ. ಶೆಟ್ಟಿ, ಕಾರ್ಯದರ್ಶಿ ಕಿಶೋರ್‌ಕುಮಾರ್ ಕುತ್ಯಾರು, ಕೋಶಾಧಿಕಾರಿ ಶಂಕರ್ ಶೆಟ್ಟಿ, ಜೊತೆ ಕಾರ್ಯದರ್ಶಿ ರಮೇಶ್ ಶೆಟ್ಟಿ ಸಿದ್ಧಕಟ್ಟೆ, ಜೊತೆ ಕೋಶಾಧಿಕಾರಿ ಜಗದೀಶ್ ಶೆಟ್ಟಿ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ವಸಂತಿ ಎಸ್. ಶೆಟ್ಟಿ ಹಾಗೂ ಪದಾಧಿಕಾರಿಗಳು, ಯುವ ವಿಭಾಗದ ಕಾರ್ಯಾಧ್ಯಕ್ಷ ವೃಷಭ್ ಶೆಟ್ಟಿ ಹಾಗೂ ಪದಾಧಿಕಾರಿಗಳು, ಪ್ರಾದೇಶಿಕ ಸಮಿತಿಯ ಶಿಕ್ಷಣ ಮತ್ತು ಕಲ್ಯಾಣ ಸಮಿತಿಯ ಉಪ ಕಾರ್ಯಾಧ್ಯಕ್ಷ ದಾಮೋದರ್ ಶೆಟ್ಟಿ, ಕಾರ್ಯದರ್ಶಿ ಸುಶ್ಮಿತಾ ಶೆಟ್ಟಿ, ಕೋಶಾಧಿಕಾರಿ ಅಮಿತಾ ಬಿ. ಶೆಟ್ಟಿ, ಪ್ರಾದೇಶಿಕ ಸಮಿತಿಯ ಎಲ್ಲಾ ಪದಾಧಿಕಾರಿಗಳು, ಸಲಹೆಗಾರರು ಹಾಗೂ ಸಮಿತಿಯ ಸರ್ವ ಸದಸ್ಯರು ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ.

ಸಮಾಜ ಬಾಂಧವರ ಕಷ್ಟಗಳಿಗೆ ಸ್ಪಂದಿಸುವ ಈ ಕಾರ್ಯಕ್ರಮದಲ್ಲಿ ಸುಮಾರು 400 ಮಿಕ್ಕಿ ವಿದ್ಯಾರ್ಥಿಗಳಿಗೆ, ವಿಧವೆಯರಿಗೆ, ವಿಕಲಾಂಗರಿಗೆ ಧನ ಸಹಾಯವನ್ನು ಚೆಕ್ ಮೂಲಕ ಅಪರಾಹ್ನ 2:00 ಗಂಟೆಯಿಂದ 3:00 ಗಂಟೆಯವರೆಗೆ ವಿತರಿಸಲಾಗುವುದು. ಎಲ್ಲಾ ಫಲಾನುಭವಿಗಳು ಸ್ವತಃ ಬಂದು ತಮ್ಮ ಚೆಕ್‌ನ್ನು ತೆಗೆದುಕೊಳ್ಳಬೇಕು. ಅದಲ್ಲದೆ ಜೊತೆಯಲ್ಲಿ ಅರ್ಜಿಯ ಸ್ಲಿಪನ್ನು ತೆಗೆದುಕೊಂಡು ಬರತಕ್ಕದ್ದು.

ಈ ಎಲ್ಲಾ ಸವಲತ್ತುಗಳನ್ನು ಸ್ವೀಕರಿಸಲಿರುವ 18 ವರ್ಷದ ವಿದ್ಯಾರ್ಥಿಗಳು ಸ್ವಯಂ ಹಾಗೂ 18 ವರ್ಷದ ಕಿರಿಯ ವಿದ್ಯಾರ್ಥಿಗಳ ಪಾಲಕರು ಬಂಟರ ಸಂಘದ ಸದಸ್ಯರಾಗಿರಬೇಕು. ಈಗಾಗಲೇ ಸದಸ್ಯರಾಗಿರುವವರಿಗೆ ತಮ್ಮ ಸದಸ್ಯತ್ವದ ಕಾರ್ಡುಗಳು ತಲುಪದೇ ಇದ್ದರೆ, ಅದನ್ನು ಪಡೆದುಕೊಳ್ಳಲು ಕೊಟ್ರಪಾಡಿ ಗುತ್ತಿನಾರ್ ರವೀಂದ್ರ ಶೆಟ್ಟಿ (90044 00481) ಹಾಗೂ ಸಂಪತ್ ಶೆಟ್ಟಿ ಪಂಜದಗುತ್ತು (92234 81670) ಅವರನ್ನು ಕೂಡಲೇ ಸಂಪರ್ಕಿಸಬೇಕಾಗಿ ವಿನಂತಿಸಲಾಗಿದೆ. ಬಂಟರ ಸಂಘ ಮುಂಬಯಿಯ ಮೀರಾ-ಭಾಯಂದರ್ ಪ್ರಾದೇಶಿಕ ಸಮಿತಿಯ ಎಲ್ಲಾ ಸಮಾಜ ಬಾಂಧವರು ಕಾರ್ಯಕ್ರಮಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕಾರ್ಯದರ್ಶಿ ಕೆ. ಕಿಶೋರ್‌ಕುಮಾರ್ ಕುತ್ಯಾರ್ ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.

ಬಿಲ್ಲವರ ಎಸೋಸಿಯೇಶನ್ ಮುಂಬಯಿ: ನವಿಮುಂಬಯಿ ಸಮುದಾಯ ಭವನದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಯೋಗದಿಂದ ನಾವು ಆರೋಗ್ಯದಿಂದಿರಬಹುದು - ವಿಶ್ವನಾಥ ಕೆ. ಪೂಜಾರಿ





ನವಿಮುಂಬಯಿ, ಜೂ. 27- ಇಂದಿನ ನಮ್ಮ ಬಿಡುವಿಲ್ಲದ ಜೀವನದಲ್ಲಿ ಪ್ರತಿನಿತ್ಯ ಯೋಗ ಮಾಡುವುದರಿಂದ ನಮ್ಮ ಆರೋಗ್ಯವನ್ನು ಕಾಪಾಡಲು ಸಾಧ್ಯ. ದಿನನಿತ್ಯ ಕನಿಷ್ಠ ಅರ್ಧಗಂಟೆ ಯೋಗ ಮಾಡಿದರೆ ನಾವು ಆರೋಗ್ಯದಿಂದಿರಬಹುದು ಎಂದು ಬಿಲ್ಲವರ ಎಸೋಸಿಯೇಶನ್ ಮುಂಬಯಿ ಇದರ ನವಿಮುಂಬಯಿ ಸ್ಥಳೀಯ ಕಚೇರಿಯ ಕಾರ್ಯಾಧ್ಯಕ್ಷ ವಿಶ್ವನಾಥ ಕೆ. ಪೂಜಾರಿ ನುಡಿದರು.

ಅವರು ನವಿಮುಂಬಯಿ ಸ್ಥಳೀಯ ಕಚೇರಿಯ ವತಿಯಿಂದ ಬಿಲ್ಲವ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಜೂ. 21ರ ಆದಿತ್ಯವಾರದಂದು ಯೋಗ ದಿನಾಚರಣೆ ಸಂದರ್ಭದಲ್ಲಿ ಸಭಿಕರನ್ನುದ್ದೇಶಿಸಿ ಮಾತನಾಡಿದರು. ನಾವು ಇಂತಹ ಕಾರ್ಯಕ್ರಮಗಳನ್ನು ನಮ್ಮ ಸಮಾಜದ ಸದಸ್ಯರ ಪ್ರಯೋಜನಕ್ಕಾಗಿ ಆಯೋಜಿಸುತ್ತಿದ್ದೇವೆ. ಇನ್ನು ಮುಂದಿನ ದಿನಗಳಲ್ಲಿ ಇದೇ ರೀತಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಪಾಲ್ಗೊಂಡು ಇಂತಹ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ವಿನಂತಿಸಿದರು.

ಅಂದು ಬೆಳಿಗ್ಗೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ನಿಮಿತ್ತ ನವಿಮುಂಬಯಿಯ ಸಮುದಾಯ ಭವನದಲ್ಲಿ ಯೋಗ ಶಿಕ್ಷಕರಾದ ನಿಲೀಮಾ ಕುಮಾರ್, ಸಂಧ್ಯಾ ರಾಮ್, ಸುಷ್ಮಾ ಗುಂಡ್, ಲತಾ ಬನ್ನಾಸೆ ಯೋಗದ ಸುಲಭ ಆಸನಗಳನ್ನು ಕಲಿಸಿ, ಯೋಗದ ಮಹತ್ವ ಹಾಗೂ ದಿನಚರಿಯಲ್ಲಿ ನಿರಂತರ ಯೋಗ ಮಾಡುವುದರಿಂದ ಆಗುವ ಪ್ರಯೋಜನವನ್ನು ವಿವರಿಸಿ ತಿಳಿಸಿದರು.

ಯೋಗ ಕಾರ್ಯಕ್ರಮದಲ್ಲಿ ಕೇಂದ್ರ ಕಚೇರಿಯ ಉಪಾಧ್ಯಕ್ಷ ಹಾಗೂ ನವಿಮುಂಬಯಿ ಸ್ಥಳೀಯ ಕಚೇರಿಯ ಪ್ರತಿನಿಧಿಯಾದ ಪುರುಷೋತ್ತಮ ಎಸ್. ಕೋಟ್ಯಾನ್, ಮಾಜಿ ಗೌ. ಕಾರ್ಯಾಧ್ಯಕ್ಷ ಧರ್ಮದರ್ಶಿ ರಮೇಶ್ ಎಂ. ಪೂಜಾರಿ, ಕಾರ್ಯದರ್ಶಿ ಹರೀಶ್ ಪೂಜಾರಿ ಹಾಗೂ ಸಮಿತಿ ಸದಸ್ಯರುಗಳಾದ ಸುಧಾಕರ ಸಿ. ಪೂಜಾರಿ, ಉದಯಕುಮಾರ್ ಸುವರ್ಣ, ಕಿಶೋರ್ ಪೂಜಾರಿ, ರತ್ನಾ ಪೂಜಾರಿ, ನವೀನ್ ಸುವರ್ಣ, ಉಮಾ ಪೂಜಾರಿ ಮುಂತಾದವರು ಭಾಗವಹಿಸಿದ್ದರು.



ಇತಿಹಾಸ ಪ್ರಸಿದ್ಧ ಪುರಾಣ ಪುಣ್ಯ ಕ್ಷೇತ್ರವಾಗಿರುವ ಮಂಗಳೂರಿನ ಮಹತೋಭಾರ ಶ್ರೀ ಸೋಮನಾಥೇಶ್ವರ ಮಹಿಷಮರ್ದಿನಿ ದೇವಸ್ಥಾನ ಮಂಗಳೂರು ಇದರ ಜೀರ್ಣೋದ್ಧಾರ ನಿಮಿತ್ತ ಸಮಾಲೋಚನಾ ಸಭೆಯು ಜೂ. 28ರ ರವಿವಾರ ಸಂಜೆ 4:00ಕ್ಕೆ ಕುರ್ಲಾ ಬಂಟರ ಸಂಘದ ಎನೆಕ್ಸ್ ಬಿಲ್ಡಿಂಗ್‌ನ ಎರಡನೇ ಮಹಡಿಯಲ್ಲಿ ಜೀರ್ಣೋದ್ಧಾರ ಮುಂಬಯಿ ಸಮಿತಿಯ ಆಶ್ರಯದಲ್ಲಿ ಜರಗಲಿದ್ದು ಈ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿರುವ ದಕ್ಷಿಣ ಕನ್ನಡ ಮಂಗಳೂರು ಲೋಕಸಭಾ ಕ್ಷೇತ್ರದ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟರವರು ಜೂ. 27ರ ಶನಿವಾರದಂದು ಮುಂಬಯಿ ಬಂದಾಗ, ವಿಮಾನ ನಿಲ್ದಾಣದಲ್ಲಿ ಅವರನ್ನು ಜೀರ್ಣೋದ್ಧಾರ ಮುಂಬಯಿ ಸಮಿತಿಯ ಅಧ್ಯಕ್ಷ, ಪನ್ವೇಲ್‌ನ ಜನಪ್ರಿಯ ನಗರ ಸೇವಕ ಸಂತೋಷ್ ಜಿ. ಶೆಟ್ಟಿ ಮತ್ತು ಸಮಿತಿಯ ಪದಾಧಿಕಾರಿಗಳು, ಸದಸ್ಯರು ಸೇರಿ ಶಾಲು ಹೊದಿಸಿ, ಹೂಗುಚ್ಛ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಜೀರ್ಣೋದ್ಧಾರ ಮುಂಬಯಿ ಸಮಿತಿಯ ನವೀನ್ ಶೆಟ್ಟಿ ಇನ್ನ ಬಾಳಿಕೆ, ಸೌರಭ್ ಶೆಟ್ಟಿ, ಗಿರಿಧರ್ ಶೆಟ್ಟಿ, ದಿವಾಕರ್ ಶೆಟ್ಟಿ, ಅಶೋಕ್ ಶೆಟ್ಟಿ ಎಲ್.ಪಿ., ಶರತ್ ಹೆಗ್ಡೆ, ಸುಭಾಷ್ ಶೆಟ್ಟಿ, ಸಂದೀಪ್ ಶೆಟ್ಟಿ, ಲೋಕೇಶ್ ಶೆಟ್ಟಿ, ಸಚಿನ್ ಶೆಟ್ಟಿ, ಅಭಿಷೇಕ್ ರೈ ಮೊದಲಾದವರು ಉಪಸ್ಥಿತರಿದ್ದರು.

ಕರ್ನಾಟಕ ಸೇವಾ ಸಂಘ ಮೊಹನೆ : ಇಂದು 69ನೇ ವಾರ್ಷಿಕ ಮಹಾಸಭೆ



ಹರೀಶ್ ಶೆಟ್ಟಿ

ಕಲ್ಯಾಣ್, ಜೂ. 27- ಕರ್ನಾಟಕ ಸೇವಾ ಸಂಘ ಮೊಹನೆ ಇದರ 69ನೇ ವಾರ್ಷಿಕ ಮಹಾಸಭೆಯು ಜೂ. 28ರ ರವಿವಾರ ಸಂಜೆ 5:00ಕ್ಕೆ ಸರಿಯಾಗಿ ಮೊಹನೆ ಅಂಬಿವಲಿಯ ಆರ್. ಎಸ್. ಡೈರಿ ಫಾರ್ಮ್‌ನ ಹತ್ತಿರದ ನಾಕೋರ್ಪ್ ಸೊಸೈಟಿಯ ಎದುರುಗಡೆ ಇರುವ ಸಂಘದ ಸಭಾಂಗಣದಲ್ಲಿ ಸಂಘದ ಅಧ್ಯಕ್ಷ ಶಿಮುಂಜೆ ಪರಾರಿ ಹರೀಶ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಲಿದೆ. ಈ ಮಹಾಸಭೆಯಲ್ಲಿ ವಾರ್ಷಿಕ ವರದಿ ವಾಚನ, ವಾರ್ಷಿಕ ಲೆಕ್ಕಪತ್ರ ಮಂಡನೆ, ಭಜನಾ ಮಂಡಳಿಯ ಲೆಕ್ಕಪತ್ರ ಮಂಡನೆ, ಮಹಿಳಾ ವಿಭಾಗ ಮತ್ತು ಯುವ ವಿಭಾಗದ ವಾರ್ಷಿಕ ಕಾರ್ಯ ಚಟುವಟಿಕೆಗಳ ಮಾಹಿತಿ ಹಾಗೇ 2026ರಿಂದ 2028ರ ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಮತ್ತು ಪ್ರಸ್ತುತ ವರ್ಷದಲ್ಲಿ ನಡೆಯಲಿರುವ ಕಾರ್ಯಕ್ರಮಗಳ ಬಗ್ಗೆ ಚರ್ಚೆ ಹಾಗೂ ಇನ್ನಿತರ ವಿಷಯಗಳ ಪ್ರಸ್ತಾವಣೆಯನ್ನು ಮಾಡಲಾಗುವುದು. ಎಲ್ಲಾ ಸದಸ್ಯ ಬಾಂಧವರು ಸಭೆಯಲ್ಲಿ ಉಪಸ್ಥಿತರಿದ್ದು ತಮ್ಮ ಅಮೂಲ್ಯ ಸಲಹೆ, ಸೂಚನೆ, ಮಾರ್ಗದರ್ಶನವನ್ನು ನೀಡಿ ಸಹಕರಿಸಬೇಕಾಗಿ ಆಡಳಿತ ಮಂಡಳಿಯ ಅನುಮತಿಯ ಮೇರೆಗೆ ಕರ್ನಾಟಕ ಸೇವಾ ಸಂಘ ಮೊಹನೆ ಇದರ ಗೌರವ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ಎಸ್. ಪೂಜಾರಿ ವಿನಂತಿಸಿಕೊಂಡಿದ್ದಾರೆ.

ಬಹುಮುಖಿ ಅಂತಾರಾಷ್ಟ್ರೀಯ ಕಾವ್ಯ ಸಮ್ಮಿಲನ 2026ಕ್ಕೆ ಮುಂಬಯಿನಿಂದ ಕವಿ ಗೋಪಾಲ ತ್ರಾಸಿಗೆ ಆಹ್ವಾನ

ಮುಂಬಯಿ,ಜೂ.27 - ಬಹುಮುಖಿ ಅಂತಾರಾಷ್ಟ್ರೀಯ ಕಾವ್ಯ ಸಮ್ಮಿಲನ - 2026 'ಒಂದು ಜಗತ್ತು ಹಲವು ದನಿಗಳು' ಎಂಬ ನಂಬಿಕೆಯಲ್ಲಿ ಜೂನ್, 26, 27, 28 ರಂದು ಬೆಂಗಳೂರಿನ ಅರಮನೆ ರಸ್ತೆಯ ಕೊಂಡಜ್ಜಿ ಬಸಪ್ಪ ಸಭಾಂಗಣ ಇಲ್ಲಿ ಜರುಗಲಿದ್ದು,ಇದಕ್ಕೆ ಮುಂಬಯಿನಿಂದ ಕವಿ ಗೋಪಾಲ ತ್ರಾಸಿ ಅವರಿಗೆ ಆಹ್ವಾನ ನೀಡಲಾಗಿದೆ.



ಗೋಪಾಲ ತ್ರಾಸಿ

ಭಾರತವೂ ಸೇರಿ, ಇಸ್ರೇಲ್, ಈಜಿಪ್ಟ್, ಸಿಂಗಾಪುರ, ಕಝುಕಿಸ್ತಾನ್, ಈಕ್ವೆಡಾರ್ ಸೇರಿದಂತೆ ಹಲವು ದೇಶಗಳ ಕವಿಗಳು ಮತ್ತು ಭಾರತದ ವಿವಿಧ ರಾಜ್ಯಗಳ 14 ಭಾಷೆಗಳ ಕವಿಗಳು, ಸಾಹಿತ್ಯಿಕರು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

ಈ ಸಮ್ಮೇಳನವು ವಿವಿಧ ದೇಶಗಳು, ಭಾಷೆಗಳು ಮತ್ತು ಸಾಹಿತ್ಯ ಪರಂಪರೆಗಳನ್ನು ಪ್ರತಿನಿಧಿಸುವ ಕವಿಗಳು, ಲೇಖಕರು, ಅನುವಾದಕರು, ಸಂಪಾದಕರು, ಸಂಶೋಧಕರು ಮತ್ತು ಸಾಹಿತ್ಯಾಸಕ್ತರನ್ನು ಒಂದೇ ವೇದಿಕೆಗೆ ಕರೆ ತರುವ ಪ್ರಯತ್ನವಾಗಿದೆ.

ಅಂತಾರಾಷ್ಟ್ರೀಯ ಕವಿಗಳ ಭಾಗವಹಿಸುವಿಕೆ, ಭಾರತದ ವಿವಿಧ ಭಾಷೆಗಳ ಖ್ಯಾತ ಕವಿಗಳ ಉಪಸ್ಥಿತಿ,ಕಾವ್ಯ ವಾಚನ ಮತ್ತು ಸಾಹಿತ್ಯ ಸಂವಾದಗಳು,ಅನುವಾದ ಸಾಹಿತ್ಯ ಕುರಿತ ಚರ್ಚೆಗಳು,ವಿದ್ಯಾರ್ಥಿಗಳಿಗಾಗಿ ವಿಶೇಷ ಸಂವಾದ ಕಾರ್ಯಕ್ರಮಗಳು,ಸಾಂಸ್ಕೃತಿಕ ಕಾರ್ಯಕ್ರಮಗಳು, ಜಾಗತಿಕ ಸಾಹಿತ್ಯಿಕ ಸ್ನೇಹ ಮತ್ತು ಸಂವಹನ ಸಮ್ಮೇಳನದ ವಿಶೇಷತೆಗಳಾಗಿವೆ.

ಇಂದು ನಿರ್ಣಾಯಕ ಟಿ20 : ಐರ್ಲೆಂಡ್ ವಿರುದ್ಧ ಸರಣಿ ಸಮಬಲ ಸಾಧಿಸುವ ಒತ್ತಡದಲ್ಲಿ ಭಾರತ



ಬೆಲ್‌ಫಾಸ್ಟ್, ಜೂ. 27 - ಐರ್ಲೆಂಡ್ ವಿರುದ್ಧದ ಎರಡು ಪಂದ್ಯಗಳ ಸರಣಿಯ ಆರಂಭಿಕ ಪಂದ್ಯದಲ್ಲಿ ಆಘಾತಕಾರಿ ಸೋಲು ಅನುಭವಿಸಿದ ನಂತರ, ಭಾರತದ ಸ್ಟಾರ್‌ಬ್ಯಾಟಿಂಗ್ ಲೈನ್‌ಅಪ್ ನಾಳೆ ನಡೆಯಲಿರುವ ಎರಡನೇ ಮತ್ತು ನಿರ್ಣಾಯಕ ಟಿ20 ಅಂತಾರಾಷ್ಟ್ರೀಯ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡುವ ಒತ್ತಡದಲ್ಲಿದೆ.

ಶುಕ್ರವಾರ ನಡೆದ ಮೊದಲ ಟಿ20 ಅಂತಾರಾಷ್ಟ್ರೀಯ ಪಂದ್ಯದಲ್ಲಿ ನೂತನ ನಾಯಕ ಶ್ರೇಯಸ್ ಅಯ್ಯರ್ ನೇತೃತ್ವದ ವಿಶ್ವ ಚಾಂಪಿಯನ್ ತಂಡವನ್ನು ಸೋಲಿಸುವ ಮೂಲಕ ಐರ್ಲೆಂಡ್ ಇತಿಹಾಸ ಸೃಷ್ಟಿಸಿತು. ಟಿ20 ವಿಶ್ವಕಪ್ ಗೆದ್ದ ನಂತರ ತನ್ನ ಮೊದಲ ಪಂದ್ಯದಲ್ಲಿ ಭಾರತ ತಂಡವು 182 ರನ್‌ಗಳ ಗುರಿಯನ್ನು ಬೆನ್ನಟ್ಟುವಾಗ 148 ರನ್‌ಗಳಿಗೆ ಆಲೌಟ್ ಆಗಿತ್ತು. ಇದು ಯಾವುದೇ ಮಾದರಿಯಲ್ಲಿ ಭಾರತದ ವಿರುದ್ಧ ಐರ್ಲೆಂಡ್ ಪಡೆದ ಮೊದಲ ಗೆಲುವಾಗಿದೆ.

963 ದಿನಗಳ ನಂತರ ಅಯ್ಯರ್‌ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮರಳಿದ್ದು ಮತ್ತು ರಾಷ್ಟ್ರೀಯ ತಂಡದ ನಾಯಕನಾಗಿ ಅವರ ಆರಂಭವು ಅಷ್ಟೊಂದು ಉತ್ತಮವಾಗಿರಲಿಲ್ಲ. ಬುಧವಾರ ಚೆಸ್ಟರ್-ಲೆ-ಸ್ಟ್ರೀಟ್‌ನಲ್ಲಿ ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಸರಣಿ ಪ್ರಾರಂಭವಾಗುವ ಮೊದಲು ಅವರು ಐರ್ಲೆಂಡ್ ಪ್ರವಾಸವನ್ನು ಗೆಲುವಿನೊಂದಿಗೆ ಕೊನೆಗೊಳಿಸಲು ಎದುರು ನೋಡುತ್ತಿದ್ದಾರೆ.

ಭಾರತ ತಂಡಕ್ಕೆ ಎದುರಾದ ದೊಡ್ಡ ಸಮಸ್ಯೆಯೆಂದರೆ ಬ್ಯಾಟಿಂಗ್‌ನ ಕುಸಿತ . ಮೂರು ತಿಂಗಳ ಹಿಂದೆ ವಿಶ್ವಕಪ್‌ನ ಹೀರೋ ಆಗಿದ್ದ ಸಂಜು ಸ್ಯಾಮ್ಸನ್ ಕೇವಲ ನಾಲ್ಕು ಎಸೆತಗಳನ್ನು ಆಡಿದ ನಂತರ ಔಟಾದರು. ಇಶಾನ್ ಕಿಶನ್ ಮತ್ತು ಅಯ್ಯರ್ ಕೂಡ ಬ್ಯಾಟಿಂಗ್‌ನಲ್ಲಿ ಯಾವುದೇ ಮಹತ್ವದ ಕೊಡುಗೆ ನೀಡಲು ಸಾಧ್ಯವಾಗಲಿಲ್ಲ.

ಅಭಿಷೇಕ್ ಶರ್ಮಾ ತಮ್ಮ ಆಕ್ರಮಣಕಾರಿ ಆಟವನ್ನು ಮುಂದುವರಿಸಿ ಉತ್ತಮ ಆರಂಭ ನೀಡಿದರು, ಆದರೆ ಇನ್ನೊಂದು ತುದಿಯಿಂದ ಅವರಿಗೆ ಬೆಂಬಲ ದೊರೆಯಲಿಲ್ಲ. ಪವರ್‌ಪ್ಲೇ ನಂತರ ಅವರ ಔಟಾಗುವಿಕೆಯು ಭಾರತದ ಇನ್ನಿಂಗ್ಸ್‌ಗೆ ದೊಡ್ಡ ಹೊಡೆತವಾಗಿ ಪರಿಣಮಿಸಿತು. ಐರ್ಲೆಂಡ್‌ನ ಡೆಬ್ಯು ಆಟಗಾರರಾದ ಜೇ ಮುಂದ್ರಾ ಮತ್ತು ಮ್ಯಾಟ್ ಹೊಲ್ಲಾರ್ಡ್ ಭಾರತದ ಅಗ್ರ ಕ್ರಮಾಂಕವನ್ನು ಕೆಡವಿದರು. ಮುಂದ್ರಾ ತಮ್ಮ ಮೊದಲ ಎಸೆತದಲ್ಲೇ ಸ್ಯಾಮ್ಸನ್ ಅವರನ್ನು ಔಟ್ ಮಾಡಿದರೆ, ಹೊಲ್ಲಾರ್ಡ್ ಕಿಶನ್ ಮತ್ತು ಅಯ್ಯರ್ ಅವರನ್ನು ಔಟ್ ಮಾಡಿ ನಂತರ ವಾಷಿಂಗ್ಟನ್ ಸುಂದರ್‌ಅವರನ್ನು ಔಟ್ ಮಾಡಿದರು.

ತಿಲಕ್ ವರ್ಮಾ, ವಾಷಿಂಗ್ಟನ್ ಸುಂದರ್‌ಮತ್ತು ಶಿವಂ ದುಬೆ ಅವರಿಗೆ ರನ್ ರೇಟ್ ಒತ್ತಡ ಹೆಚ್ಚಾದ ಕಾರಣ ಇನ್ನಿಂಗ್ಸ್ ಅನ್ನು ಸ್ಥಿರಗೊಳಿಸಲು ಸಾಧ್ಯವಾಗಲಿಲ್ಲ. ಎರಡನೇ ಪಂದ್ಯದ ಫಲಿತಾಂಶವು ಭಾರತೀಯ ಬ್ಯಾಟ್ಸ್‌ಮನ್‌ಗಳು ಆತ್ಮವಿಶ್ವಾಸದ ಐರಿಶ್ ವೇಗದ ದಾಳಿಯನ್ನು ಹೇಗೆ ನಿಭಾಯಿಸುತ್ತಾರೆ ಎಂಬುದರ ಮೇಲೆ ಹೆಚ್ಚಾಗಿ ಅವಲಂಬಿತವಾಗಿರುತ್ತದೆ.

ಒಂದೇ ಸೋಲಿನ ನಂತರ ತಂಡದ ಆಡಳಿತ ಮಂಡಳಿ ಹೆಚ್ಚು ಚಿಂತೆ ಮಾಡುತ್ತಿಲ್ಲ. ಸೋಲಿನ ನಂತರ ಅಗ್ರ ಕ್ರಮಾಂಕದಲ್ಲಿ ಯಾವುದೇ ಬದಲಾವಣೆಯಾಗುವ ಸಾಧ್ಯತೆ ಕಡಿಮೆ ಇರುವುದರಿಂದ ಯುವ ಆಟಗಾರ ವೈಭವ್ ಸೂರ್ಯವಂಶಿ ತಮ್ಮ ಅವಕಾಶಕ್ಕಾಗಿ ಕಾಯಬೇಕಾಗುತ್ತದೆ. ಬೌಲಿಂಗ್ ವಿಭಾಗದಲ್ಲೂ ಕೆಲವು ಸಕಾರಾತ್ಮಕ ಅಂಶಗಳು ಕಂಡುಬಂದವು. ಗಾಯದಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿದ ಹರ್ಷಿತ್ ರಾಣಾ 24 ರನ್ ನೀಡಿ ಮೂರು ವಿಕೆಟ್ ಪಡೆದು ಉತ್ತಮ ಪ್ರದರ್ಶನ ನೀಡಿದರು. ಕೊನೆಯ ಓವರ್‌ಗಳಲ್ಲಿ ಅರ್ಶ್‌ದೀಪ್ ಸಿಂಗ್ ಮತ್ತು ಅಕ್ಷರ್‌ಪಟೇಲ್ ಕೂಡ ಉತ್ತಮವಾಗಿ ಬೌಲಿಂಗ್ ಮಾಡಿದರು.

ವಾಷಿಂಗ್ಟನ್ ಸುಂದರ್‌ಒಂದು ಓವರ್‌ನಲ್ಲಿ 19 ರನ್‌ಗಳು ಮತ್ತು ಪ್ರಸಿದ್ಧ್ ಕೃಷ್ಣ ನಾಲ್ಕು ಓವರ್‌ಗಳಲ್ಲಿ 57 ರನ್‌ಗಳು ನೀಡಿದ್ದರಿಂದ ತಂಡವು ಹೆಚ್ಚಿನ ಆಘಾತ ಅನುಭವಿಸಿತು. ಇನ್ನಿಂಗ್ಸ್‌ನ 17 ನೇ ಓವರ್‌ನಲ್ಲಿ ಕೃಷ್ಣ 27 ರನ್‌ಗಳನ್ನು ಬಿಟ್ಟುಕೊಟ್ಟರು.

ಐರ್ಲೆಂಡ್ ತಂಡದ ನಾಯಕ ಲೋರ್ಕನ್ ಟಕರ್‌50 ರನ್ ಗಳಿಸಿದರೆ, ಗ್ಯಾರೆತ್ ಡೆಲಾನಿ 49 ರನ್ ಗಳಿಸಿ ತಂಡ ದೊಡ್ಡ ಮೊತ್ತ ದಾಖಲಿಸಲು ನೆರವಾದರು. ಸರಣಿಯ ಮೊದಲ ಪಂದ್ಯದಲ್ಲಿ ಇತಿಹಾಸ ನಿರ್ಮಿಸಿದ ನಂತರ ಐರ್ಲೆಂಡ್ ಆತ್ಮವಿಶ್ವಾಸದಲ್ಲಿದೆ, ಆದರೆ ಭಾರತ ತಂಡವು ಸರಣಿಯನ್ನು ಕಳೆದುಕೊಳ್ಳುವ ಮುಜುಗರವನ್ನು ತಪ್ಪಿಸಲು ಮತ್ತು ಇಂಗ್ಲೆಂಡ್ ಪ್ರವಾಸಕ್ಕೆ ತಮ್ಮ ಸಿದ್ಧತೆಗಳನ್ನು ಬಲಪಡಿಸಲು ಬಯಸುತ್ತದೆ.

ಬೆಲ್‌ಫಾಸ್ಟ್‌ನಲ್ಲಿರುವ ಸಿವಿಲ್ ಸರ್ವಿಸ್ ಕ್ರಿಕೆಟ್ ಕ್ಲಬ್‌ನಲ್ಲಿರುವ ಪಿಚ್ ಪಂದ್ಯ ಮುಂದುವರೆದಂತೆ ಜಟಿಲವಾಗಲಿದೆ. ಇದು ಎರಡನೇ ಇನ್ನಿಂಗ್ಸ್‌ನಲ್ಲಿ ರನ್ ಗಳಿಸುವುದು ಸ್ವಲ್ಪ ಕಷ್ಟಕರವಾದ ಕೆಲಸವಾಗಿದೆ. ಮೇಲ್ಮೈಯ ನಿಧಾನಗತಿಯ ಸ್ವಭಾವ ಮತ್ತು ಡೆಕ್‌ನಲ್ಲಿ ಸಾಕಷ್ಟು ಬೌನ್ಸ್ ಇಲ್ಲದಿರುವುದರಿಂದ, ವೇಗಿಗಳು ಬ್ಯಾಟರ್‌ಗಳನ್ನು ದೊಡ್ಡ ಹೊಡೆತಗಳನ್ನು ಆಡಲು ಆಕರ್ಷಿಸುವ ಮೂಲಕ ಲಾಭ ಪಡೆಯಬಹುದು, ಆದರೆ ವಿಕೆಟ್‌ಗಳು ನಷ್ಟಕ್ಕೆ ಕಾರಣವಾಗಬಹುದು. ಟಾಸ್ ಗೆದ್ದ ತಂಡ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರೆ ಉತ್ತಮ.

ತಂಡಗಳು: ಭಾರತ: ಶ್ರೇಯಸ್ ಅಯ್ಯರ್(ನಾಯಕ), ತಿಲಕ್ ವರ್ಮಾ (ಉಪನಾಯಕ), 'ವಿ ಬಿಷ್ಣೋಯ್, ಅಭಿಷೇಕ್ ಶರ್ಮಾ, ಸೂರ್ಯಾಂಶ್ ಶೆಡ್ಗೆ, ಪ್ರಸಿದ್ಧ್ ಕೃಷ್ಣ, ಸಂಜು ಸ್ಯಾಮ್ಸನ್, ಅಕ್ಷರ್‌ಪಟೇಲ್, ಹರ್ಷಿತ್ ರಾಣಾ, ಇಶಾನ್ ಕಿಶನ್, ವಾಷಿಂಗ್ಟನ್ ಸುಂದರ್, ಅರ್ಷದೀಪ್ ಸಿಂಗ್, ಶಿವಂ ದುಬೆ, ಪ್ರಿನ್ಸ್ ಯಾದವ್ ವೈಭವ್ ಸೂರ್ಯವಂಶಿ.

ಐರ್ಲೆಂಡ್: ಲೋರ್ಕನ್ ಟಕರ್(ನಾಯಕ ಮತ್ತು ವಿಕೆಟ್ ಕೀಪರ್), ರಾಸ್ ಅಡೈರ್, ಬೆನ್ ಕ್ಯಾಲಿಟ್ಜ್, ಗರೆಥ್ ಡೆಲಾನಿ, ಜಾರ್ಜ್ ಡಾಕ್ರೆಲ್, ಸ್ಟೀಫನ್ ಡೊಹೆನಿ, ಮ್ಯಾಥ್ಯೂ ಹಂಫ್ರೀಸ್, ಗೇವಿನ್ ಹೋಯ್, ಮ್ಯಾಥ್ಯೂ ಹೊಲಾರ್ಡ್, ಲಿಯಾಮ್ ಮೆಕಾರ್ಥಿ, ಜೇ ಮುಂದ್ರಾ, ಹ್ಯಾರಿ ಟೆಕ್ಟರ್, ಟಿಮ್ ಟೆಕ್ಟರ್‌ರೂಬೆನ್ ವಿಲ್ಸನ್.

ಪಂದ್ಯಾರಂಭ : ಸಂಜೆ 6.00 ಕ್ಕೆ.

ಮಹಿಳಾ ಟಿ20 ವಿಶ್ವಕಪ್: ಇಂದು ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ ಮಾಡು ಇಲ್ಲವೇ ಮಡಿ ಪಂದ್ಯ



ಲಂಡನ್, ಜೂ. 27 - ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯ ಮತ್ತು ಕಳಪೆ ಫೀಲ್ಡಿಂಗ್‌ನಿಂದಾಗಿ ಇಲ್ಲಿಯವರೆಗೆ ನಿರೀಕ್ಷಿತ ಪ್ರದರ್ಶನ ನೀಡಲು ವಿಫಲವಾಗಿರುವ ಭಾರತ ತಂಡ, ಮಹಿಳಾ ಟಿ20 ವಿಶ್ವಕಪ್‌ನ ಸೆಮಿಫೈನಲ್‌ಗೆ ಪ್ರವೇಶಿಸಬೇಕಾದರೆ ನಾಳೆ ಇಲ್ಲಿ ಬಲಿಷ್ಠ ಆಸ್ಟ್ರೇಲಿಯಾ ತಂಡದ ವಿರುದ್ಧದ ಕೊನೆಯ ಗ್ರೂಪ್ ಎ ಪಂದ್ಯದಲ್ಲಿ ಆಟದ ಪ್ರತಿಯೊಂದು ವಿಭಾಗದಲ್ಲೂ ಉತ್ತಮ ಪ್ರದರ್ಶನ ನೀಡಬೇಕಾಗುತ್ತದೆ.

ಈ ಪಂದ್ಯ ಭಾರತ ತಂಡಕ್ಕೆ ಮಾಡು ಇಲ್ಲವೇ ಮಡಿ ಪರಿಸ್ಥಿತಿ ಎದುರಾಗಿದೆ. ಈ ಗುಂಪಿನ ಕೊನೆಯ ಎರಡು ಪಂದ್ಯಗಳು ಸೆಮಿಫೈನಲ್ ತಲುಪುವ ತಂಡಗಳನ್ನು ನಿರ್ಧರಿಸುತ್ತವೆ. ಈ ಪಂದ್ಯಗಳಲ್ಲಿ, ದಕ್ಷಿಣ ಆಫ್ರಿಕಾ (ಆರು ಅಂಕಗಳು) ಲಾರ್ಡ್ಸ್‌ನಲ್ಲಿ ಬಾಂಗ್ಲಾದೇಶ (ನಾಲ್ಕು) ತಂಡವನ್ನು ಎದುರಿಸಲಿದೆ, ನಂತರ ಭಾರತ (ಆರು) ಅಜೇಯ ಆಸ್ಟ್ರೇಲಿಯಾ (ಎಂಟು) ತಂಡವನ್ನು ಎದುರಿಸಲಿದೆ.

ಬಾಂಗ್ಲಾದೇಶ ವಿರುದ್ಧ ದಕ್ಷಿಣ ಆಫ್ರಿಕಾದ ಅದ್ಭುತ ದಾಖಲೆಯನ್ನು (12 ಪಂದ್ಯಗಳಲ್ಲಿ 9-2) ಗಮನಿಸಿದರೆ, ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಪಂದ್ಯವು ಕ್ವಾರ್ಟರ್ ಫೈನಲ್ ಪಂದ್ಯವಾಗುವ ನಿರೀಕ್ಷೆಯಿದೆ.

ಕಳೆದ ಬಾರಿ ಫೈನಲಿಸ್ಟ್ ದಕ್ಷಿಣ ಆಫ್ರಿಕಾ ನಿರೀಕ್ಷೆಯಂತೆ ಗೆದ್ದರೆ, ಭಾರತ ಅರ್ಹತೆ ಪಡೆಯಲು ಆಸ್ಟ್ರೇಲಿಯಾವನ್ನು ಸೋಲಿಸಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ, ಈ ಪಂದ್ಯದಲ್ಲಿನ ಸೋಲು ಪ್ರಸ್ತುತ ಏಕದಿನ ವಿಶ್ವ ಚಾಂಪಿಯನ್‌ನ ಭರವಸೆಯನ್ನು ಕೊನೆಗೊಳಿಸುತ್ತದೆ.

ಮತ್ತೊಂದೆಡೆ, ಆಸ್ಟ್ರೇಲಿಯಾ ತನ್ನ ಎಂಟು ಅಂಕಗಳು ಮತ್ತು 4.724 ರ ಅತ್ಯುತ್ತಮ ನೆಟ್ ರನ್ ರೇಟ್ ಹೊಂದಿದ್ದು ಸೋತರೂ ಮುನ್ನಡೆ ಸಾಧಿಸಬಹುದು. ದಕ್ಷಿಣ ಆಫ್ರಿಕಾ ವಿರುದ್ಧ ಬಾಂಗ್ಲಾದೇಶ ಗೆಲುವು ಭಾರತದ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ, ಏಕೆಂದರೆ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ತಂಡವು 2.268 ರ ನೆಟ್ ರನ್ ರೇಟ್ ದಕ್ಷಿಣ ಆಫ್ರಿಕಾದ ಪ್ರಸ್ತುತ 0.734 ಗಿಂತ ಉತ್ತಮವಾಗಿದ್ದರೂ ಸಹ ಅವರು ಸೋತರೂ ಸಹ ಅಂತಿಮ ನಾಲ್ಕರಲ್ಲಿ ಸ್ಥಾನ ಪಡೆಯಬಹುದು.

ಈ ಪಂದ್ಯವು ಭಾರತ ತಂಡದ ಉತ್ಸಾಹವನ್ನು ಪರೀಕ್ಷಿಸಲಿದೆ, ಏಕೆಂದರೆ ಪ್ರಸ್ತುತ ಪ್ರತಿಯೊಂದು ವಿಭಾಗದಲ್ಲೂ ಕೆಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಟೂರ್ನಿಯ ಆರಂಭದಲ್ಲಿ ಭಾರತ ತನ್ನ ಆರಂಭಿಕ ಬ್ಯಾಟರ್‌ಗಳ ಕಳಪೆ ಫಾರ್ಮ್ ಬಗ್ಗೆ ಚಿಂತಿತವಾಗಿತ್ತು. ಆರಂಭಿಕ ಜೋಡಿ ಸ್ಮೃತಿ ಮಂಧಾನ (167 ರನ್) ಮತ್ತು ಶಫಾಲಿ ವರ್ಮಾ (145) ಉತ್ತಮ ಪ್ರದರ್ಶನ ನೀಡಿದರು, ಆದರೆ ನಾಯಕಿ ಹರ್ಮನ್‌ಪ್ರೀತ್ (85) ಮತ್ತು ಜೆಮಿಮಾ ರೊಡ್ರಿಗಸ್ (58) ಅವರನ್ನು ಒಳಗೊಂಡ ಭಾರತೀಯ ಮಧ್ಯಮ ಕ್ರಮಾಂಕ ವಿಫಲವಾಯಿತು.

ಭಾರತಕ್ಕೆ ಮತ್ತೊಂದು ಪ್ರಮುಖ ಕಳವಳವೆಂದರೆ ಕಳಪೆ ಫೀಲ್ಡಿಂಗ್. ಕಳೆದ ಎರಡು ಪಂದ್ಯಗಳಲ್ಲಿ, ಅವರ ಆಟಗಾರ್ತಿಯರು ಆರು ಕ್ಯಾಚ್‌ಗಳನ್ನು ಕೈಬಿಟ್ಟಿದ್ದಾರೆ. ಇವುಗಳಲ್ಲಿ, ದಕ್ಷಿಣ ಆಫ್ರಿಕಾ ವಿರುದ್ಧದ ಒಂದು ಪಂದ್ಯ ದುಬಾರಿಯಾಗಿ ಪರಿಣಮಿಸಿತು, ಇದರಿಂದಾಗಿ ಸೋಲಿಗೆ ಕಾರಣವಾಯಿತು. ಆಸ್ಟ್ರೇಲಿಯಾ ವಿರುದ್ಧ ಇಂತಹ ತಪ್ಪುಗಳು ದುಬಾರಿಯಾಗಬಹುದು ಎಂದು ಮುಖ್ಯ ತರಬೇತುದಾರ ಅಮೋಲ್ ಮುಜುಂದಾರ್ ಮತ್ತು ನಾಯಕ ಹರ್ಮನ್ ಪ್ರೀತ್ ಅವರಿಗೆ ಚೆನ್ನಾಗಿ ತಿಳಿದಿದೆ.

ರಾಧಾ ಯಾದವ್ ಅವರನ್ನು ಅತ್ಯುತ್ತಮ ಫೀಲ್ಡರ್ ಎಂದು ಪರಿಗಣಿಸಲಾಗಿದೆ, ಆದರೆ ಅವರು ಮೂರು ಕ್ಯಾಚ್‌ಗಳನ್ನು ಕೈಬಿಟ್ಟಿದ್ದಾರೆ. ಅವರು ದಕ್ಷಿಣ ಆಫ್ರಿಕಾ ವಿರುದ್ಧ ಎರಡು ಕ್ಯಾಚ್‌ಗಳನ್ನು ಕೈಚೆಲ್ಲಿದರು.

ಏಕದಿನ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧದ ಗೆಲುವಿನಿಂದ ಭಾರತ ಖಂಡಿತವಾಗಿಯೂ ಸ್ಫೂರ್ತಿ ಪಡೆಯಲಿದೆ, ಅಲ್ಲಿ ಜೆಮಿಮಾ ಅವರ ಅದ್ಭುತ ಇನ್ನಿಂಗ್ಸ್ ಭಾರತಕ್ಕೆ ಅಂತಿಮ ಅಡ್ಡಿಯನ್ನು ನಿವಾರಿಸಲು ಮತ್ತು ಅವರ ಮೊದಲ ಜಾಗತಿಕ ಪ್ರಶಸ್ತಿಗೆ ಹಾದಿಯಲ್ಲಿ ಸಾಗಲು ಸಹಾಯ ಮಾಡಿತು.

ಬೌಲಿಂಗ್ ವಿಭಾಗದಲ್ಲಿ, ಶ್ರೀ ಚರಣಿ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ, ಇದುವರೆಗೆ ನಾಲ್ಕು ಪಂದ್ಯಗಳಲ್ಲಿ 12 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಆದರೆ ಅವರಿಗೆ ಇತರ ಬೌಲರ್‌ಗಳಿಂದ ಅರ್ಹವಾದ ಬೆಂಬಲ ಸಿಕ್ಕಿಲ್ಲ.

ಆಸ್ಟ್ರೇಲಿಯಾ ತನ್ನ ಕೌಶಲ್ಯದ ಬಗ್ಗೆ ವಿಶ್ವಾಸ ಹೊಂದಿದ್ದು, ಭಾರತದ ವಿರುದ್ಧ ಆಡುವಾಗ ಸೆಮಿಫೈನಲ್ ಮೇಲೆ ಕಣ್ಣಿಟ್ಟಿರುತ್ತದೆ.

ಫೋಬೆ ಲಿಚ್‌ಫೀಲ್ಡ್ ತಂಡಕ್ಕೆ ಮರಳಿರುವುದರಿಂದ ಆಸ್ಟ್ರೇಲಿಯಾ ತಂಡಕ್ಕೆ ಹೊಸ ಬಲ ಬಂದಿದೆ, ಏಕೆಂದರೆ ಅವರು ಭಾರತದ ವಿರುದ್ಧ ಬ್ಯಾಟಿಂಗ್ ಮಾಡಲು ಇಷ್ಟಪಡುತ್ತಾರೆ. ಈ ವಿಶ್ವಕಪ್‌ನಲ್ಲಿ ಅವರು ತಮ್ಮ ಕಾಲಿನ ಗಾಯದಿಂದಾಗಿ ಮೂರು ಪಂದ್ಯಗಳನ್ನು ತಪ್ಪಿಸಿಕೊಂಡಿದ್ದಾರೆ.

ತಂಡದ ಪ್ರದರ್ಶನ ನೋಡುವುದಾದರೆ ಆಸ್ಟ್ರೇಲಿಯಾವೇ ಗೆಲುವಿನ ಫೇವರಿಟ್ ಎನಿಸಿದೆ. ಎಲ್ಲಿಸ್ ಪೆರ್ರಿ, ಬೆತ್ ಮೂನಿ, ಆಶ್ಲಿ ಗಾರ್ಡನ್, ಜಾರ್ಜಿಯಾ ವೋಲ್ ಹೀಗೆ ಪಟ್ಟಿ ಬೆಳೆಯುತ್ತಲೇ ಸಾಗುತ್ತದೆ. ಇವರಲ್ಲಿ ಒಬ್ಬರು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಂತರೂ ಪಂದ್ಯದ ಗತಿಯೇ ಬದಲಾಗಬಹುದು. ಅದರಲ್ಲೂ ಟಾಸ್ ಗೆದ್ದರೆ ತಪ್ಪಿಯೂ ಬ್ಯಾಟಿಂಗ್ ಆಹ್ವಾನ ನೀಡಬಾರದು. ಏಕೆಂದರೆ ಆಸ್ಟ್ರೇಲಿಯಾ ಪ್ರಮುಖ ಗೇಮ್ ಪ್ಲ್ಯಾನ್ ದೊಡ್ಡ ಮೊತ್ತ ಪೇರಿಸಿ ಎದುರಾಳಿಯನ್ನು ಒತ್ತಡಕ್ಕೆ ಸಿಲುಕಿಸುವುದು. ಇತ್ತಂಡಗಳ ಮುಖಾಮುಖಿ ದಾಖಲೆ ನೋಡುವುದಾದರೆ ಈವರೆಗೆ 38 ಪಂದ್ಯಗಳನ್ನಾಡಿದ್ದು, ಆಸ್ಟ್ರೇಲಿಯಾ ಗರಿಷ್ಠ 27 ಪಂದ್ಯಗಳನ್ನು ಗೆದ್ದಿದೆ. ಭಾರತ ಕೇವಲ 9 ಪಂದ್ಯಗಳನ್ನು ಜಯಿಸಿದೆ. ಒಂದು ಪಂದ್ಯ ಟೈ ಮತ್ತು ರದ್ದುಗೊಂಡಿದೆ.

ತಂಡಗಳು ಇಂತಿವೆ:

ಭಾರತ: ಹರ್ಮನ್ಪ್ರೀತ್ ಕೌರ್(ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ), ಯಸ್ತಿಕಾ ಭಾಟಿಯಾ (ವಿಕೆಟ್ ಕೀಪರ್), ರಿಚಾ ಘೋಷ್ (ವಿಕೆಟ್ ಕೀಪರ್), ಜೆಮಿಮಾ ರೋಡ್ರಿಗಸ್, ಭಾರತಿ ಫುಲ್ಮಾಲಿ, ಶೆಫಾಲಿ ವರ್ಮಾ, ದೀಪ್ತಿ ಶರ್ಮಾ, ಕ್ರಾಂತಿ ಗೌಡ್, ರೇಣುಕಾ ಸಿಂಗ್ ಠಾಕೂರ್, ಪ್ರೇಮಾ ರಾವತ್, ಅರುಂಧತಿ ರೆಡ್ಡಿ, ನಂದಿನಿ ಶರ್ಮಾ, ಶ್ರೀ ಚರಣಿ, ರಾಧಾ ಯಾದವ್.

ಆಸ್ಟ್ರೇಲಿಯಾ: ಸೋಫಿ ಮೋಲಿನಿ (ನಾಯಕಿ), ಫೋಬೆ ಲಿಚ್ಫೀಲ್ಡ್, ಬೆತ್ ಮೂನಿ (ವಿಕೆಟ್ ಕೀಪರ್), ಜಾರ್ಜಿಯಾ ವೋಲ್, ತಹ್ಲಿಯಾ ಮೆಕ್ಗ್ರಾತ್ (ಉಪನಾಯಕಿ), ಆಶ್ಲೀ ಗಾರ್ಡ್ನರ್, ಕಿಮ್ ಗಾರ್ತ್, ಲೂಸಿ ಹ್ಯಾಮಿಲ್ಟನ್, ಗ್ರೇಸ್ ಹ್ಯಾರಿಸ್, ಅಲಾನಾ ಕಿಂಗ್, ಎಲ್ಲಿಸ್ ಪೆರ್ರಿ, ಅನ್ನಾಬೆಲ್ ಸದರ್ಲೆಂಡ್, ನಿಕೋಲಾ ಕ್ಯಾರಿ, ಮೇಗನ್ ಶಟ್, ಜಾರ್ಜಿಯಾ ವೇರ್ಹ್ಯಾಮ್. **ಪಂದ್ಯಾರಂಭ : ಸಂಜೆ 7.00 ಕ್ಕೆ.**

ಪ್ರೊ ಲೀಗ್ ಹಾಕಿ; ಪಾಕಿಸ್ತಾನ ವಿರುದ್ಧ 7-1 ಅಂತರದಿಂದ ಗೆದ್ದ ಭಾರತ

ಲಂಡನ್, ಜೂ.27 - ಎಫ್‌ಐಎಚ್ ಪುರುಷರ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಭಾರತ ತಂಡ ಬದ್ಧ ಎದುರಾಳಿ ಪಾಕಿಸ್ತಾನವನ್ನು 7-1 ಗೋಲುಗಳಿಂದ ಬಗ್ಗುಬಡಿಯುವ ಮೂಲಕ ದಶಕದ ಪ್ರಾಬಲ್ಯವನ್ನು ಮುಂದುವರೆಸಿತು. ಆರಂಭಿಕ ಪೆನಾಲ್ಟಿ-ಕಾರ್ನರ್ ಗೋಲು ಬಿಟ್ಟುಕೊಟ್ಟ ನಂತರ, ಸುಖ್‌ಜೀತ್ ಸಿಂಗ್, ಹರ್ಮನ್‌ಪ್ರೀತ್ ಸಿಂಗ್, ಜುಗ್ರಾಜ್ ಸಿಂಗ್, ಅಭಿಷೇಕ್, ರಾಜ್‌ಕುಮಾರ್‌ಪಾಲ್ ಮತ್ತು ದಿಲ್‌ಪ್ರೀತ್ ಸಿಂಗ್ ಅವರ ಗೋಲುಗಳೊಂದಿಗೆ ದೃಢವಾಗಿ ಪ್ರತಿಕ್ರಿಯಿಸಿತು.

ಇಂಗ್ಲೆಂಡ್ ವಿರುದ್ಧ ಭಾರತ ಶೂಟೌಟ್‌ನಲ್ಲಿ ಸೋತ 24 ಗಂಟೆಗಳಿಗಿಂತ ಕಡಿಮೆ ಅವಧಿಯಲ್ಲಿ ಈ ಗೆಲುವು ಬಂದಿತು ಮತ್ತು ವಾರದ ಆರಂಭದಲ್ಲಿ ಪಾಕಿಸ್ತಾನ ವಿರುದ್ಧ 4-3 ಅಂತರದ ಗೆಲುವಿನಿಂದ ಉಂಟಾದ ರಕ್ಷಣಾತ್ಮಕ ವೈಫಲ್ಯಗಳಿಗೆ ಪ್ರತೀಕಾರ ತೀರಿಸಿಕೊಂಡಿತು.

ಭಾರತ ತಂಡವು ಉತ್ತಮ ಡಿಫೆಂಡಿಂಗ್ ಹೊಂದಿದ್ದರೂ, ಮೊದಲ ಕ್ವಾರ್ಟರ್‌ನಲ್ಲಿ ಪಾಕಿಸ್ತಾನ ಮೊದಲ ಗೋಲು ಗಳಿಸಿತು. ಆರಂಭಿಕ ಮೂರು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲಾಗಿ ಪರಿವರ್ತಿಸಲು ಭಾರತ ವಿಫಲವಾದ ನಂತರ, 13ನೇ ನಿಮಿಷದಲ್ಲಿ ಪಾಕ್ ಗೋಲು ಬಾರಿಸಿತು. ಡಿಫೆಂಡರ್‌ಅಹ್ಮದ್ ನದೀಮ್ ಹೊರಬಿದ್ದ ನಂತರ ಪಾಕಿಸ್ತಾನದ ಪ್ರತಿರೋಧ ದುರ್ಬಲಗೊಂಡಿತು. ಮಂದೀಪ್ ಸಿಂಗ್ ಹಲವಾರು ಅಪಾಯಕಾರಿ ದಾಳಿಗಳನ್ನು ನಡೆಸಿ ಪದೇ ಪದೇ ಪೆನಾಲ್ಟಿ ಕಾರ್ನರ್‌ಗಳನ್ನು ಗೆದ್ದಿದ್ದರಿಂದ ಭಾರತ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿತು.

ಮೂರನೇ ಕ್ವಾರ್ಟರ್‌ನಲ್ಲಿ ಭಾರತ ಸಂಪೂರ್ಣವಾಗಿ ಹಿಡಿತ ಸಾಧಿಸಿತು. ಪಾಕಿಸ್ತಾನದ ಪೆನಾಲ್ಟಿ ಕಾರ್ನರ್‌ಅನ್ನು ಯಶಸ್ವಿಯಾಗಿ ರಕ್ಷಿಸಿಕೊಂಡ ನಂತರ, ಭಾರತವು ವೇಗವನ್ನು ಹೆಚ್ಚಿಸಿತು. ಅಂತಿಮ ಕ್ವಾರ್ಟರ್‌ನಲ್ಲಿ ಭಾರತವು ಆರಾಮದಾಯಕ ಮುನ್ನಡೆಯನ್ನು ಹೊಂದಿದ್ದರೂ ಸಹ ತನ್ನ ತೀವ್ರತೆಯನ್ನು ಕಾಯ್ದುಕೊಂಡಿತು. ಪಾಕಿಸ್ತಾನವು ಪುಟಿದೇಳುವ ಪ್ರಯತ್ನ ಮಾಡಿದರೂ ಭಾರತದ ರಕ್ಷಣಾ ಪಡೆಯ ಮುಂದೆ ಗೋಲು ಬಾರಿಸಲು ವಿಫಲವಾಯಿತು.



ಈ ಫಲಿತಾಂಶವು ಜೂನ್ 28 ರ ಭಾನುವಾರ ಇಂಗ್ಲೆಂಡ್ ವಿರುದ್ಧದ ಅಂತಿಮ ಪ್ರೊ ಲೀಗ್ ಪಂದ್ಯಕ್ಕೂ ಮುನ್ನ ಭಾರತಕ್ಕೆ ಅತ್ಯಗತ್ಯವಾದ ಉತ್ತೇಜನವನ್ನು ನೀಡುತ್ತದೆ. ಏಕೆಂದರೆ ಅವರು ಪಾಯಿಂಟ್ ಪಟ್ಟಿಯಲ್ಲಿ ಸ್ಪೇನ್‌ಗಿಂತ 17 ಅಂಕಗಳೊಂದಿಗೆ ಮುಂದಿದ್ದಾರೆ. ಮತ್ತೊಂದು ನಿರಾಶಾದಾಯಕ ಪ್ರವಾಸದ ನಂತರ ಪಾಕಿಸ್ತಾನದ ಋತುವಿನ ಮೊದಲ ಗೆಲುವಿನ ಹುಡುಕಾಟ ಮುಂದುವರೆದಿದೆ.

22nd Year Remembrance



Death: 28.6.2004

Shri Sadanand Appu Shetty (Powai)

Irvathur Malyalkatte House

ಆದರ್ಶ ನಡೆ-ನುಡಿಗಳಿಂದ ನಮ್ಮೆಲ್ಲರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿರುವ ತಾವು ನಮ್ಮನ್ನಗಲಿ ಇಂದಿಗೆ ವರುಷ 22 ಸಂದರೂ ನಿಮ್ಮ ಸವಿನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿಯೇ ಉಳಿದಿದೆ. ನಮ್ಮನ್ನಗಲಿರುವ ನಿಮ್ಮ ದಿವ್ಯಾತ್ಮಕ್ಕೆ ಪರಮಾತ್ಮನು ಚಿರಶಾಂತಿ-ಸದ್ಗತಿಯನ್ನು ಕರುಣಿಸಲೆಂದು ಶ್ರದ್ಧಾ-ಭಕ್ತಿಯಿಂದ ನಾವೆಲ್ಲರೂ ಪ್ರಾರ್ಥಿಸುವೆವು.

Deeply Missed & Fondly Remembered By :

Smt. Nalini S. Shetty (Wife)
Manoj S. Shetty (Son)
Priya M. Shetty (Daughter-in-law)
Manish S. Shetty (Son)
Divya M. Shetty (Daughter-in-law)
CA Pawan S. Shetty (Son)
CS Jyothi P. Shetty (Daughter-in-law)
Master Yuvaan Manoj Shetty (Grand Son)
Master Avyaan Pawan Shetty (Grand Son)
Ivisha Manish Shetty (Grand Daughter)
Relatives & Friends

Shraddhanjali



Smt. Bhavani Sheena Shetty
(Innanje Undaru Moodumane)
(Wife of Ulluruguthu Late Shri Sheena Shetty)

Death : 25.06.2026

Your kindness will always stay in our hearts forever.
Your presence will always remain in our hearts and thoughts.
May your departed soul rest in peace.

Deeply Missed & Fondly Remembered By

Mr. Vivek B. Shetty (Son-in-Law)
Mrs. Usha V. Shetty (Daughter)
(Meenakshi Bar and Restaurant, Goregaon (E), Mumbai)
Mr. Shridhar S. Shetty (Son)
Mrs. Subhashitha S. Shetty (Daughter-in-Law)
Mr. Navinkumar S. Shetty (Son)
Mrs. Deepashree N. Shetty (Daughter-in-Law)
Mr. Jeethesh S. Shetty (Son)
Mrs. Sangeeta J. Shetty (Daughter-in-Law)
Dr. Dishar V. Shetty, Manthan V. Shetty, Janesh S. Shetty, Dhithi N. Shetty, Dhyuti S. Shetty, Jivvit J. Shetty (Grand Children)